# ಬೀದರ್‌ನಲ್ಲಿ ನಡೆದ ಸಂಗೀತ ನೃತ್ಯೋತ್ಸವ ಸಂದರ್ಭದಲ್ಲಿ ವಿಚಾರ ಸಂಕಿರಣ

ದಿನಾಂಕ 4–8–93 ಹಾಗು 5–8–93

ಕರ್ನಾಟಕ ಸಂಗೀತ ನೃತ್ಯ ಆಕಾಡೆಮಿ
14/3, ನೃಪತುಂಗ ರಸ್ತೆ,
ಬೆಂಗಳೂರು 560 002

# ಬೀದರ್‌ನಲ್ಲಿ ನಡೆದ ಸಂಗೀತ ನೃತ್ಯೋತ್ಸವ ಸಂದರ್ಭದಲ್ಲಿ ವಿಚಾರ ಸಂಕಿರಣ.

ದಿನಾಂಕ 4-8-93

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
14/3 ನೃಪತುಂಗ ರಸ್ತೆ,
ಬೆಂಗಳೂರು 560 002.

ಮೊದಲನೆ ಮುದ್ರಣ – 1993

ಪ್ರಕಾಶಕರು

ರಿಜಿಸ್ಟ್ರಾರ್
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ,
14/3 ನೃಪತುಂಗ ರಸ್ತೆ ಬೆಂಗಳೂರು. 560002
ದೂರವಾಣಿ : 2215072

ಬೆಲೆ ರೂ. 10-00

ಮುದ್ರಕರು.
ಶ್ರೀರಂಗ ಪ್ರಿಂಟರ್ಸ್
ನಂ. 319, 5ನೇ ಕ್ರಾಸ್ ಗವೀಪುರಂ
ಬೆಂಗಳೂರು. 560019.

# ಅಧ್ಯಕ್ಷರ ನುಡಿ

ಬೀದರಿನಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ೧೯೯೩ನೇ ಆಗಸ್ಟ್ ನಾಲ್ಕು ಮತ್ತು ಐದು ಎರಡು ದಿನ ನಡೆಸಿದ ಸಂಗೀತ ನೃತ್ಯೋತ್ಸವದ ಅಂಗವಾಗಿ, ವಿಚಾರ ಸಂಕಿರಣವನ್ನು ಏರ್ಪಡಿಸಿತು. ಆ ಸಂದರ್ಭದಲ್ಲಿ ಪ್ರಬಂಧಕಾರರು ಮಂಡಿಸಿದ ವಿಷಯಗಳನ್ನು ಸಂಗ್ರಹಿಸಿ ಈ ಹೊತ್ತಿಗೆಯಲ್ಲಿ ಮುದ್ರಿಸಲಾಗಿದೆ. ಪ್ರಬಂಧಕಾರರು ಮಾಡಿದ ಭಾಷಣಗಳು ಆ ಉತ್ಸವಕ್ಕೆ ಮಾತ್ರ ಮೀಸಲಾಗಿರದೆ ಅವರ ಅನುಭವಗಳು ಎಲ್ಲರಿಗೂ ಮುಟ್ಟುವಂತಾಗಲೆಂಬ ಸದುದ್ದೇಶವೇ ಈ ಗ್ರಂಥ ಪ್ರಕಟಣೆಗೆ ಕಾರಣ. ಪ್ರಭಂಧಗಳನ್ನು ಮುದ್ರಿಸಲು ಹಸ್ತಪ್ರತಿಗಳನ್ನಿತ್ತು ಸಹಕರಿಸಿದ ಶ್ರೀಮತಿ ಜಯಶ್ರೀ ಗುತ್ತಲೆ, ಶ್ರೀಮತಿ ಯಶೋದಮ್ಮ ಸಿಪ್‌ಬಟ್ಟೆ, ಪ್ರೊ॥ ವೀರೇಂದ್ರ ಸಿಂದೆ, ಶ್ರೀ ಹನುಮಣ್ಣನಾಯಕ ದೊರೆ, ಪ್ರೊ॥ ಹೆಬ್ಬಾಳೆ ಜಗನ್ನಾಥ್ ಅವರಿಗೆ ಹಾಗೂ ಸಂಗೀತ ನೃತ್ಯ ಅಕಾಡೆಮಿ ರಿಜಿಸ್ಟ್ರಾರ್ ಶ್ರೀಮತಿ ದುರ್ಗಾ ಸಿ ಅವರ್ತಿ, ಅಕಾಡೆಮಿಯ ಎಲ್ಲಾ ಸದಸ್ಯರು ಮತ್ತು ಅಂದವಾಗಿ ಮುದ್ರಣ ಮಾಡಿದ ಶ್ರೀರಂಗ ಪ್ರಿಂಟರ್ಸ್ ಅವರಿಗೂ ನಮ್ಮ ಅಕಾಡೆಮಿಯ ಕೃತಜ್ಞತೆಗಳು ಸಲ್ಲುತ್ತವೆ.

ಪಂ: ಆರ್.ವಿ. ಶೇಷಾದ್ರಿ ಗವಾಯಿ
ಅಧ್ಯಕ್ಷರು
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಬೆಂಗಳೂರು.

೧೦-೧೨-೧೯೯೩

| ಲೇಖಕರು | ವಿವರ | ಪುಟ |
|---|---|---|
| ೧) ಡಾ|| ಎಲ್, ಆರ್, ಕುಲಕರ್ಣಿ | ಬೀದರ ಜಿಲ್ಲೆಯ ನೃತ್ಯ ಹಾಗೂ ಸಂಗೀತ ಪರಂಪರೆ | ೧ |
| ೨) ಪ್ರೊ|| ವೀರೇಂದ್ರ ಸಿಂದೆ, | ಸಂಗೀತದ ಪರಮ ಪ್ರಯೋಜನ | ೮ |
| ೩) ಯಶೋದಮ್ಮ ಸಿದ್ ಬಟ್ಟೆ | ಸಂಗೀತ ಮತ್ತು ಭಕ್ತಿ | ೧೩ |
| ೪) ಜಯಶ್ರೀ ಗುತ್ತಲ | ಹಿಂದೂಸ್ಥಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ | ೨೩ |
| ೫) ಪ್ರೊ|| ಹೆಬ್ಬಾಳೆ ಜನನ್ನಾಥ್ ಎಸ್. | ಜಾನಪದ ಸಂಗೀತ ಹಾಗೂ ಕರ್ನಾಟಕ ಸಂಗೀತ | ೩೯ |
| ೬) ಹನುಮಣ್ಣ ನಾಯಕ ದೊರೆ. | ಶಾಲೆ ಕಾಲೇಜುಗಳಲ್ಲಿ ಸಂಗೀತ ಬೋಧನೆ | ೫೫ |

# ಬೀದರ ಜಿಲ್ಲೆಯ ನೃತ್ಯ ಹಾಗೂ ಸಂಗೀತ ಪರಂಪರೆ



ಡಾ॥ ಎಲ್. ಆರ್. ಕುಲಕರ್ಣಿ.

ಈ ಲೋಕದ ಸಮಗ್ರ ಚಟುವಟಿಕೆ, ಆಗುಹೋಗುಗಳಿಗೂ ನಾದವೇ ಮೂಲವೆಂಬ ಭಾವನೆ ವೇದಕಾಲದಿಂದಲೂ ಬೆಳೆದುಬಂದಿದೆ. ನಾದರೂಪದ ಶಬ್ದವು ಮಾನವನ ಬದುಕಿನ ಗತಿಯ ಮೇಲೆ ಬೀರುವ ಪ್ರಭಾವ ಅವರ್ಣನೀಯ. ಅದು ಮನುಷ್ಯನ ಸಮಗ್ರ ವ್ಯಕ್ತಿತ್ವದ ವಿಕಸನಕ್ಕೆ ಕಾರಣವಾಗುತ್ತದೆ. ನಾದವೇ ಮೂಲವಾದ ಸಂಗೀತ ಹಾಗೂ ನೃತ್ಯ ಕಲೆಗಳು ಕೇವಲ ಒಬ್ಬ ವ್ಯಕ್ತಿಯ ವಿಕಾಸಕ್ಕೆ ಕಾರಣವಾಗುವುದಷ್ಟೇ ಅಲ್ಲದೆ ಒಟ್ಟಾರೆ ಒಂದು ಜನಾಂಗದ, ಪ್ರದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಒಂದು ಜನಾಂಗದ ಸಾಂಸ್ಕೃತಿಕ ಮಹತ್ವವನ್ನು

ಅಳಿಯುವಲ್ಲಿ ಸಂಗೀತ ಹಾಗೂ ನೃತ್ಯ ಕಲೆಗಳು ಪ್ರಮುಖ ಮಾನದಂಡವಾಗಿ ಪರಿಣಮಿಸುತ್ತವೆ. ಅಷ್ಟೇ ಅಲ್ಲದೆ ಅವು ಒಂದು ಸಾಂಸ್ಕೃತಿಕ ಪರಂಪರೆಯನ್ನೇ ಸೃಷ್ಟಿಸುತ್ತವೆ.

ಭಾರತವು ಸಾಂಸ್ಕೃತಿಕ ಹಿರಿಮೆಯ ದೃಷ್ಟಿಯಿಂದ ಉಳಿದೆಲ್ಲ ದೇಶಗಳಿಗಿಂತ ಹೆಚ್ಚು ಮನ್ನಣೆಯನ್ನು ಪಡೆದಿದೆ. ಸಾವಿರಾರು ವರ್ಷಗಳಿಂದ ಉನ್ನತ ಹಾಗೂ ವೈಭವಯುತ ಪರಂಪರೆಯನ್ನು ಕಾಯ್ದುಕೊಂಡು ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೆರೆದಿದೆ. ಭಾರತದ ವಿವಿಧ ಭಾಗ, ಪ್ರದೇಶ, ಜನಾಂಗಗಳಿಂದ ರೂಪುಗೊಂಡ ಈ ವೈವಿಧ್ಯಮಯ ಪರಂಪರೆ ಭಾರತವನ್ನಿಂದು ಅಗ್ರಪಂಕ್ತಿಯಲ್ಲಿ ನಿಲ್ಲಿಸಿದೆ. ಈ ದಿಸೆಯಲ್ಲಿ ಬೀದರ ಜಿಲ್ಲೆಯ ಕೊಡುಗೆ ಗಮನಾರ್ಹವಾಗಿದೆ.

ಬೀದರ ಜಿಲ್ಲೆಯ ಸಂಗೀತ ಹಾಗೂ ನೃತ್ಯಕಲೆಗಳಿಗೆ ಐತಿಹಾಸಿಕ ಮಹತ್ವವಿದೆ. ಅನೇಕ ಶತಮಾನಗಳ ಕಾಲ ಈ ಭಾಗವನ್ನು ಆಳಿದ ಅನೇಕ ರಾಜಮನೆತನಗಳು ಹಾಗೂ ಜನಸಾಮಾನ್ಯರು ಸಂಗೀತ ಹಾಗೂ ನೃತ್ಯ ಕಲೆಗಳನ್ನು ಪೋಷಿಸಿಕೊಂಡು ಬಂದರು. ಇವರ ಪೋಷಣೆಯಲ್ಲಿ ವೈಭವಯುತವಾಗಿ ಬೆಳೆದುಬಂದ ಈ ಎರಡೂ ಕಲೆಗಳು ಒಂದು ಸಾಂಸ್ಕೃತಿಕ ಪರಂಪರೆಯನ್ನೇ ಸೃಷ್ಟಿಸಿ ಈ ಭಾಗಕ್ಕೊಂದು ವಿಶೇಷ ಸಾಂಸ್ಕೃತಿಕ ಮೌಲ್ಯವನ್ನು ದೊರಕಿಸಿಕೊಟ್ಟವು. ಬೀದರ ಜಿಲ್ಲೆ ತನ್ನ ಈ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಹಿಂದೆ ಬೀಳದೆ ಇಂದಿಗೂ ಅದನ್ನು ಕಾಯ್ದುಕೊಂಡು ಬಂದಿದೆ.

**ನೃತ್ಯಕಲೆ :–**

ಬೀದರ ಜಿಲ್ಲೆಯ ನೃತ್ಯಕಲೆಗೆ ಅನೇಕ ಶತಮಾನಗಳ ಇತಿಹಾಸವಿದೆ. ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನೃತ್ಯ ಕಲೆಯು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದು ಉನ್ನತಿಯ ಉತ್ತುಂಗಕ್ಕೇರಿತ್ತು. ಕಲ್ಯಾಣಿ ಚಾಲುಕ್ಯರ ಪ್ರಸಿದ್ಧ ದೊರೆ ೬ನೆಯ ವಿಕ್ರಮಾದಿತ್ಯ ಈ ನಾಡಿನಲ್ಲಿ ಕಲೆಯ ಬೆಳವಣಿಗೆಗೆ, ಅದರ ಅಭಿವೃದ್ಧಿಗೆ ವಿಶೇಷ ಪುರಸ್ಕಾರ ನೀಡಿದ ಪುಣ್ಯಪುರುಷ. ವಿಕ್ರಮಾದಿತ್ಯನ ಇಬ್ಬರು ಅರಸಿಯರಾದ ಚಂದಲಾದೇವಿ, ಕೇತಲದೇವಿಯರು ನೃತ್ಯ, ಸಂಗೀತಕಲೆಯಲ್ಲಿ ಪರಿಣತಿಯನ್ನು ಪಡೆದಿದ್ದರು.

ಚಂದಲಾದೇವಿ ನೃತ್ಯಕಲೆಯಲ್ಲಿ ಮಹಾನ್ ತಜ್ಞಳಾಗಿದ್ದಕ್ಕೆ ಆಕೆಗಿದ್ದ 'ನೃತ್ಯ ವಿದ್ಯಾಧರಿ', 'ಅಭಿನವ ಸರಸ್ವತಿ' ಎಂಬ ಬಿರುದುಗಳೇ ಸಾಕ್ಷಿ. ಮಹಾಮಂಡಲೇಶ್ವರ ಗಂಗ ಮಾರ್ಪಡಿಯ ಪತ್ನಿ ಬಾಚಲದೇವಿಯು ತನ್ನ ನೃತ್ಯ ಕಲಾ ಕೌಶಲವನ್ನು ಪ್ರದರ್ಶಿಸಿ ಗಂಡನಿಂದ 'ಪಾತ್ರ ಜಗದಳೆ' ಎಂಬ ಪ್ರಶಸ್ತಿ ಗಳಿಸಿಕೊಂಡಿದ್ದಳು. ಸೈನ್ಯಾಧಿಕಾರಿ ರೇವಿಗಾರನ ಪತ್ನಿ ರೆಬ್ಬಲದೇವಿ 'ಪ್ರತಿಭಾ ಸರಸ್ವತಿ' ಎಂಬ ಬಿರುದು ಪಡೆದಿದ್ದಳು.

ಕಲ್ಯಾಣಿ ಚಾಲುಕ್ಯರು ನೃತ್ಯ ಕಲೆಯ ಅಭಿಮಾನಿಗಳು, ಪೋಷಕರೂ ಆಗಿದ್ದರೆನ್ನುವುದಕ್ಕೆ ಸಾಕ್ಷಿ ಅವರ ಕಾಲದ ವಾಸ್ತುಶಿಲ್ಪ. ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಜಲಸಂಗಿ ಗ್ರಾಮದಲ್ಲಿ ನಿರ್ಮಿತವಾದ ಚಾಲುಕ್ಯರ ಕಾಲದ ದೇವಾಲಯವು ಚಾಲುಕ್ಯ ವಾಸ್ತುಶಿಲ್ಪದ ಅತ್ಯಂತ ಶ್ರೇಷ್ಠ ಮಾದರಿಯೆನಿಸಿಕೊಂಡಿದೆ. ಜಲಸಂಗಿಯಲ್ಲದೆ ನಾರಾಯಣಪುರ ಹಾಗೂ ಜಿಲ್ಲೆಯ ಸುತ್ತಮುತ್ತಲಿನ ಅನೇಕ ಭಾಗಗಳಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು ಚಾಲುಕ್ಯರ ಕಲಾಭಿಮಾನದ ಪ್ರತೀಕವೆನ್ನಿಸಿಕೊಂಡಿವೆ. ಈ ದೇವಾಲಯಗಳ ಒಳ ಹೊರ ಆವರಣಗಳಲ್ಲಿರುವ ಸ್ತಂಭ, ಗೋಡೆಗಳ ಮೇಲೆ ಕೆತ್ತಲ್ಪಟ್ಟಿರುವ ಶಿಲಾಬಾಲಿಕೆಯರ ವಿವಿಧ ನೃತ್ಯ ಭಂಗಿಗಳು ಅಂದಿನ ಕಾಲದ ಕಲಾಭಿಜ್ಞತೆಗೆ, ರಸಿಕತೆಗೆ ಸಾಕ್ಷಿಗಳಾಗಿವೆ. ಶಿಲಾಬಾಲಿಕೆಯರು, ನೃತ್ಯಬಾಲಿಕೆಯರು ತಮ್ಮ ನೃತ್ಯ ಭಂಗಿಗಳಲ್ಲಿ ಹೊರಹೊಮ್ಮಿಸುತ್ತಿರುವ ನವರಸ ಭಾವಾಭಿವ್ಯಕ್ತಿ ಚಾಲುಕ್ಯರ ಸಂಪೂರ್ಣ ನೃತ್ಯ ಕಲಾಪರಿಣತಿಯನ್ನು ಸೂಚಿಸುತ್ತದೆ.

**ಸಂಗೀತ ಕಲೆ :-**

ಈ ಜಿಲ್ಲೆಯಲ್ಲಿ ನೃತ್ಯ ಕಲೆಯಂತೆ ಸಂಗೀತ ಕಲೆಗೂ ತನ್ನದೇ ಆದ ಪರಂಪರೆಯೊಂದಿದ್ದು, ಜಿಲ್ಲೆಯ ಸಾಂಸ್ಕೃತಿಕ ನಕ್ಷೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ನೃತ್ಯ ಕಲೆಯಂತೆ ಸಂಗೀತ ಕಲೆಯೂ ಕಲ್ಯಾಣಿ ಚಾಲುಕ್ಯರ ಪೋಷಣೆಯಲ್ಲಿ ಸಂಪದ್ಭರಿತವಾಗಿ ಬೆಳೆಯಿತು. ಈ ಕಾಲದಲ್ಲಿ ಸಂಗೀತವನ್ನು ಕುರಿತು ಅನೇಕ ಮಹತ್ವಪೂರ್ಣ ಕೃತಿಗಳು ರಚಿಸಲ್ಪಟ್ಟವು. ಚಾಲುಕ್ಯ ಚಕ್ರವರ್ತಿ ಸೋಮೇಶ್ವರ ಭೂಲೋಕಮಲ್ಲನಿಂದ ರಚಿಸಲ್ಪಟ್ಟ

'ಮಾನಸೋಲ್ಲಾಸ' ಅಥವಾ 'ಅಭಿಲಾಷಿತಾರ್ಥ ಚಿಂತಾಮಣಿ' ಸಂಗೀತ ಗ್ರಂಥ ಭಾರತೀಯ ಸಂಗೀತ ಪರಂಪರೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಕ್ರಿ.ಶ. ೧೧೧೬-೧೧೨೭ರ ಕಾಲಾವಧಿಯಲ್ಲಿ ರಚಿತವಾದ ಈ ಕೃತಿ ಎಲ್ಲ ಕಲೆಗಳನ್ನು, ಇತರ ಅನೇಕ ಅಂಶಗಳನ್ನು ಒಳಗೊಂಡು ವಿಶ್ವಕೋಶವೆನಿಸಿಕೊಂಡಿದೆ. ಈ ಕೃತಿಯಲ್ಲಿ ಸಂಗೀತ ಶಾಸ್ತ್ರವನ್ನು ಕುರಿತು ಹೇಳುವಾಗ ದಕ್ಷಿಣ ಭಾರತದ ಸಂಗೀತವನ್ನು 'ಕರ್ನಾಟಕ ಸಂಗೀತ 'ವೆಂದು ಕರೆಯಲಾಗಿದೆ. ಇದು ಈ ಹೆಸರಿನ ಮೊಟ್ಟಮೊದಲ ಉಲ್ಲೇಖವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಹೆಸರನ್ನು ದಕ್ಷಿಣ ಭಾರತದ ಸಂಗೀತ ಶಾಸ್ತ್ರ ಕುರಿತ ಗ್ರಂಥಗಳಲ್ಲೇ ಮೊದಲು ಉಲ್ಲೇಖಿಸಿದ್ದರಿಂದ ಬೀದರ ಜಿಲ್ಲೆಗೆ ಭಾರತೀಯ ಸಂಗೀತ ಚಿರಋಣಿಯಾಗಿದೆ. ಬಹುಶಃ ಸೋಮೇಶ್ವರನ ಆಸ್ಥಾನ ಕವಿಯಾಗಿದ್ದ ಪಾರ್ಶ್ವದೇವನು 'ಸಂಗೀತ ಸಮಯ ಸಾರ' ಎಂಬ ಸಂಗೀತ ಗ್ರಂಥವನ್ನು ರಚಿಸಿದ್ದಾನೆ. ಚಾಲುಕ್ಯ ಅರಸನಾದ ಇಮ್ಮಡಿ ಜಗದೇಕಮಲ್ಲನು 'ಸಂಗೀತ ಚೂಡಾಮಣಿ' ಎಂಬ ಗ್ರಂಥವನ್ನು ರಚಿಸಿದ್ದಾನೆ. 'ಸಂಗೀತ ಚೂಡಾಮಣಿ' ಗ್ರಂಥ ರಚನೆಯ ನಂತರ ಬೇರಾವ ಗ್ರಂಥಗಳೂ ರಚನೆಯಾದಂತಿಲ್ಲ. ೬ನೆಯ ವಿಕ್ರಮಾದಿತ್ಯ ಸಂಗೀತ ಕಲೆಯ ಪುನರುತ್ಥಾನಕ್ಕಾಗಿ ಅನೇಕ ಕೇಂದ್ರಗಳನ್ನು ಆರಂಭಿಸಿದನು. ಬಸವಕಲ್ಯಾಣ ತಾಲೂಕಿನ ಗೋರಟಾ ಗ್ರಾಮದಲ್ಲಿ ಸಂಗೀತ ಕಲೆಯ ಅಗ್ರಹಾರವಿತ್ತೆಂದು ಶಾಸನವೊಂದರಿಂದ ತಿಳಿದು ಬರುತ್ತದೆ.

ನಂತರ ಬಂದ ಬಸವಯುಗದಲ್ಲಿ ಸಂಗೀತ ಕಲೆಗೆ ಮಹತ್ವ ಕೊಟ್ಟಿದ್ದರೂ ಮೊದಲ ಪ್ರಾಶಸ್ತ್ಯ ದೊರಕಿದ್ದು ಧರ್ಮಾಧಾರಿತ ಕಾಯಕ ತತ್ವಕ್ಕೆ. ಆದರೂ ಅನೇಕ ಶರಣರು ಸ್ವರ ವಚನಗಳನ್ನು ರಚಿಸಿದರು. ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

'ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ

ಬತ್ತೀಸ ರಾಗವ ಹಾಡಯ್ಯ
ಉರದಲೊತ್ತಿ ಬಾಜಿಸಯ್ಯ ಕೂಡಲ ಸಂಗಮ ದೇವಾ'

ಹೀಗೆ ಬಸವಣ್ಣನವರು ಸಂಗೀತ ವಾದ್ಯವೊಂದಕ್ಕೆ ಇಡೀ ದೇಹವನ್ನು ಹೋಲಿಸಿಕೊಂಡು ಸಂಗೀತದ ಮೂಲಕ ಇಹ ಪರಗಳೆರಡನ್ನೂ ಸಾಧಿಸಲು ಹೊರಟಿದ್ದರು. ಅನೇಕ ಶರಣರ ವಚನಗಳು ಆಧ್ಯಾತ್ಮಿಕ ತಳಹದಿಯ ಮೇಲೆ ರಚಿತಗೊಂಡಿದ್ದರೂ ಸಂಗೀತದ ಸೌರಭ ಅವುಗಳಲ್ಲಿ ಸೂಸುತ್ತದೆ. ಬಸವಣ್ಣನವರಾದಿಯಾಗಿ. ರಾಗದ ಸಂಕಣ್ಣ , ಕಿನ್ನರಿ ಬ್ರಹ್ಮಯ್ಯ, ಬಹುರೂಪಿ ಚೌಡಯ್ಯ ಮುಂತಾದವರು ಉಲ್ಲೇಖನೀಯರು.

ನಂತರದ ಕಾಲದಲ್ಲಿ ಬಹುಮನಿ ಮನೆತನದ ಆಳ್ವಿಕೆಯಲ್ಲಿ ಬೀದರ ಜಿಲ್ಲೆ ರಾಜಧಾನಿಯಾಗಿ ಮೆರೆಯಿತು. ಈ ಕಾಲದಲ್ಲಿ ಸಂಗೀತ ಕಲೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಬಹುಮನಿ ಮನೆತನದ ಕೊನೆಯ ಅರಸ ಕಲಿಮ್ ಉಲ್ಲಾನ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಸಂಗೀತಕಾರ ಅನಂತ ಸಂಭಾಜಿ ರಾಷ್ಟ್ರೀಯ ಖ್ಯಾತಿಗಳಿಸಿದ್ದನು. ಅವನ ಪ್ರತಿಭೆಯನ್ನು ಕುರಿತು ಒಂದು ಕಥೆ ಈ ಭಾಗದಲ್ಲಿ ಪ್ರಚಲಿತವಾಗಿದೆ.

ಒಮ್ಮೆ ಅನಂತ ಸಂಭಾಜಿಯ ಖ್ಯಾತಿಯನ್ನು ಕೇಳಿದ ಪ್ರಸಿದ್ಧ ಗಾಯಕಿ ನಾಯಕಿಣಿ ಸಂಭಾಜಿಯ ಪ್ರತಿಭೆಯನ್ನು ಪರೀಕ್ಷಿಸಲು ಆಗಮಿಸಿದಳು. ಅವಳು ಉತ್ತರ ಪ್ರದೇಶದಿಂದ ಇಲ್ಲಿಗೆ ಬಂದಳೆಂದು ಉಲ್ಲೇಖವಿದೆ. ಸಂಭಾಜಿಯ ಪ್ರತಿಭೆಯನ್ನು ಪರೀಕ್ಷಿಸಲು ಅವಳು ಉಪಾಯವೊಂದನ್ನು ಹೂಡಿ ನಗರದ ಹೊರಭಾಗಕ್ಕೆ ಬಂದು 'ಹರಿಣ ರಾಗ'ವನ್ನು ಹಾಡತೊಡಗಿದಳು. ಗಾಯನ ಆಲಿಸಿದ ಜಿಂಕೆಯೊಂದು ಅಲ್ಲಿಗೆ ಬಂದಾಗ ನಾಯಕಿಣಿ ತನ್ನ ಎಲ್ಲ ಆಭರಣಗಳನ್ನು ಆ ಜಿಂಕೆಗೆ ತೊಡಿಸಿದಳು. ಮಾರನೆಯ ದಿನ ಆಸ್ಥಾನಕ್ಕೆ ಬಂದು ತನ್ನ ಬೆಲೆಬಾಳುವ ಆಭರಣಗಳು ಕಳೆದ ಬಗ್ಗೆ ಸುಲ್ತಾನನಲ್ಲಿ ದೂರಿತ್ತಳು. ಸುಲ್ತಾನ ಶೀಘ್ರವೇ ಅನಂತ ಸಂಭಾಜಿಯನ್ನು ಕರೆಸಿ ನಡೆದ ವಿಷಯವನ್ನೆಲ್ಲ ತಿಳಿಸಿ ಗಾಯಕಿಯ ಆಭರಣಗಳನ್ನು ಹುಡುಕಿ ಕೊಡಲು ತಿಳಿಸಿದ. ಗಾಯಕಿಯ ಉಪಾಯವನ್ನು ಅರಿತ ಸಂಭಾಜಿ ಅರಣ್ಯಕ್ಕೆ ಬಂದು 'ಹರಿಣ ರಾಗವನ್ನು

ಹಾಡತೊಡಗಿದ. ಆ ಜಿಂಕೆಯಿಂದ ಆಭರಣಗಳನ್ನು ಸಂಗ್ರಹಿಸಿದ. ನಂತರ ಮರು ಉಪಾಯವೊಂದನ್ನು ಹೂಡಿ 'ಶಿಲಾರಾಗ'ವನ್ನು ಹಾಡಿದಾಗ ಶಿಲೆಯೊಂದು ಒಡೆದು ಚೂರಾಯಿತು. ಎಲ್ಲ ಆಭರಣಗಳನ್ನು ಅದರಲ್ಲಿರಿಸಿ ಆಸ್ಥಾನಕ್ಕೆ ಮರಳಿದ. ಆದರೆ 'ಶಿಲಾರಾಗ'ವನ್ನು ಅರಿಯದ ನಾಯಕಿಣಿ ಅನಂತಸಂಭಾಜಿಯ ಎದುರು ತನ್ನ ಸೋಲನ್ನು ಒಪ್ಪಿಕೊಂಡಳು. ಇದು ಬೀದರ ಜಿಲ್ಲೆಯ ಸಂಗೀತ ಪಾಂಡಿತ್ಯ, ಪ್ರತಿಭೆಗೆ ಸಾಕ್ಷಿಯಾಗಿದೆ.

ನಂತರದ ಕಾಲದಲ್ಲಿ ಕೆಲವು ರಾಜಕೀಯ ಸ್ಥಿತ್ಯಂತರಗಳುಂಟಾಗಿ ನೃತ್ಯ ಹಾಗೂ ಸಂಗೀತ ಕಲೆಯ ಬೆಳವಣಿಗೆಯಲ್ಲಿ ಕೊಂಚ ಮಟ್ಟಿಗೆ ಏರುಪೇರುಗಳುಂಟಾದರೂ ವಿಶೇಷ ಧಕ್ಕೆಯುಂಟಾಗಲಿಲ್ಲ. ಹೈದ್ರಾಬಾದಿನ ನಿಜಾಮರ ಕಾಲದಲ್ಲಿ ನೃತ್ಯ ಹಾಗೂ ಸಂಗೀತ ಕಲೆಗೆ ಪ್ರೋತ್ಸಾಹವಿದ್ದೇ ಇತ್ತು. ಆದರೆ ಅದು ಜನಸಾಮಾನ್ಯರಿಗೆ ತಲುಪದೆ ಅರಸರು ಅದನ್ನು ತಮ್ಮ ವಿಶ್ರಾಂತಿಯ ಕಾಲದ ಮನರಂಜನೆಯ ಸಾಧನವನ್ನಾಗಿ ಬಳಸಿಕೊಂಡರು.

ಬೀದರ ಜಿಲ್ಲೆ ತನ್ನ ಹಿಂದಿನ ಸಂಗೀತ ಪರಂಪರೆಯನ್ನು ಇಂದಿಗೂ ಕಾಯ್ದುಕೊಂಡು ಇತ್ತೀಚಿನ ದಿನಗಳಲ್ಲಿ ಅನೇಕ ಸಾಧನೆಗಳನ್ನು ಗೈದಿದೆ. ಕರ್ನಾಟಕದ ಸಂಗೀತ ಕ್ಷೇತ್ರದಲ್ಲಿ ಈ ಜಿಲ್ಲೆಯ ಕಲಾವಿದರ ಪಾಲು ಕೊಂಚ ಮಟ್ಟಿಗಿದೆ. ಜಿಲ್ಲೆಯಾದ್ಯಂತ ಅನೇಕ ಹಿರಿಯ ಕಿರಿಯ ಗಾಯಕರು, ವಿವಿಧ ವಾದ್ಯ ಕಲಾವಿದರು ಸಂಗೀತ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ. ಭಾಲ್ಕಿಯ ಸರಸ್ವತಿ ಸಂಗೀತ ವಿದ್ಯಾಲಯ, ಗೋರಟಾದ ಶಾರದಾ ಸಂಗೀತ ವಿದ್ಯಾಲಯ, ಹುಮನಬಾದಿನ ಗಂಧರ್ವ ಸಂಗೀತ ವಿದ್ಯಾಲಯ, ಬೀದರಿನ ಸಂಗೀತ ಕಲಾಮಂಡಲ ಮುಂತಾದ ಸಂಸ್ಥೆಗಳು ಜಿಲ್ಲೆಯಲ್ಲಿ ಸಂಗೀತ ಕಲೆಯ ಬೆಳವಣಿಗೆಗಾಗಿ ಶ್ರಮಿಸುತ್ತಿವೆ. ಈ ಸಂಸ್ಥೆಗಳಿಂದ ಅನೇಕ ಹೊಸ ಪ್ರತಿಭೆಗಳು ಹೊಮ್ಮಿವೆ. ೧೯೬೦ರಲ್ಲಿ ಬೀದರ ಜಿಲ್ಲೆಯಲ್ಲಿ ಸ್ಥಾಪಿತವಾದ ಸಂಗೀತ ಕಲಾಮಂಡಲ ಬೀದರಿನಲ್ಲಿ ಅನೇಕ ವರ್ಷಗಳಿಂದ ಸಂಗೀತ ಸಮ್ಮೇಳನಗಳನ್ನು ನಡೆಸುತ್ತಾ ಬಂದಿದೆ. ಈ ಸಮ್ಮೇಳನಗಳಲ್ಲಿ ಪಂ. ಭೀಮಸೇನ ಜೋಶಿ , ಪರ್ವೀನ್ ಸುಲ್ತಾನಾ,

ಝಾಕೀರ್ ಹುಸೇನ್, ಹರಿಪ್ರಸಾದ ಚೌರಾಸಿಯಾ ಮುಂತಾದ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದರು ಭಾಗವಹಿಸಿದ್ದಾರೆ. ಗೋರಟಾದ ಸುಪ್ರಸಿದ್ಧ 'ಸಂಗೀತ ರುದ್ರ ಸಂಘ' ದೇಶಾದ್ಯಂತ ಕಾರ್ಯಕ್ರಮಗಳನ್ನು ನೀಡಿದೆ. ಇಲ್ಲಿಯ ವಿರೂಪಾಕ್ಷ ಸ್ವಾಮಿಯವರು ವೇದ ಮಂತ್ರಗಳಿಗೆ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಶೈಲಿಯ ರಾಗತಾಳ ಸಂಯೋಜಿಸಿದ ಅನೇಕ ರಚನೆಗಳು ಹಾಥರಸದ ಸಂಗೀತ ಮಾಸಿಕದಲ್ಲಿ ಪ್ರಕಟವಾಗಿವೆ. ಈ ಪ್ರಯೋಗಕ್ಕೆ ಅಖಿಲ ಭಾರತ ಮಟ್ಟದಲ್ಲಿ ಗೌರವ ಸಂದಿದೆ. ಇತ್ತೀಚೆಗೆ ಚಿಟಗುಪ್ಪದಲ್ಲಿ ಪ್ರತಿ ವರ್ಷವೂ ಸಂಗೀತ ಸಭೆಗಳು ಜರುಗುತ್ತಿವೆ. ನಾಡಿನ ಅನೇಕ ಹಿರಿಯ ಕಿರಿಯ ಕಲಾವಿದರು ಈ ಸಂಗೀತ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಈ ಜಿಲ್ಲೆ ಕೇವಲ ಶಾಸ್ತ್ರೀಯ ಸಂಗೀತ ನೃತ್ಯ ಕಲೆಗಳಿಗಷ್ಟೇ ಅಲ್ಲದೆ ಅನೇಕ ಜಾನಪದ ಕಲೆಗಳಿಗೂ ತೌರೂರಾಗಿದೆ. ಅನೇಕ ಜನಪದ ಹಾಡು, ಕುಣಿತಗಳು ಈ ಜಿಲ್ಲೆಯಲ್ಲಿ ಜನಪ್ರಿಯತೆಯನ್ನು ಪಡೆದಿವೆ. ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಈ ಪರಂಪರೆ ತನ್ನ ಸತ್ವವನ್ನುಳಿಸಿಕೊಂಡಿದೆ. ವಿಶೇಷ ಸಂಧರ್ಭಗಳಲ್ಲಿ ಜಾನಪದ ಕಲಾವಿದರು ಲಾವಣಿ ಹಾಡು, ಸುಗ್ಗಿ ಹಾಡು, ಗೀಗೀ ಪದ ಮುಂತಾದ ಹಾಡು, ಕುಣಿತಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅನೇಕ ಕಲಾವಿದರು ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಜಿಲ್ಲೆಯಲ್ಲಿ ಸಂಗೀತ ನೃತ್ಯಕಲೆಗಳ ಬೆಳವಣಿಗೆ ಕುಂಠಿತಗೊಂಡಿದೆ. ತನ್ನ ಹಿಂದಿನ ಪರಂಪರೆಯ ವೈಭವವನ್ನು ಇಂದು ಉಳಿಸಿಕೊಳ್ಳದೆ ಹೋದರೂ ಇದರ ಸತ್ವ ಕಡಿಮೆಯಾಗಿಲ್ಲ. ಈ ಕಲೆಗಳಿಗೆ ಮೊದಲಿನಂತೆ ರಾಜಾಶ್ರಯ ವಿಲ್ಲದೇ ಹೋದರೂ ಸಂಘಸಂಸ್ಥೆಗಳ ಸಹಕಾರ, ಸಾರ್ವಜನಿಕರ ಆಸಕ್ತಿ, ಪ್ರೋತ್ಸಾಹ, ಸರಕಾರದ ಪ್ರೋತ್ಸಾಹ ದೊರಕಿದರೆ ಜಿಲ್ಲೆ ಇನ್ನೊಮ್ಮೆ ತನ್ನ ಗತ ವೈಭವವನ್ನು ಮೆರೆಯುವುದರಲ್ಲಿ ಸಂದೇಹವಿಲ್ಲ.

# ಸಂಗೀತದ ಪರಮ ಪ್ರಯೋಜನ



ಪ್ರೊ ।। ವೀರೇಂದ್ರ ಸಿಂದೆ.

ಎಲ್ಲಾ ಲಲಿತ ಕಲೆಗಳಲ್ಲಿ ಸಂಗೀತಕ್ಕೆ ಅತ್ಯುನ್ನತ ಸ್ಥಾನವಿದೆ. ಯಾಕೆಂದರೆ ಉಳಿದ ಲಲಿತಕಲೆಗಳು ಕೇವಲ ತಜ್ಞರಿಗಷ್ಟೇ ಸೀಮಿತವಾಗಿದೆ. ಚಿತ್ರಕಲೆಯ ಸೂಕ್ಷ್ಮತೆಗಳೆಲ್ಲ ಸಾಮಾನ್ಯರಿಗೆ ಅರ್ಥವಾಗಲಾರವು. ಅದರಂತೆ ಸಾಹಿತ್ಯ ಎಲ್ಲರಿಗೂ ಅಲ್ಲವೆಂದು ಸರ್ವಜ್ಞ ಸಾರಿಯೇ ಬಿಟ್ಟಿದ್ದಾನೆ. ಸಾಹಿತ್ಯ ಧ್ವನಿಪೂರ್ಣವಾದುದು. ಸಾಹಿತ್ಯದ ಶ್ರೇಷ್ಠತೆ, ಅದರ ಸೂಕ್ಷ್ಮತೆ, ಸೂಚ್ಯತೆ, ಭಾವ ಭಾಷೆಗಳ ವಿದ್ಯುದಾಲಿಂಗನಗಳಿಂದ ನಿರ್ಧರಿತವಾಗುತ್ತದೆ. ಆದರೆ ಸಂಗೀತವಾದರೋ ಸಕಲ ಜೀವಿಗಳಿಗೆ ಆಪ್ಯಾಯಮಾನವಾದುದು. ಅಂತೆಯೇ ಸಂಗೀತ ಸುಶಿಕ್ಷಿತರಿಗೆ ಅದೆಷ್ಟು ಸಮೀಪದ್ದೋ, ನಿರಕ್ಷರಿಗಳಿಗೂ ಅಷ್ಟೇ ಆಹ್ಲಾದಕಾರಿಯಾಗಿದೆ. ಅಷ್ಟೇ ಪ್ರಾಣಿ ಸಸ್ಯಗಳ ಮೇಲೆ ಕೂಡ ಸಂಗೀತದ ಪ್ರಭಾವ ಗಾಢವಾಗಿದೆ.

ಸಂಗೀತಕ್ಕೂ ಸಾಹಿತ್ಯಕ್ಕೂ ಅತ್ಯಂತ ನಿಕಟವಾದ ಸಂಬಂಧವಿದೆ. ಅತ್ಯಂತ ನೀರಸವಾದ ಕಾವ್ಯ ಕೂಡ ಸಂಗೀತದ ಸಂಪರ್ಕದಿಂದ ಶ್ರೋತೃಗಳ ಮನಸೆಳೆಯುತ್ತದೆ. ಗೇಯತೆ ಭಾವಗೀತೆಯ ಸೌಂದರ್ಯವನ್ನೂ ಹೆಚ್ಚಿಸುತ್ತದೆ. ನಾದ, ಲಯಗಳು ಕಾವ್ಯದ ಪ್ರಮುಖ ಪರಿಕರಗಳಾಗಿವೆ. ಕಾವ್ಯವನ್ನು Musical thought ಎಂದು ಹೇಳಲಾಗುತ್ತದೆ. ಇತ್ತೀಚೆಗೆ ಕನ್ನಡ ಕಾವ್ಯವನ್ನು ಸಂಗೀತಕ್ಕೆ ಅಳವಡಿಸುವ ಪ್ರಯತ್ನಗಳು ನಡೆಯುತ್ತಿವೆ. ಸಂಗೀತದ ಸಾಹಚರ್ಯವಿಲ್ಲದ ಕಾವ್ಯ ಅದೆಷ್ಟು ಶ್ರೇಷ್ಠವಾಗಿದ್ದರೂ ಜನಸಾಮಾನ್ಯರನ್ನು ಆಕರ್ಷಿಸಲಾರದು. ಸಂಗೀತ ಸಾಹಿತ್ಯಕ್ಕೆ ಎಷ್ಟು ಅನಿವಾರ್ಯವೋ ಅಷ್ಟೇ ಸಾಹಿತ್ಯಕ್ಕೆ ಹೆಚ್ಚಿನ ಅರ್ಥವಂತಿಕೆಯನ್ನು ಕೊಡುತ್ತದೆ. ಸಂಗೀತ ಸಾಹಿತ್ಯಗಳ ಮೇಳವೆಂದರೆ ಹಾಲಿಗೆ ಜೇನು ಸೇರಿಸಿದಂತೆ. ಸಂಗೀತ ಸಾಹಿತ್ಯಗಳು ಶ್ರೋತೃಗಳ ಹೃದಯವನ್ನು ಅರಳಿಸಿದಂತೆ ಕಲ್ಲು ಮನಸ್ಸನ್ನೂ ಕರಗಿಸಬಲ್ಲವು. ಮನುಷ್ಯನ ಹೃದಯದ ಕಗ್ಗಂಟುಗಳನ್ನು ಸಡಿಲಿಸಿ ಆತನಿಗೆ ಒಳ್ಳೆಯ ಸಂಸ್ಕಾರವನ್ನೂ ಒದಗಿಸಬಲ್ಲವು.

ವಿಶ್ವದಲ್ಲಿ ಗಣಿತ ಜ್ಞಾನಕ್ಕೆ ಹೆಚ್ಚಿನ ಮಹತ್ವವಿದೆ. ಅದು ವ್ಯಕ್ತಿಯಲ್ಲಿ ಏಕಾಗ್ರತೆಯ ಬಲವನ್ನು ಹೆಚ್ಚಿಸುತ್ತದೆ. ಆ ವಸ್ತುವಿನಲ್ಲಿ ತಾದಾತ್ಮ್ಯವನ್ನು ಬೆಳೆಸುತ್ತದೆ. ಅಷ್ಟೇ ಅಲ್ಲ, ಅದು ಅತ್ಯಂತ ಉನ್ನತವಾದ ಬೌದ್ಧಿಕ ಆನಂದವನ್ನೂ ಕೊಡುತ್ತದೆ. ವಿಶ್ವದ ಶ್ರೇಷ್ಠ ತತ್ವಜ್ಞಾನಿಗಳಾದ ಬರ್ಟ್ರೆಂಡ್ ರಸಲ್, ವೈಟ್‌ಹೆಡ್ ಮೊದಲಾದವರು ಗಣಿತಜ್ಞರಾಗಿದ್ದರು. ಹೀಗೆ ತತ್ವಜ್ಞಾನಕ್ಕೆ ಗಣಿತ ತೀರ ಸಮೀಪದ್ದಾಗಿದೆ. ಅದರಂತೆ ಗಣಿತ ಜ್ಞಾನವೂ ಬ್ರಹ್ಮಾನಂದವನ್ನೂ ಕೊಡುತ್ತದೆಂದು ಹೇಳುತ್ತಾರೆ. ಗಣಿತದಂತೆ ಸಂಗೀತವೂಕೂಡ ಮಿಗಿಲಾದ ಆನಂದ ಕೊಡುತ್ತದೆ. ಸಂಗೀತ ನಾದ, ತಾಳ, ಲಯಗಳ ಸಾಮರಸ್ಯವನ್ನವಲಂಬಿಸಿದೆ. ತನ್ನ ಸಾಮರಸ್ಯದ ಬಲದಿಂದ ಅದು ಕೇಳುಗನಲ್ಲಿ ಈಸ್ಥೆಟಿಕ್(Aesthetic) ಆನಂದವನ್ನು ಒದಗಿಸುತ್ತದೆ. ಬರ್ಟ್ರೆಂಡ್ ರಸೆಲ್‌ರ ದೃಷ್ಟಿಯಲ್ಲಿ ಗಣಿತ ಹಾಗೂ ಸಂಗೀತಗಳು ಅತ್ಯಂತ ಉಚ್ಚವರ್ಗಕ್ಕೆ ಸೇರಿದ್ದು ಅವುಗಳಿಂದ ಬ್ರಹ್ಮಾನಂದ ದೊರೆಯುತ್ತದೆ.

ಎಂದಿನಿಂದಲೂ ಕವಿಗಳೂ, ವಿದ್ವಾಂಸರೂ ಸಂಗೀತದ ಶ್ರೇಷ್ಠತೆಯನ್ನು ಸಾರುತ್ತಾ ಬಂದಿದ್ದಾರೆ. ಸಂಗೀತ ಸಾಹಿತ್ಯಗಳ ಬಗ್ಗೆ ಅಭಿರುಚಿಗಳಿಲ್ಲದ ವ್ಯಕ್ತಿ ಕೊಂಬು ಕೋಡುಗಳಿಲ್ಲದ ಪಶುವಿಗಿಂತಲೂ ಕೀಳು ಎನ್ನುವ ಅಭಿಪ್ರಾಯವೊಂದಿದೆ. ಸಂಗೀತದಿಂದ ಒಂದಿಷ್ಟೂ ವಿಚಲಿತನಾಗದ ವ್ಯಕ್ತಿ ಯಾವ ಕ್ರೂರ ಕೃತ್ಯಗಳನ್ನು ಮಾಡಲು ಹೇಸುವುದಿಲ್ಲವೆಂದೂ, ಅಂಥವನು ನಂಬುಗೆಗೆ ಅರ್ಹನಲ್ಲವೆಂದೂ ಶೇಕ್ಸ್‌ಪಿಯರ್ ಹೇಳಿದ್ದಾನೆ.

ಸಂಗೀತ ಎಲ್ಲರಿಗೂ ಬೇಕು. ಅದು ವಿರಹಿಗಳ ಮನಸ್ಸಿಗೆ ತಂಪನ್ನೆರೆದಂತೆ ಪ್ರೇಮಿಗಳ ಮನಸ್ಸನ್ನು ಒಂದುಗೂಡಿಸುವ ಕೊಂಡಿಯೂ ಆಗಿದೆ. ಭಕ್ತರ ದೇವ ಉಪಾಸನೆಯ ಸಾಧನವೂ ಆಗಿದೆ. ಸಂಗೀತದಿಂದ ರೈತ ಹೆಚ್ಚಿನ ಬೆಳೆಯನ್ನೂ ಬೆಳೆಯಬಲ್ಲನೆಂಬ ನಂಬಿಕೆಯೂ ಇದೆ. ಏಕಾಕಿಯಾಗಿ ಜೀವನ ಸಾಗಿಸುತ್ತಿರುವ ವೃದ್ಧರಿಗಂತೂ ಸಂಗೀತ ಅಮೃತಪ್ರಾಯವಾಗಿದೆ. ತರುಣರ ಮನಸ್ಸಿಗೆ ಉತ್ಸಾಹ ತುಂಬುವ ಮಾಧ್ಯಮವೂ ಆಗಿದೆ. ಗಲಿವಿಲಿಗೊಂಡ ಮನಸ್ಸಿಗೆ ಶಾಂತಿ ಸ್ಥಿಮಿತಗಳನ್ನು ಕೊಡಬಲ್ಲ ಶಕ್ತಿಯೂ ಸಂಗೀತಕ್ಕಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಸಂಗೀತ ವ್ಯಕ್ತಿಯ ಪ್ರಜ್ಞೆಯನ್ನು ಉಚ್ಚ ಸ್ತರಕ್ಕೆ ಒಯ್ದು ನಿಲ್ಲಿಸಬಲ್ಲದು.

ಇಡೀ ಸೃಷ್ಟಿಯೇ ಸಂಗೀತದ ಆಧಾರದ ಮೇಲೆ ನಿಂತಿದೆ. ಅದನ್ನೇ ಶೇಕ್ಸ್‌ಪಿಯರ್ Music of Spheres ಎಂದು ಕರೆದಿದ್ದಾನೆ. ಅದು ಎಲ್ಲರಿಗೂ ಕೇಳಿಸಲಿಕ್ಕಿಲ್ಲ. ಆದರೆ ಯಾರು ಹೃದಯ ಸಂಸ್ಕಾರ ಹೊಂದಿದ್ದಾರೆಯೋ ಅಂಥವರಿಗೆ ಸೃಷ್ಟಿಯ ಸಂಗೀತ ಸ್ಪಷ್ಟವಾಗಿ ಕೇಳಿಸುತ್ತದೆ.

ಹಾಗೆ ನೋಡಿದರೆ ಇಡೀ ಪ್ರಕೃತಿಯೇ ಸಂಗೀತದಲ್ಲಿ ತೊಡಗಿದೆ. ಗಾಳಿಯನ್ನು ಸೂಕ್ಷ್ಮವಾಗಿ ಆಲಿಸಿದರೆ ಅದು ಕೊಳಲೂದುವಂತೆ ಭಾಸವಾಗುತ್ತದೆ. ತರಗೆಲೆಗಳು ತಾಳ ಬಾರಿಸಿದಂತೆ ಅನಿಸುತ್ತದೆ. ತಿಳಿಯಾದ ಕೊಳ ಸರೋವರಗಳು ಚಪ್ಪಾಳೆ ಬಾರಿಸಿದಂತೆ ಕಂಡರೆ, ಜಲಪಾತಗಳು ಧೀಂಕಿಟ್ಟು ಕುಣಿದಂತೆ ತೋರುತ್ತದೆ. ಇದನ್ನೆಲ್ಲ ಗಮನಿಸಿದ ವಿವೇಕಾನಂದರು ಥಾತಯ್ಯ ಥಾತಯ್ಯ ಎನುತ ಶಿವ ಕುಣಿದ ಎಂದು

ಹೇಳಿದರು. ಅಂಬಿಕಾತನಯದತ್ತರು ಸೃಷ್ಟಿಯ ಕುಣಿತವನ್ನು ಕುರಿತು ಕುಣಿತಕ್ಕೆ ಇತಿಯಿಲ್ಲ, ಕುಣಿತಕ್ಕೆ ಮಿತಿಯಿಲ್ಲ, ಕುಣಿತಿಲ್ಲದ ಜಗವಿಲ್ಲವೆಂದು ಹಾಡಿದರು.

ಸಂಗೀತದಲ್ಲಿ ಕರ್ನಾಟಕ ಸಂಗೀತ ಹಿಂದುಸ್ತಾನಿ ಸಂಗೀತಗಳೆಂದು ಪ್ರಭೇದವಿದ್ದರೂ, ಅವೆರಡರ ಸೂತ್ರಬಂದೇ. ಅವೆರಡೂ ಕೇಳುಗನಲ್ಲಿ ಪರಮಾನಂದವನ್ನು ದಯಪಾಲಿಸುತ್ತವೆ. ಜಾನಪದ ಸಂಗೀತವಂತೂ ಜನಸಾಮಾನ್ಯರ ಸಾಮಾನ್ಯ ಜೀವನದಿಂದಲೇ ಸ್ಫುರಣಗೊಂಡಿದೆ. ಜನಪದರು ಜೀವನದ ಎಲ್ಲ ಸಂದರ್ಭಗಳಲ್ಲೂ ಹಾಡುತ್ತ ಕುಣಿಯುತ್ತ ಬಂದಿದ್ದಾರೆ. ಹಾಡು ಜನಸಾಮಾನ್ಯರ ಹಿಗ್ಗಿನ ಉಸಿರಾಗಿದೆ. ಕುಣಿತವಂತೂ ಅವರ ಜೀವನೋತ್ಸಾಹದ ಸಂಕೇತವೇ ಆಗಿದೆ. ಅವರು ಹಬ್ಬ ಹರಿದಿನಗಳಲ್ಲಿ ಹಾಡಿದಂತೆ, ದಿನನಿತ್ಯವೂ ಹಾಡುತ್ತಲೇ ಬಂದಿದ್ದಾರೆ. ನಲಿವಿನ ಸಂದರ್ಭದಲ್ಲಿ ಹಾಡಿದಂತೆ ಅವರು ನೋವಿನ ಸಂದರ್ಭದಲ್ಲೂ ಅಳುತ್ತಾ ಹಾಡುತ್ತಾರೆ ಅಥವಾ ಹಾಡುತ್ತಾ ಅಳುತ್ತಾರೆ. ಭಿಕ್ಷುಕರೂ ಹಾಡುತ್ತ ತಮ್ಮ ವೃತ್ತಿಯನ್ನು ಕೈಗೊಳ್ಳುತ್ತಾರೆ. ಒಟ್ಟಿನಲ್ಲಿ ಹಾಡು ಅಥವಾ ಸಂಗೀತ ನಮ್ಮ ಜನಪದರಲ್ಲಿ ಜೀವನದ ವಿರಸ ಕಡಿಮೆ ಮಾಡಿ ಸಾಮರಸ್ಯವನ್ನು ಮೂಡಿಸುತ್ತಾ ಬಂದಿದೆ.

ಸಂಗೀತದಲ್ಲಿ ಹಾಡಿನದೇ ಒಂದು ಪಾಲಾದರೆ, ವಾದ್ಯಗಳ ಮಾಧುರ್ಯವೇ ಇನ್ನೊಂದು ಪಾಲಾಗಿದೆ. ತಾಳ ತಂಬೂರಿ, ವೀಣೆ ಕೊಳಲುಗಳು ಕೇಳುಗರ ಸುಪ್ತ ಆನಂದವನ್ನು ಕೆರಳಿಸುತ್ತದೆ. ಕೊಂಬು ಕಹಳೆಗಳು ಉತ್ಸಾಹವನ್ನು ವರ್ಧಿಸುತ್ತವೆ. ಚರ್ಮವಾದ್ಯಗಳಾದ ಕುರುಬರ ಡೊಳ್ಳು, ವಿಲಾಸಿಗಳ ಕರಡಿ, ಮೇಳದವರ ಊಡಕ, ಜೋಗಿತಿಯರ ಚೌಡಿಕೆಗಳದ್ದೇ ಒಂದು ವೈಶಿಷ್ಟ್ಯವಿದೆ. ಕುರುಬರ ಡೊಳ್ಳು 'ಬ್ರಹ್ಮ ದೊಡ್ಡಾಂವಾ' ಎಂದು ಹೇಳುತ್ತದೆ. ವಿಲಾಸಿಗಳ ಕರಡಿ 'ಸಿಕ್ಕೆಲೆ ಹುಡುಗಿ, ಸಿಕ್ಕೆಲೆ ಹುಡುಗಿ'ಯೆಂದು ಕಚಗುಳಿಯಿಡುತ್ತದೆ. ಚೌಡಿಕೆಯಂತೂ 'ಪರಶುರಾಮುನ ತಾಯಿ। ಎಲ್ಲಮ್ಮ ದೇವಿ ಪರಶುರಾಮುನ ತಾಯಿಯೆಂದು, ಎಲ್ಲಮ್ಮ ತಾಯಿಯ ಕೀರ್ತಿಯನ್ನು ದಶದಿಕ್ಕುಗಳಲ್ಲಿ ಹರಡುತ್ತದೆ. ತೋಂ ತತ ಝಣತತ್ತಾ। ಕಡಕಡ। ತೋಂತತ ಝಣತಾ।

ತೋಂತತ ಝಣತಾ। ತಯಾತೋಂತ ತತ ಝಣತಾ। ಎಂದು ತಿಲ್ಲಾಣವೆಂಬ ಜನಪದವಾದ್ಯ ಧೀಂಗುಡುತ್ತದೆ.

ಚೌಡಿಕೆಯ ನಾದದ ಪೆಟ್ಟು ಕಳೆದುಹೋದ ಪೌರುಷವನ್ನು ಜಾಗೃತಗೊಳಿಸಬಲ್ಲುದೆಂದು ಹೇಳುತ್ತಾರೆ. ಕರಡಿ ಮೇಳದ ವಾದ್ಯವನ್ನು ಕೇಳಿ ಹಿಂಡುವ ದನಗಳು ತೊರೆವು ಬಿಡುತ್ತದೆಂದು ಜನಪದರು ದೃಢವಾಗಿ ನಂಬಿದ್ದಾರೆ. ಸಂಗೀತದಿಂದ ಹಿಂಸ್ರ ಪಶುವೂ ತನ್ನ ಸಹಜವಾದ ಕ್ರೌರ್ಯವನ್ನು ಮರೆತು ಮೃದುವಾಗುತ್ತದೆ. ಸಂಗೀತದಿಂದ ದುಷ್ಟನು ಕ್ಷಣಮಾತ್ರದಲ್ಲಿ ತನ್ನ ದುಷ್ಟತನವನ್ನು ಮರೆತು ಒಳ್ಳೆಯ ಗುಣಗಳನ್ನು ಅಳವಡಿಸಿಕೊಳ್ಳಬಲ್ಲನು.

ಹಳ್ಳಿಗಳಲ್ಲಿ ಭಜನಾಮೇಳಗಳಿದ್ದು, ವರ್ಷದುದ್ದಕ್ಕೂ ಸಾಮೂಹಿಕ ಭಜನೆಗಳನ್ನು ಏರ್ಪಡಿಸುವುದುಂಟು. ಭಜನೆಯ ಮೇಳದಲ್ಲಿ ಎಲ್ಲ ವರ್ಗದ, ಎಲ್ಲ ಜಾತಿಯ, ಎಲ್ಲಾ ಪಂಥದ, ಎಲ್ಲ ವಯಸ್ಸಿನ ಜನ ಭಾಗವಹಿಸುತ್ತಾರೆ. ಅಲ್ಲಿ ಎಲ್ಲ ತರಹದ ದನಿಗಳು ಕೂಡಿ ಒಂದೇ ದನಿಯಾಗಿ ಮಾರ್ಪಡುತ್ತದೆ. ಭಜನೆಯ ಮೇಳ ಈ ರೀತಿ ಭಾವೈಕ್ಯತೆಗೆ ಹಾಕಿಕೊಟ್ಟ ಸುಲಭ ಸಾಧನವಾಗಿದೆ. ಹೀಗೆ ವೈಯಕ್ತಿಕವಾಗಿ ಸಂಗೀತವು ವ್ಯಕ್ತಿಯೊಬ್ಬನ ಆತ್ಮ ಸಂಸ್ಕಾರಕ್ಕೆ ದಾರಿಮಾಡಿಕೊಟ್ಟಂತೆ ಸಾಮೂಹಿಕವಾಗಿ ಭಾವೈಕ್ಯತೆಯ ಪ್ರಬಲ ಸಾಧನವೂ ಆಗಿದೆ. ಸಂಗೀತದಿಂದ ಹೀಗೆ ವ್ಯಷ್ಟಿ ಸಮಷ್ಟಿಗಳ ಕಲ್ಯಾಣ ಏಕಕಾಲಕ್ಕೆ ಈಡೇರುತ್ತದೆ.

# ಸಂಗೀತ ಮತ್ತು ಭಕ್ತಿ



ಯಶೋದಮ್ಮ ಸಿದ್‌ಬಟ್ಟೆ.

ಸಂಗೀತ ಎಲ್ಲರಿಗೂ ಇಷ್ಟ. ಅದು ಮನುಷ್ಯರಿಗಷ್ಟೇ ಸೀಮಿತವಲ್ಲ. ಪ್ರಾಣಿಗಳೂ ಅದರ ಪ್ರಭಾವಕ್ಕೆ ಒಳಗಾಗುತ್ತವೆ. ಇತ್ತೀಚೆಗಂತೂ ಸಸ್ಯಗಳಿಗೂ ಸಂಗೀತ ಇಷ್ಟ ಎಂಬ ಅಂಶವನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಅದೇನೇ ಇರಲಿ, ಮಾನವನಂತೂ ತನಗೆ ಸುಂದರ ಶಾರೀರ ಇರಲಿ ಇಲ್ಲದಿರಲಿ, ಶಾಸ್ತ್ರ ಗೊತ್ತಿರಲಿ, ಇಲ್ಲದಿರಲಿ ಗುಯ್‌ಗುಡುವುದಂತೂ ಸತ್ಯ. ಒಟ್ಟಿನಲ್ಲಿ ಸಂಗೀತವನ್ನು ಎಲ್ಲರೂ ಇಷ್ಟಪಡುತ್ತಾರೆ. ತಮಗೆ ತಿಳಿದ ಧಾಟಿಯಲ್ಲಿ ಹಾಡಿ ಆನಂದಿಸುತ್ತಾರೆ.

ಹಿಂದೂ ಸಂಸ್ಕೃತಿಯಲ್ಲಿ ಹದಿನಾಲ್ಕು ವಿದ್ಯೆಗಳು, ಅರವತ್ನಾಲ್ಕು ಕಲೆಗಳ ಉಲ್ಲೇಖವಿದೆ. ವಿದ್ಯೆಯಲ್ಲಿ ಮುಖ್ಯವಾಗಿ ಆತ್ಮವಿದ್ಯೆ ಎಂದೂ, ಕಲೆ ಎಂದರೆ ನೃತ್ಯ, ಸಂಗೀತ, ಶಿಲ್ಪ ಮೊದಲಾದುವುಗಳೆಂದು ತಿಳಿಯುತ್ತೇವೆ. ಒಂದು ರೀತಿಯಲ್ಲಿ ಸಂಗೀತವು ವಿದ್ಯೆಯೂ ಹೌದು,

ಕಲೆಯೂ ಹೌದು. ಆದುದರಿಂದಲೇ ಸಂಗೀತಕ್ಕೆ "ಗಂಧರ್ವ ವಿದ್ಯೆ" ಎಂದೂ, "ಸಂಗೀತ ಕಲೆ" ಎಂದೂ ಕರೆಯುವುದುಂಟು. ಸಂಗೀತದ ಇನ್ನೊಂದು ಗುರಿ ಅಧ್ಯಾತ್ಮವಾಗಿದೆ. ಸಂಗೀತ ಮತ್ತು ಅಧ್ಯಾತ್ಮವೆರಡರಿಂದಲೂ ಸಿದ್ಧಿಸಬೇಕಾದುದು ಆನಂದ! ಅದು ಇನ್ನೂ ಉನ್ನತಾವಸ್ಥೆ ತಲುಪಿದಾಗ ಬ್ರಹ್ಮಾನಂದ!! ಆ ಬ್ರಹ್ಮಾನಂದವೇ ಸಂಗೀತದ ಚರಮಲಕ್ಷ್ಯ!!! ಇಂತಹ ಆನಂದವನ್ನು ಆಸ್ವಾದಿಸಲು ಭಗವಂತನ ಸಾಕ್ಷಾತ್ಕಾರವನ್ನೇ ಗುರಿಯಾಗಿಟ್ಟುಕೊಂಡು ಹಾಡ ಬೇಕಾಗುತ್ತದೆ. ಭಕ್ತವತ್ಸಲ, ಮುಕ್ತಿದಾಯಕ, ಸೌಂದರ್ಯದಾಗರ ಎಲ್ಲವೂ ಆ ಭಗವಂತ! ಆ ಪರಮಾತ್ಮನಿಂದಲೇ ಎಲ್ಲವೂ ಸಿದ್ಧಿಸುತ್ತದೆ. ಅವನ ಕೃಪೆಯನ್ನು ಪಡೆಯಬೇಕಾದರೆ ಸಂಗೀತದೊಂದಿಗೆ ಭಕ್ತಿ ಸೇರಲೇ ಬೇಕು. ಆಗ ಮಾತ್ರ ಸಿದ್ಧಿ ಸಾಧಿಸುವುದು ಖಂಡಿತ.

ಕನ್ನಡದಲ್ಲಿ ಅತಿ ಪ್ರಾಚೀನ ಗ್ರಂಥವಾದ "ಕವಿರಾಜ ಮಾರ್ಗ"ದಲ್ಲಿ ಸಂಗೀತದ ನೇರ ಪ್ರಸ್ತಾಪವಿಲ್ಲದಿದ್ದರೂ, ಉಪಮೆ ರೂಪದಲ್ಲಿ ಒಂದೆರಡು ಕಡೆ ಅದನ್ನು ಕಾಣಬಹುದಾಗಿದೆ. ನೃಪತುಂಗನ ಕಾಲಕ್ಕಿಂತ ಮೊದಲೇ ಕರ್ನಾಟಕದಲ್ಲಿ ಸಂಗೀತ ಕಲೆ ಪ್ರಚಾರದಲ್ಲಿತ್ತು. ಈ ಅಂಶ ಶಾಸನಗಳ ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ಹಿಂದೆ ಸಂಗೀತವು ಜನರ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಜೀವನದ ಒಂದು ಅಂಗವಾಗಿತ್ತು. ದೊಡ್ಡ ದೊಡ್ಡ ಗ್ರಂಥಗಳಲ್ಲಿ ದೇವಾಲಯ, ಅರಮನೆ, ಮತ್ತು ವಾರಾಂಗನೆಯರ ವಿಷಯ ಬಂದಾಗಲೆಲ್ಲಾ ಸಂಗೀತದ ಪ್ರಸ್ತಾಪ ಬಂದಿರುವುದನ್ನು ಕಾಣಬಹುದು. ದೇವಾಲಯಗಳಲ್ಲಿ ಸಂಗೀತವು ನಿತ್ಯಪೂಜೆಯ ಹಾಗೂ ಧಾರ್ಮಿಕ ವಿಧಿಗಳ ಒಂದು ಅನಿವಾರ್ಯ ಅಂಗವಾಗಿತ್ತು. ಅರಮನೆಗಳಲ್ಲಿ ಶಿಷ್ಟಾಚಾರ ಹಾಗೂ ಮನೋರಂಜನೆಯ ಸಾಧನವಾಗಿತ್ತು. ಶಿಕ್ಷಣದಲ್ಲೂ ಸಂಗೀತಕ್ಕೆ ಪ್ರಮುಖ ಸ್ಥಾನ ಲಭ್ಯವಿತ್ತು.

ಹನ್ನೆರಡನೆಯ ಶತಮಾನದವರೆಗೆ ಭಾರತೀಯ ಸಂಗೀತದಲ್ಲಿ ವಿಭಿನ್ನ ಪದ್ಧತಿಗಳ ಉಲ್ಲೇಖವಿಲ್ಲ. ಒಂದೇ ಪದ್ಧತಿ ಜಾರಿಯಲ್ಲಿತ್ತು. ಪ್ರಕ್ಷುಬ್ಧ ಕಾಲ ಮತ್ತು ವಿದೇಶಿ ಆಡಳಿತವು ವಿಶೇಷವಾಗಿ ಉತ್ತರಭಾರತದ

ಸಂಗೀತದ ಮೇಲೆ ಪ್ರತಿಕೂಲ ಪರಿಣಾಮುವನ್ನುಂಟುಮಾಡಿತು. ಹದಿಮೂರನೆಯ ಶತಮಾನದಲ್ಲಿ ದೆಹಲಿಯ ಬಾದಷಹ ಅಲ್ಲಾಉದ್ದೀನ್ ಖಿಲ್ಜಿಯ ಆಸ್ಥಾನದ 'ಅಮೀರ್ ಖುಸ್ರೋ' ಎಂಬುವನು ಭಾರತೀಯ ಸಂಗೀತದ ಮೇಲೆ ಪರ್ಷಿಯನ್, ಇರಾನಿ ಸಂಸ್ಕೃತಿಗಳ ಪ್ರಭಾವವಿದ್ದ ಹಿಂದೂಸ್ತಾನಿ ಪದ್ಧತಿಯನ್ನು ರೂಪಿಸಿದ.

ದಕ್ಷಿಣಾತ್ಯ ಸಂಗೀತ ಪದ್ಧತಿಗೆ " ಕರ್ನಾಟಕ " ವೆಂದು ಕರೆದರು. ಕಾರಣ ಇಂದು ಪ್ರಚಾರದಲ್ಲಿರುವ ಸಂಗೀತ ಮತ್ತು ನೃತ್ಯಕಲೆಗಳು ವಿಜಯನಗರ ಸಾಮ್ರಾಜ್ಯದಲ್ಲಿ ಪರಿಷ್ಕೃತವಾಗಿ ಬಳಕೆಗೆ ಬಂದವು. ವಿಜಯನಗರ ಪತನಾನಂತರ ಆ ಸಂಸ್ಕೃತಿ ಬಹುತೇಕ ತಂಜಾವೂರು ಮತ್ತು ಮೈಸೂರುಗಳಲ್ಲಿ ನೆಲೆಸಿ ಇನ್ನೂ ಪರಿಷ್ಕರಿಸಲ್ಪಟ್ಟು ಬೆಳೆಯಿತು. ಆದರೂ ಅದರ ಮೂಲರೂಪ ಕರ್ನಾಟಕ ಸಾಮ್ರಾಜ್ಯವಾದ ವಿಜಯನಗರದಲ್ಲಿ ರೂಪಿತವಾದುದು. ಆದ್ದರಿಂದಲೇ ಕರ್ನಾಟಕದ ಹೆಸರು ವ್ಯವಹಾರದಲ್ಲಿ ಬಂದಿತೆನ್ನಬಹುದು.

ಮುಂದೆ ಸಂಗೀತದಲ್ಲಿ ಎರಡು ಪದ್ಧತಿಗಳು ಕಂಡು ಬಂದವು. ಒಂದು "ಕರ್ನಾಟಕ", ಇನ್ನೊಂದು "ಹಿಂದೂಸ್ತಾನಿ". ಈ ಪದ್ಧತಿಗಳು ನಿರಂತರವಾಗಿ ಇಂದಿಗೂ ನಡೆದುಕೊಂಡು ಬರುತ್ತಿವೆ. ಕರ್ನಾಟಕ ಸಂಗೀತವನ್ನು ಹರಿದಾಸರು, ಅಣ್ಣಮಾಚಾರ್ಯರು, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಶ್ಯಾಮಾಶಾಸ್ತ್ರಿಗಳು ಮುಂತಾದವರು ವೈವಿಧ್ಯಮಯವಾಗಿ ಬೆಳೆಸಿ ಸಮೃದ್ಧಗೊಳಿಸಿದರು.

ಸಂಗೀತದೊಡನೆ ಭಕ್ತಿಯನ್ನು ಬೆರಸಿದರೆ ಭಗವಂತನ ಸಾಕ್ಷಾತ್ಕಾರ ಸುಲಭ. ಹಾಲು ಸಕ್ಕರೆ ಬೆರತಂತೆ ಅವುಗಳ ಕೂಡುವಿಕೆ. ಅದಕ್ಕಾಗಿಯೇ ಬಸವಣ್ಣನವರು

" ನಾದ ಪ್ರಿಯ ಶಿವನೆಂಬರು, ನಾದ ಪ್ರಿಯ ಶಿವನಲ್ಲವಯ್ಯ
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲವಯ್ಯ
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವಾ "

ಎಂದು ಮನಸಾರೆ ಹಾಡಿದ್ದಾರೆ. ಸಂಗೀತ ಪಿತಾಮಹರೆನಿಸಿದ ಪುರಂದರದಾಸರು ಕೂಡ –"ಕೇಳನೋ ಹರಿ ತಾಳನೋ ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ"ಎಂದು ಹಾಡಿ ಸಂಗೀತ ಮತ್ತು ಭಕ್ತಿಯ ಸಂಯೋಗ ಅನಿವಾರ್ಯವಾದುದೆಂದು ಸಾರಿದ್ದಾರೆ. ನಾರದರು ಭಕ್ತಿಯನ್ನು ಕುರಿತು ಹೇಳುವಾಗ "ಪರಮ ಪ್ರೇಮ ರೂಪ" ಎಂದಿರುವರು. ಅಂದರೆ "ಭಕ್ತಿಯು ಅಮೃತ ಸ್ವರೂಪ" ಎಂಬುದು ನಾರದರ ಅಭಿಪ್ರಾಯ. ಅಮರವಾದ ಆನಂದವು ಪ್ರೇಮದಿಂದ ಕೂಡಿದ ಗಾನದಿಂದ ಮಾತ್ರ ಸಾಧ್ಯ ಎಂಬ ಸತ್ಯವನ್ನು ನಾವೆಲ್ಲರೂ ಒಪ್ಪಿಕೊಳ್ಳಲೇ ಬೇಕು.

ಸಂಗೀತದಲ್ಲಿ ಭಕ್ತಿಯ ಸ್ಥಾನ ಬಹು ದೊಡ್ಡದು. ಭಕ್ತಿಯುಕ್ತವಾದ ಸಂಗೀತದ ಉದ್ದೇಶ ಬ್ರಹ್ಮಾನಂದ. ಆ ಆನಂದ ಶಾಶ್ವತನಾದ ಭಗವಂತನಿಂದಲೇ ದೊರೆಯ ಬೇಕಾಗಿರುವುದರಿಂದ ಭಕ್ತಿಯಿಂದ ಕೂಡಿದ ಸಂಗೀತದ ಚರಮೋದ್ದೇಶ ಭಗವತ್ಸಾಕ್ಷಾತ್ಕಾರವಾಗಿದೆ. ಈ ಸಾಕ್ಷಾತ್ಕಾರಕ್ಕಾಗಿ ಪರಿತಪಿಸುವ ಪ್ರತಿಯೊಬ್ಬರೂ ಭಕ್ತರೆನಿಸಿಕೊಳ್ಳುತ್ತಾರೆ. ಅವರಿಗೆ ಲಭಿಸ ಬೇಕಾದ ಸಿದ್ಧಿ, ಅವರ ನಿಷ್ಠೆ ಹಾಗೂ ಪ್ರಯತ್ನ ವನ್ನವಲಂಬಿಸಿರುತ್ತದೆ.

ಸಂಗೀತವು ಕಲೆಯಿಂದೊಡಗೂಡಿದ ಒಂದು ಶಾಸ್ತ್ರ. ಶಾಸ್ತ್ರವು ಮೆದುಳಿಗೆ, ಕಲೆಯು ಹೃದಯಕ್ಕೆ ಸಂಬಂಧಿಸಿದುದು. ಶಾಸ್ತ್ರವು ಜಿಜ್ಞಾಸೆಯ ವಿಷಯ, ಕಲೆಯು ಆನಂದದ ವಿಷಯ. ವಿಶ್ರಾಂತಿ ( ನಿದ್ರೆ ) ಪಡೆಯಲು ಕೆಲವು ನಿಯಮಗಳಿವೆ. ಅದನ್ನು ಅನುಸರಿಸುವ ವ್ಯಕ್ತಿ ನಿದ್ರೆಯ ಸುಖವನ್ನು ಅನುಭವಿಸುತ್ತಾನೆ. ಹಾಗೆಯೇ ಕಲೆಯ ಶಾಸ್ತ್ರ ತಿಳಿದವನು ಸಂಗೀತದ ಸುಖ ಅನುಭವಿಸುತ್ತಾನೆ.

ನಾರದರಿಗೆ ತಾನೇ ಸಂಗೀತ ಬಲ್ಲವನೆಂಬ ಗರ್ವವಿತ್ತು. ಹನುಮಂತ ಭಕ್ತಿಪೂರ್ವಕವಾಗಿ ಹಾಡಿ ಬಂಡೆಯನ್ನುಕರಗಿಸಿ ನೀರಾಗಿಸಿದಾಗ ನಾರದರು ಪಶ್ಚಾತಾಪ ಪಡಬೇಕಾಯಿತು. ಶ್ರೀಕೃಷ್ಣನ ಮುರಳಿಗಾನ ಕೇಳಿ ನವಿಲು ನರ್ತಿಸುತ್ತದೆ. ಯಮುನೆ ಹರಿಯುವುದನ್ನು ನಿಲ್ಲಿಸುತ್ತಾಳೆ. ಮಗು ಹಾಲು ಕುಡಿಯುವುದನ್ನು ಬಿಟ್ಟು ಬಿಡುತ್ತದೆ. ಹುಲಿ ದನಗಳು ದ್ವೇಷ ಮರೆತು ಒಂದಾಗುತ್ತವೆ. ಹೀಗಿರುತ್ತದೆ ಸಂಗೀತದ

ಪ್ರಭಾವ ಹಾಗೂ ಅದರ ಮಹಿಮೆ.

ಪ್ರಾಣಿಗಳಿಗೆ ಶಾಸ್ತ್ರ ತಿಳಿಯುವುದಿಲ್ಲ. ಆದರೂ ಸಂಗೀತವನ್ನು ಅತ್ಯಂತ ಶಾಂತಚಿತ್ತದಿಂದ ಆಸ್ವಾದಿಸುತ್ತವೆ. ಹಾಗೆಯೇ ಮಾನವರಲ್ಲಿ ಕೆಲವರಿಗೆ ಶಾಸ್ತ್ರ ತಿಳಿದಿರುವುದಿಲ್ಲ. ಆದರೂ ಭಕ್ತಿಯಿಂದ ಹಾಡಿ ಭಗವಂತನ ಅನುಗ್ರಹ ಪಡೆದಿರುವುದನ್ನು ಕೇಳಿದ್ದೇವೆ. ತನ್ಮಯತೆ ಮತ್ತು ಭಕ್ತಿಯಿಂದ ಸಂತರೂ, ದಾಸರೂ ಹಾಡಿ ದೇವರ ಅನುಗ್ರಹಕ್ಕೆ ಪಾತ್ರರಾದವರ ಅದೆಷ್ಟೋ ಕಥೆಗಳನ್ನು ಕೇಳಿದ್ದೇವೆ. ಆದುದರಿಂದ ಸಂಗೀತವನ್ನು ಒಂದು "ಕಲೆ"ಎಂದೂ ಅದು ಶಾಸ್ತ್ರದಿಂದ ಕೂಡಿದ್ದರೆ, ಅದಕ್ಕೆ ಹೆಚ್ಚು ಬೆಲೆ ಎಂಬುದನ್ನು ನಾವು ಒಪ್ಪಿಕೊಂಡರೂ, ಶಾಸ್ತ್ರ ಅರಿಯದವರು ಭಕ್ತಿಪೂರ್ವಕ ಹಾಡಿದ ಗಾನವೂ ಅಮೋಘವಾದ ಸಂಗೀತ ಎಂಬುದನ್ನು ಮರೆಯಲಾಗದು.

ಸಂಗೀತದಲ್ಲಿ ಭಕ್ತಿಯೇ ಪ್ರಧಾನ. ಭಕ್ತಿಗೆ ಸ್ಥಾನ ಹೃದಯ. ಕಲೆಯು ಹೃದಯಸ್ಪರ್ಶಿಯಾದುದು. ಅಂದರೆ ಶಾಸ್ತ್ರವು ಅನಗತ್ಯವೆಂದು ಹೇಳುವಂತಿಲ್ಲ. ಸಂಗೀತದಲ್ಲಿ ಲಕ್ಷಣಕ್ಕಿಂತ ಲಕ್ಷ್ಯಕ್ಕೆ ಪ್ರಧಾನತೆ ಹೆಚ್ಚು. ಆದ್ದರಿಂದ ಸಂಗೀತವು ಮೊದಲನೆಯದಾಗಿ "ಕಲೆ", ನಂತರ "ಶಾಸ್ತ್ರ" ಎಂಬ ನಿರ್ಧಾರಕ್ಕೆ ಬರುವುದು ಅತ್ಯಂತ ಸೂಕ್ತವಾಗಿದೆ.

ಸಂಗೀತದಲ್ಲಿ ಶ್ರುತಿ, ಲಯಗಳ ಸ್ಥಾನವು ಬಹಳ ಪ್ರಧಾನವಾದುದು. ಹಿಂದಿನವರು 'ಶ್ರುತಿ'ಯನ್ನು ತಾಯಿ ಎಂದು, ಲಯವನ್ನು ತಂದೆ ಎಂದೂ ಕರೆದಿರುತ್ತಾರೆ. ಶ್ರುತಿ ಲಯಗಳಿಂದೊಡಗೂಡಿದ ಸಂಗೀತ ಭಕ್ತಿರಹಿತವಾದರೆ ಹೇಗಿರುತ್ತದೆ ಎಂಬುದಕ್ಕೆ ಪುರಂದರದಾಸರು ಹೀಗೆ ಹೇಳಿದ್ದಾರೆ. "ನಾನಾ ಬಗೆಯ ರಾಗ, ಭಾವ ತಿಳಿದು ಸ್ವರ, ಜ್ಞಾನ ಮನೋಧರ್ಮ ಜಾತಿಯಿದ್ದು, ದಾನವಾರಿಯ ದಿವ್ಯ ನಾಮ ರಹಿತವಾದ ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು "ಕೇಳನೊ ಹರಿ ತಾಳನೊ," – ಸತ್ಯವಾಗಿ ಸಂಗೀತದಲ್ಲಿ ಭಕ್ತಿ ಇದ್ದರೆ ಅದರಲ್ಲಿ ಒಂದು ದಿವ್ಯ ಶಕ್ತಿ ಇದ್ದಂತೆ. ಅದಿಲ್ಲದಿದ್ದರೆ ಖಂಡಿತಾ ಭಗವತ್ಸಾಕ್ಷಾತ್ಕಾರ ಸಾಧ್ಯವಿಲ್ಲ!

ತ್ಯಾಗರಾಜರು ಸಂಗೀತವನ್ನು ನಾದಯೋಗವೆಂದು ಕರೆದಿದ್ದಾರೆ.

ಅಂತೆಯೇ ತಮ್ಮ ಒಂದು ಕೀರ್ತನೆಯಲ್ಲಿ– "ಓ ಮನವೇ ನಾದದಲ್ಲಿ ಲೋಲನಾಗಿ ಬ್ರಹ್ಮಾನಂದವನ್ನು ಪ್ರಾಪ್ತ ಮಾಡಿಕೊ"– ಎಂದಿದ್ದಾರೆ. ಗೀತೆ ಮತ್ತು ಉಪನಿಷತ್ತುಗಳಲ್ಲಿ ತಿಳಿಸಿರುವಂತೆ ಜೀವನ್ಮುಕ್ತನಾಗಬೇಕಾದರೆ ಆ ಪರಬ್ರಹ್ಮ ಸ್ವರೂಪಿಯಾದ ಭಗವಂತನಿಂದ ಸಂಗೀತಜ್ಞಾನವನ್ನು ಪಡೆದುಕೊಂಡು ಬಂದಿರಬೇಕಾಗುತ್ತದೆ.

ಸಂಗೀತದಲ್ಲಿ ಸಾಹಿತ್ಯ ಹೇಗೆ ಅಳವಡಿಸಲಾಗಿದೆ ಎಂಬ ಅಂಶವನ್ನು ನಾವು ಗಮನಿಸಿದಾಗ ಅನೇಕ ಗಹನವಾದ ವಿಷಯಗಳನ್ನು ನಾವು ಅಲ್ಲಿ ಕಾಣುತ್ತೇವೆ. ಸಂತರು, ದಾಸರು ಕೀರ್ತನೆಗಳ ಮೂಲಕ ಅವುಗಳನ್ನು ಸರಳಗೊಳಿಸಿದ್ದಾರೆ. ಆ ಸಾಹಿತ್ಯವನ್ನು ಸಂಗೀತದ ಮೂಲಕ ಜನರಲ್ಲಿಗೆ ತೆಗೆದುಕೊಂಡು ಹೋಗಬೇಕು. ಕೆಲವು ಸಂಗೀತಗಾರರು ಸಾಹಿತ್ಯಕ್ಕೆ ಪ್ರಾಧ್ಯಾನ್ಯತೆ ಕೊಡುವುದನ್ನು ಮರೆಯುತ್ತಾರೆ. ಸಾಹಿತ್ಯದ ಅರ್ಥ ಸಂಗೀತದ ಮೂಲಕ ಅರಿತರೆ ಅದರ ಆನಂದವೇ ಬೇರೆ. ಅದನ್ನೇ ನಾವು ಬ್ರಹ್ಮಾನಂದವೆಂದು ಕರೆಯುತ್ತೇವೆ.

ಸಂಗೀತವು ಶಾಸ್ತ್ರೀಯವಾಗಿದ್ದರೆ ಸಕಲ ಐಹಿಕ ಪರಮಾರ್ಥ ಸಂಪದಗಳನ್ನು ಕರುಣಿಸುತ್ತದೆ. ಸ್ವರ–ಲಯ ತಿಳಿದು ಹಾಡಿದಾಗ ಬ್ರಹ್ಮಾನಂದ ಉಂಟಾಗುತ್ತದೆ. ಮೂಲಾಧಾರದಿಂದ ಹೊರಹೊಮ್ಮುವ ನಾದವನ್ನು ತಿಳಿಯುವುದೇ ಮುಕ್ತಿಗೆ ಕಾರಣವಾಗುತ್ತದೆ. ಹೃದಯದ ಬೇರೆ ಬೇರೆ ಸ್ಥಾನಗಳಿಂದ ಹೊರಹೊಮ್ಮುವ ಸಪ್ತ ಸ್ವರಗಳನ್ನರಿಯುವುದೇ ಒಂದು ಆನಂದ. ತಾಳ, ಮೃದಂಗ, ಗತಿ, ಜ್ಞಾನವಿಲ್ಲದೆ ಸುಮ್ಮನೆ ಕಿರುಚಿಕೊಂಡರೆ ಏನು ಸುಖ! ಎಂದು ತ್ಯಾಗರಾಜರು ಅಭಿಪ್ರಾಯ ಪಡುತ್ತಾರೆ.

ಸಂತರು ದಾಸರು ತತ್ವದಿಂದೊಡಗೂಡಿದ ಅಸಂಖ್ಯಾತ ಕೀರ್ತನೆಗಳನ್ನು, ದೇವರ ಲೀಲೆಗಳನ್ನು ಹಾಡಿದ್ದಾರೆ. ಭಗವಂತನ ಸಾಕ್ಷಾತ್ಕಾರವೆ, ಅವರ ಗುರಿಯಾಗಿರುವುದರಿಂದ ಭಕ್ತಿ ಪರವಶರಾಗಿ ಹಾಡಿದ್ದಾರೆ. ಶ್ರೀ ಶಂಕರಾಚಾರ್ಯರು, ರಾಮಾನುಜರು, ಮಧ್ವಾಚಾರ್ಯರು, ಶ್ರೀ ವಲ್ಲಭ, ಶ್ರೀ ನಿಂಭಕರೇ ಮುಂತಾದವರು ಸ್ತೋತ್ರರೂಪದಲ್ಲಿ ದೇವರನ್ನು ಸ್ತುತಿಸಿದ್ದಾರೆ. ಶಂಕರರ 'ಭಜಗೋವಿಂದಂ',

ರಾಮಾನುಜರ ಶರಣಾಗತಿ ಗದ್ಯಗಳನ್ನು ಸಂಗೀತರೂಪದಲ್ಲಿ ಸಲೀಸಾಗಿ ಹಾಡಬಹುದಾಗಿದೆ.

ಇತ್ತೀಚೆಗೆ ರಾಮಾನಂದ, ಕಬೀರದಾಸ್, ಜ್ಞಾನದೇವ, ನಾಮದೇವ, ಸೂರ್‌ದಾಸ, ತುಳಸೀದಾಸ್, ಪುರಂದರದಾಸ, ಕನಕದಾಸ, ತ್ಯಾಗರಾಜರೇ ಮುಂತಾದ ಸಂತಶ್ರೇಷ್ಠರು ತಾವೇ ಕೀರ್ತನೆಗಳನ್ನು ರಚಿಸಿ, ಭಕ್ತಿಯಿಂದ ಹಾಡಿ, ಭಗವತ್ಸಾಕ್ಷಾತ್ಕಾರ ಮಾಡಿಕೊಂಡಿದಾರೆ. ಸಂತ ಮೀರಾ, ಸಂತ ಸಕ್ಕೂಬಾಯಿ, ಅಕ್ಕಮಹಾದೇವಿ ಮುಂತಾದವರು ತಮ್ಮ ಅಮೋಘವಾದ ಭಕ್ತಿಯಿಂದ ತಾವು ನಿಂತ ನೆಲೆಯಲ್ಲೇ ಪರಮಾತ್ಮನ ಸಾಕ್ಷಾತ್ಕಾರ ಪಡೆದು ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ. ಅವರ ಈ ಸಾರ್ಥಕ ಬದುಕಿಗೆ ಸಂಗೀತವೇ ಆಧಾರವೆಂದಾಗ, ಸಂಗೀತಕ್ಕೆ ಅದೆಂತಹ ಅದ್ಭುತ ಶಕ್ತಿ ಇದೆ ಎಂಬುದನ್ನು ನಾವು ಕಾಣುತ್ತೇವೆ.

ಸಂಗೀತ ಹೇಳುವುದರಲ್ಲಿ ಎರಡು ವಿಧ. ಒಂದು ಮನುಷ್ಯರ ಪ್ರೀತಿ ವಿಶ್ವಾಸಗಳಿಗಾಗಿ, ಇನ್ನೊಂದು ದೇವರ ಪ್ರೀತಿ ಮತ್ತು ಅನುಗ್ರಹಕ್ಕಾಗಿ. ಅಕ್ಬರನ ಆಸ್ಥಾನದ ನವರತ್ನಗಳಲ್ಲಿ ಒಬ್ಬನಾದ ತಾನಸೇನನು, ಅಕ್ಬರನಿಗೆ ಸಂಗೀತದ ರುಚಿ ಏನೆಂಬುದನ್ನು ತೋರಿಸಲು, ಹಿಮಾಲಯದಲ್ಲಿದ್ದ ತನ್ನ ಗುರು ಹರಿದಾಸರ ಬಳಿಗೆ ಕರೆದುಕೊಂಡು ಹೋದನಂತೆ. ಒಂದು ತಿಂಗಳು ಕಾದರೂ ಅವರು ಹಾಡದಿರಲು ಕೊನೆಗೆ ತಾನಸೇನನು ಬೇಕೆಂದೇ ಅಪಸ್ವರದಲ್ಲಿ ಹಾಡಿದನಂತೆ. ಆಗ ಅದನ್ನು ಕೇಳಲಾರದೆ ಸ್ವಾಮಿ ಹರಿದಾಸರು ಅಮೋಘವಾಗಿ ಹಾಡಿ ತೋರಿಸಿದರಂತೆ. ಆ ಸಂಗೀತವನ್ನು ತನ್ಮಯನಾಗಿ ಕೇಳಿದ ಅಕ್ಬರನು– "ನಿನ್ನ ಗುರುವಿನ ಸಂಗೀತದ ಎದುರು ನಿನ್ನ ಸಂಗೀತ ಏನೂ ಅಲ್ಲ"! ಎನ್ನಲು ತಾನಸೇನನು– "ಸ್ವಾಮಿ, ನಮ್ಮ ಗುರುಗಳು ಭಗವಂತನಿಗಾಗಿ ತಾವು ಇಷ್ಟ ಪಟ್ಟಾಗ ಮಾತ್ರ ಹಾಡುತ್ತಾರೆ. ನಾನು ನಿಮ್ಮ ಸಂತೋಷಕ್ಕಾಗಿ, ನಿಮಗೆ ಬೇಕೆನಿಸಿದಾಗ, ನೀವು ನೀಡುವ ಹಣಕ್ಕಾಗಿ ಹಾಡುತ್ತೇನೆ. ಇಷ್ಟೇ‌ನನಗೂ ನಮ್ಮ ಗುರುಗಳಿಗೂ ಇರುವ ವ್ಯತ್ಯಾಸ"– ಎಂದು ಹೇಳಿದನಂತೆ. ಅಂದರೆ ಕಲೆಯು ಹೊಟ್ಟೆ ಪಾಡಿಗಾದಾಗ, ಉಪಾಸನಾ ಸೌಂದರ್ಯವನ್ನು ಅದು ಕಳೆದು ಕೊಳ್ಳುತ್ತದೆ. ಸಂಗೀತದ ಜೊತೆ

ಭಕ್ತಿಯನ್ನು ಬೆರೆಸಿದಾಗ ಮಾತ್ರ ಅದು ಉಪಾಸನೆಯಾಗಿ ನಾದ ಬ್ರಹ್ಮದಲ್ಲಿ ಓಲಾಡಿಸುತ್ತದೆ. ಸಾರ್ಥಕ ಬದುಕಿನ ಸಂಕೇತವಾಗುತ್ತದೆ.

ರಾಗದ ಮಹತ್ವವನ್ನು ಅರಿಯ ಬೇಕಾದರೆ ಸಾಹಿತ್ಯದ ಭಾವಕ್ಕನುಸಾರವಾಗಿ ರಾಗವನ್ನು ಅಳವಡಿಸಬೇಕಾದುದು ಅವಶ್ಯಕ. ಸಂತೋಷದ ಭಾವವನ್ನು ವ್ಯಕ್ತಪಡಿಸುವ ಸಾಹಿತ್ಯಕ್ಕೆ ದುಃಖಯುಕ್ತ ರಾಗ ದುಃಖ ಸನ್ನಿವೇಶದಲ್ಲಿ ಸಂತೋಷದ ರಾಗವನ್ನು ಮತ್ತು ಅಳವಡಿಸಿದರೆ ಅದು ಅಭಾಸವಾಗುತ್ತದೆ. ಸಂಗೀತಗಾರನು ಕವಿಯೂ ಆಗಿದ್ದರೆ, ತನ್ನ ರಚನೆಗೆ ತಾನೇ ರಾಗ ಅಳವಡಿಸುವುದು ಸುಲಭಸಾಧ್ಯವಾಗುತ್ತದೆ. ಆದರೆ ಕವಿಯಾದವನು ಸಂಗೀತಗಾರನಾಗಿರುವುದಿಲ್ಲ. ಸಂಗೀತಗಾರನಾಗುವವನು ಕವಿಯಾಗಿರುವುದಿಲ್ಲ. ಒಂದು ವೇಳೆ ಇವೆರಡೂ ಒಬ್ಬನಲ್ಲೇ ಇದ್ದರೆ ಅವನು ಭಕ್ತನಾಗಿರುವುದಿಲ್ಲ. ಕವಿತಾ ಶಕ್ತಿ, ಸಂಗೀತ ಜ್ಞಾನ, ಭಕ್ತಿ ಮೂರೂ ಒಂದೆಡೆ ಸೇರಿದರೆ ಅವನ ಭಾಗ್ಯ ಹೇಳತೀರದು.

ಸಂಗೀತದಲ್ಲಿ ಯಾವ ರಾಗವನ್ನು ಯಾವ ಹೊತ್ತಿಗೆ ಹಾಡಬೇಕೆಂಬುದಕ್ಕೂ ಒಂದು ಕ್ರಮವಿದೆ. ಬ್ರಾಹ್ಮೀ ಮುಹೂರ್ತದಲ್ಲಿ ಭೂಪಾಳ ರಾಗ, ಮದ್ಯಾಹ್ನದ ಹೊತ್ತಿನಲ್ಲಿ ಸಾವೇರಿ ಮತ್ತು ಧನ್ಯಾಸಿ, ಸಂಜೆ ಪೂರ್ವಿಕಲ್ಯಾಣಿ, ರಾತ್ರಿ ಕಾಂಬೋಜಿ ಮತ್ತು ನೀಲಾಂಬರಿ ಮುಂತಾದ ರಾಗಗಳನ್ನು ಹೇಳಲು ಯೋಗ್ಯ ಕಾಲವೆಂದು ಸಂಗೀತ ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ರಾಗಗಳಲ್ಲಿ ಅದ್ಭುತ ಶಕ್ತಿ ಇದೆ. ತ್ಯಾಗರಾಜರು ಒಮ್ಮೆ ತಿರುಪತಿಯಲ್ಲಿ ಹಾಡಿದಾಗ, ಮೂರ್ತಿಯ ಎದುರಾಗಿ ಹಾಕಿದ ಪರದೆ ತಾನಾಗಿಯೇ ಸರಿಯಿತಂತೆ. ಇಂಥ ಅದ್ಭುತ ಶಕ್ತಿ ರಾಗಕ್ಕಿದೆ ಎಂದರೆ ಪವಾಡವೆನಿಸುವುದು ಸಹಜ. ಮೇಘರಂಜಿನಿ ರಾಗದಿಂದ ಮಳೆಯನ್ನು, ದೀಪಕ ರಾಗದಿಂದ ಬೆಂಕಿಯನ್ನು, ನಾಗವರಾಳಿ ರಾಗದಿಂದ ಸರ್ಪದ ಹತೋಟಿ ಮಾಡಬಹುದೆಂದು ಹೇಳುತ್ತಾರೆ. ಇಂತಹ ಅದ್ಭುತವಾದ ಘಟನೆಗಳನ್ನು ಅನೇಕ ಜನ ಸಂಗೀತಗಾರರ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಶ್ರೀ ಪುರಂದರದಾಸರು, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ರೀ ಶ್ಯಾಮಾಶಾಸ್ತ್ರಿಗಳೇ ಮುಂತಾದವರು

ಸಂಗೀತದ ಜೊತೆ ಭಕ್ತಿಯನ್ನು ಸೇರಿಸಿ, ಮನಸಾರೆ ಹಾಡಿ, ಭಗವಂತನ ಕೃಪೆಗೆ ಪಾತ್ರರಾಗಿದ್ದಾರೆ.

ಕೆಲವು ನಿರ್ದಿಷ್ಟ ರಾಗಗಳಲ್ಲಿ ಸಿದ್ಧಿ ಪಡೆದು, ಸರಸ್ವತಿಯ ಕೃಪೆಗೆ ಪಾತ್ರರಾದವರ ಉಲ್ಲೇಖವನ್ನು ಸಂಗೀತಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳಲ್ಲಿ ಕಾಣುತ್ತೇವೆ. ತೋಡಿ ಸೀತಾರಾಮಯ್ಯ, ಬೇಗಡೆ ಸುಬ್ರಮಣ್ಯ ಐಯ್ಯರ್, ಕೇದಾರಗೌಳ ನರಸಿಂಹಯ್ಯಂಗಾರ್, ಭೈರವಿ ಅಬ್ದುಲ್ ಕರೀಂಖಾನ್, ಭೈರವಿ ವೆಂಕಟಸುಬ್ಬಯ್ಯ, ಮುಂತಾದವರನ್ನು ಈ ಹೆಸರುಗಳಿಂದಲೇ ಜನ ಗುರುತಿಸುತ್ತಿದ್ದುದು ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ.

ಸಂಗೀತವು ಭಕ್ತಿಯಿಂದ ಕೂಡಿದ್ದರೆ ಮುಕ್ತಿಗೆ ಕಾರಣವಾಗುತ್ತದೆ. ಅಲ್ಲದೆ ಭಗವಂತನ ಕೃಪೆಗೂ ನಾವು ಪಾತ್ರರಾಗುತ್ತೇವೆ. ಸ್ವರ, ರಾಗ, ತಾನ, ಪಲ್ಲವಿ, ತಾಳ, ಲಯಗಳೊಂದಿಗೆ ಸಾಹಿತ್ಯದ ಅರ್ಥವರಿತು ಹಾಡಿದರೆ ಆ ಆನಂದವೇ ಬೇರೆ! ಸಂಗೀತದ ಪರಮೋದ್ದೇಶ ಹಾಗೂ ಪರಮ ಧ್ಯೇಯ ಸಿದ್ಧಿಸಿದಂತಾಗಿ ಅದು ಸಂಗೀತಗಾರನ ಬದುಕನ್ನು ಸಾರ್ಥಕ ಪಡಿಸುತ್ತದೆ.

ಕರ್ನಾಟಕ ಸಂಗೀತದ ಅಂತಃಸತ್ವ ತುಂಬಾ ಆಳವಾದುದು ಹಾಗೂ ಗಾಢವಾದದ್ದು. ಆದರೂ ಇತ್ತೀಚೆಗೆ ಆಕರ್ಷಣೀಯ ಶಾಖೆಯಾಗಿ "ಸುಗಮ ಸಂಗೀತ", "ಭಾವಗೀತೆ", "ವಚನಗಳು" ಶಾಸ್ತ್ರೀಯ ರಾಗಗಳಲ್ಲಿ ಜನಾದರಣೀಯವಾಗಿವೆ. ಕವಿವರ್ಯ ರಾದ ಕುವೆಂಪು, ಬೇಂದ್ರೆ, ಗೋಪಾಲಕೃಷ್ಣ ಅಡಿಗ, ಜಿ.ಎಸ್. ಶಿವರುದ್ರಪ್ಪ ಮುಂತಾದವರ ಕಾವ್ಯ ರಚನೆಗಳಿಂದ ಸುಗಮ ಸಂಗೀತದ ಕ್ಷೇತ್ರ ಶ್ರೀಮಂತವಾಗುತ್ತಿದೆ ಎಂದರೆ ತಪ್ಪಾಗದು.

ಸಂಗೀತ ಕ್ಷೇತ್ರದಲ್ಲಿ ದೊರೆಸ್ವಾಮಿ ಐಯ್ಯಂಗಾರ್,ಮುತ್ತುಸ್ವಾಮಿ ದೀಕ್ಷಿತರು, ಪಂಚಾಕ್ಷರಿ ಗವಾಯಿಗಳು, ಮಲ್ಲಿಕಾರ್ಜುನ ಮನ್ಸೂರ್, ಕುಮಾರ ಗಂಧರ್ವ, ಬಸವರಾಜ ರಾಜಗುರು, ಬಾಳಪ್ಪ ಹುಕ್ಕೇರಿ, ಎಂ. ಎಸ್. ಸುಬ್ಬಲಕ್ಷ್ಮಿ, ಗಂಗೂಬಾಯಿ ಹಾನಗಲ್ ಮುಂತಾದವರ ಸೇವೆ ಅವಿಸ್ಮರಣೀಯ. ಹಿಂದೆ ಮೈಸೂರು ಮಹಾರಾಜರು

"ತೋಡಾ"ಗಳನ್ನಿತ್ತು ಸಂಗೀತ ವಿದ್ವಾಂಸರನ್ನು ಗೌರವಿಸುತ್ತಿದ್ದರು. ಇಂದು ನಮ್ಮ ಘನ ಸರ್ಕಾರದವರು "ಕನಕ-ಪುರಂದರ" ಪ್ರಶಸ್ತಿಗಳನ್ನಿತ್ತು ಗೌರವಿಸುವುದಕ್ಕೆ ಪ್ರಾರಂಭಿಸಿರುವುದು ತಂಬಾ ಸ್ತುತ್ಯಾರ್ಹವಾದ ಸಂಗತಿಯಾಗಿದೆ.

# ಹಿಂದೂಸ್ಥಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ



ಜಯಶ್ರೀ ಗುತ್ತಲ

**ಮಾ**ನವ ಕೋಟಿಗೆ ಪರಮಾತ್ಮನು ಕರುಣಿಸಿರುವ ವರ ಪ್ರಸಾದ ಸಂಗೀತ. ಇದು ನಾದಬ್ರಹ್ಮನಿಂದ ಹುಟ್ಟಿದ್ದು. ದೇಶದ ಸಾಂಸ್ಕೃತಿಕ ಜೀವನದಲ್ಲಿ ಇಂದು ಸಂಗೀತಕ್ಕೆ ನಿಶ್ಚಿತ ಸ್ಥಾನ ಪ್ರಾಪ್ತವಾಗಿದೆ. ಮಾನವನ ಸಂತೋಷಕ್ಕೆ ಕಲೆಯೇ ಸಾಧನ. ಇದರಲ್ಲಿ ಮೊದಲನೆಯದು ಸಂಗೀತ ಕಲೆ, ಸಂಗೀತವು ಹೃದಯದ ಭಾಷೆ, ದೇವಭಾಷೆ. ಶಿವನು ಡಮರುವನ್ನು. ಕೃಷ್ಣನು ಕೊಳಲನ್ನು, ಸರಸ್ವತಿ ವೀಣೆಯನ್ನು, ನಾರದ ತಂಬೂರಿಯನ್ನು ಬಾರಿಸುವ ಒಳ್ಳೆಯ ಗಾಯಕರು.

ಕಿವಿಗೆ ಇಂಪನ್ನು ಉಂಟುಮಾಡುವ ಗೀತೆಗಳಿಗೆ ಸಂಗೀತವೆನ್ನುತ್ತಾರೆ. ಪಶು ಪಕ್ಷಿ ಪ್ರಾಣಿಗಳು ಕೂಡ ಸಂಗೀತವನ್ನು ಕೇಳಿ

ಆನಂದಿಸುತ್ತವೆ. ಅಂಥದೊಂದು ವೈಶಿಷ್ಟ ಸಂಗೀತಕಲೆಯಲ್ಲಿದೆ. ಸಂಗೀತದಿಂದ ದೊಡ್ಡ ದೊಡ್ಡ ರೋಗಗಳು ಮನೋರೋಗಗಳು ಕೂಡ ಪೂರ್ತಿ ನಾಶವಾಗುತ್ತವೆ: ಅಂಥ ಅಪರೂಪವಾದ ಕಲೆಯಾಗಿದೆ, ಸಂಗೀತ. ಸಂಗೀತದಲ್ಲಿ ಜನಪದ ಸಂಗೀತ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಚಿತ್ರ ಸಂಗೀತ, ಹಾಗೆ ಅನೇಕ ಪ್ರಕಾರಗಳುಂಟು. ಆದರೆ ನಾವು ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತಗಳ ಬಗ್ಗೆ ನೋಡೋಣ.

ಹಿಂದೂಸ್ತಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ ಎರಡು ಪದ್ಧತಿಗಳು ಆದರೆ ಕಾರಣಾಂತರದಲ್ಲಿ ಈ ಎರಡೂ ಪದ್ಧತಿಗಳಲ್ಲಿ ಮೂಲ ತತ್ವಗಳ ಸಾಮ್ಯತೆ ಹೆಚ್ಚು. ಆದರ ಭಿನ್ನತೆಯು ಕಡಿಮೆ, ಭಿನ್ನತೆಯಾಗಲು ಕಾರಣ ಇತಿಹಾಸ. ಹನ್ನೊಂದನೆಯ ಶತಮಾನದಲ್ಲಿ ಭಾರತಕ್ಕೆ ಮುಸ್ಲಿಮರ ಆಗಮನದಿಂದ ಭಾರತೀಯ ಸಂಗೀತದಲ್ಲಿ ಪರಿವರ್ತನೆ ಯಾಯಿತು. ಇದೇ ಸಮಯದಲ್ಲಿ ದಿಲ್ಲಿಯ ದರ್ಬಾರಿನಲ್ಲಿ ಹಜರತ್ ಅಮೀರ ಖುಸ್ರು ಎಂಬ ಪ್ರಸಿದ್ಧ ರಾಜ ಮಂತ್ರಿಯು ಈ ಹಿಂದೂಸ್ತಾನಿ ಸಂಗೀತದ ರೂಪರೇಖೆಗೆ ಕಾರಣೀಭೂತನಾದನು; ಇದನ್ನು ಪರಿಶೀಲಿಸಿದಾಗ ಆಗಿನ ಕಾಲದಲ್ಲಿ ಈ ಕೆಳಗಿನಂತೆ ಗೀತಗಳು ಕಂಡು ಬರುತ್ತದೆ.

**೧) ಗೀತೆಗಳು :– ಗಜಲ್, ಕವ್ವಾಲಿ, ತರಾನಾ, ಖ್ಯಾಲ.**

**೨)ರಾಗಗಳು :– ಜೀಲಪ, ಸಾಜಗಿರಿ, ಯಮನ, ಪೂರ್ಯಾ, ಬರಾರಿತೋಡಿ.**

**೩) ತಾಳಗಳು :– ಝುಮ್ರಾ, ಅಡಾ ಚೌತಲ, ಸುಲಫಾಕ್ ಸವಾರಿ.**

**೪) ವಾದ್ಯಗಳು :– ಸಿತಾರ್, ತಬಲಾ.**

ಭಾರತದಲ್ಲಿ ಸುಮಾರು ೫೦೦ಕ್ಕೆ ಮೇಲ್ಪಟ್ಟು ವಾದ್ಯಗಳಿವೆ. ಕೆಲವು ಪಾಶ್ಚಿಮಾತ್ಯ ವಾದ್ಯಗಳೂ ಸೇರಿವೆ. ಸ್ಪಷ್ಟವಾಗಿ ಸ್ವರಗಳು, ಗಮಕಗಳನ್ನು ನುಡಿಯುವ ವಾದ್ಯಗಳನ್ನು ಮಾತ್ರ ಕರ್ನಾಟಕ ಸಂಗೀತಕ್ಕೆ ಅಳವಡಿಸಿಕೊಳ್ಳಲಾಗಿದೆ. ಅಲ್ಲದೇ ಶ್ರುತಿವಾದ್ಯ. ಸಂಗೀತವಾದ್ಯಗಳೆಂದು ಎರಡು ಬಗೆಗಳಿವೆ ತಂಬೂರಿ ಶ್ರುತಿವಾದ್ಯವೆನಿಸುತ್ತದೆ. ವೀಣೆ, ಪಿಟೀಲು ಮುಂತಾದವುಗಳು ಸಂಗೀತ ವಾದ್ಯಗಳೆನಿಸುತ್ತವೆ. ವೀಣೆ, ಸಿತಾರ್,

ಸಾರಿಕೆಗಳುಳ್ಳ ವಾದ್ಯಗಳು ಗೋಟುವಾದ್ಯ, ಪಿಟೀಲು ಸಾರಿಕೆಗಳಿಲ್ಲದ ವಾದ್ಯಗಳು, ಆಮೇಲೆ ಒತ್ತುವ ವಾದ್ಯ ಹಾರ್ಮೋನಿಯಂ; ಊದುವ ವಾದ್ಯಗಳು, ಕೊಳಲು, ನಾಗಸ್ವರ ಮುಂತಾದವುಗಳನ್ನು ಹೆಚ್ಚಾಗಿ ಕರ್ನಾಟಕ ಸಂಗೀತದಲ್ಲಿ ಬಳಸುತ್ತಾರೆ. ತ್ಯಾಗರಾಜರು ಒಬ್ಬರೇ. ಸಾಕಷ್ಟು ರಾಗಗಳನ್ನು ಸೃಷ್ಟಿಸಿ, ಕೃತಿಗಳನ್ನು ರಚಿಸಿದರು.

ಹದಿನಾರನೇ ಶತಮಾನದಲ್ಲಿ ಕರ್ನಾಟಕ ಸಂಗೀತದ ಪ್ರಸಿದ್ಧ ಗ್ರಂಥವಾದ "ಸ್ವರಗಳ ಕಲಾನಿಧಿ" ರಾಮಾದಿತ್ಯನಿಂದ ರಚಿತವಾಯಿತು. ಕರ್ನಾಟಕ ಸಂಸ್ಥಾನವನ್ನು ಸ್ಥಾಪಿಸಲು ಸಹಾಯ ಮಾಡಿದ ಯತಿವರೇಣ್ಯರಾದ ಶ್ರೀ ವಿದ್ಯಾರಣ್ಯರೇ ಕರ್ನಾಟಕ ಸಂಗೀತವನ್ನು ರೂಪಿಸಿದರೆನ್ನಬಹುದು. ವಿಜಯನಗರದ ಕೃಷ್ಣದೇವರಾಯ ಸಂಗೀತ, ಸಾಹಿತ್ಯದ ಆಶ್ರಯದಾತನಾಗಿದ್ದ. ಶ್ರೀವ್ಯಾಸರಾಯರು, ಪುರಂದರದಾಸರು, ಕನಕದಾಸರು ಈ ಕರ್ನಾಟಕೀಯ ಪದ್ಧತಿಯನ್ನು ರೂಢಿಸಿ, ಹೊಸ ಮಾರ್ಗವನ್ನು ಕಲ್ಪಿಸಿ ಕರ್ನಾಟಕ ಸಂಗೀತದ ಪಿತಾಮಹರೆನಿಸಿದರು. ಕರ್ನಾಟಕ ಸಂಗೀತ ಅಭ್ಯಾಸ ಕ್ರಮ ನಂತರ ಶ್ರೀ ತ್ಯಾಗರಾಜರು, ಶ್ರೀಮುತ್ತುಸ್ವಾಮಿ ದೀಕ್ಷಿತರಿಂದ ಉನ್ನತ ಸ್ಥಾನ ಪಡೆಯಿತು.

ಹಿಂದುಸ್ತಾನಿ ಸಂಗೀತಕ್ಕೆ ಹೆಚ್ಚಾಗಿ ರಾಜಮಹಾರಾಜರೇ ಆಶ್ರಯದಾತರಾಗಿದ್ದರು. ಈ ಸಂಗೀತವು ರಾಜರ ಆಸ್ಥಾನದಲ್ಲಿ ಹೆಚ್ಚಾನ ಪ್ರೋತ್ಸಾಹ ಪಡೆಯಿತು. ರಾಜರ ಆಸ್ಥಾನಗಳಲ್ಲಿ ಹಿಂದೂಸ್ತಾನಿ ಕಛೇರಿಗಳು ನಡೆಯುತ್ತಿದ್ದವು. ದೇಶದ ಹೆಚ್ಚಿನ ಭಾಗದಲ್ಲಿ ವಿಶೇಷತಃ ಉತ್ತರಭಾಗದಲ್ಲಿ ಹಂದೂಸ್ತಾನಿ ಸಂಗೀತ ಅಭಿವೃದ್ಧಿಪಡೆಯಿತು, ಆದರೆ ಕರ್ನಾಟಕೀಯ ಸಂಗೀತವು ರಾಜಾಶ್ರಯಕ್ಕಿಂತ ಭಾಗವತರು, ದಾಸರು ಹಾಗೂ ಮಂದಿರ ದೇವಾಲಯಗಳಲ್ಲಿ, ಪೂಜಾ ಸ್ಥಳಗಳಲ್ಲಿ ಮಾತ್ರ ಸೀಮಿತವಾಗಿದ್ದರಿಂದ ದಕ್ಷಿಣದಲ್ಲಿ ಮಾತ್ರ ಉಳಿದು, ದಕ್ಷಿಣಾದಿ ಸಂಗೀತವೆಂದು ಕರೆಯಲ್ಪಟ್ಟಿತು. ದೇವನೊಬ್ಬ ನಾಮ ಹಲವು ಎಂಬಂತೆ ಸಂಗೀತವು ಕೂಡ ಒಂದೇ. ಹಾಡುವ ಪದ್ಧತಿಗಳು ಮಾತ್ರ ಬೇರೆ ಬೇರೆಯಾಗಿವೆ. ಮೊದಲನೆಯದಾಗಿ ಸಂಗೀತವೆಂಬ ಪದವಿದೆ. ಯಾವ ಗಾನವೇ ಆಗಲಿ ಹಾಡುವಿಕೆಯ ವಾದ್ಯವು, ಅಥವಾ ಮಿಶ್ರಣವು ಸಂಗೀತವೇ ಆಗಿರುತ್ತದೆ. ಇದರಲ್ಲಿ

ಹಿಂದೂಸ್ತಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಲ್ಲವೆ ಒಂದೇ ಗಿಡದ ಎರಡು ಟೊಂಗೆಗಳಿದ್ದಂತೆ ಬೆಳೆದು ಪ್ರಚಲಿತವಾಗಿವೆ. ಈ ಎರಡೂ ಸಂಗೀತಕ್ಕೆ ಸಪ್ತ ಸ್ವರಗಳೇ ಆಧಾರ. ಎರಡೂ ಸಂಗೀತಗಳು ಅನೇಕ ವರ್ಷಗಳಿಂದ ಕೂಡಿಯೇ ಬೆಳೆದಿವೆ. ಎರಡೂ ಸರಿಸಮಾನವಾಗಿವೆ. ಸಂಗೀತವೆಂದರೆ ತಾಳ, ಲಯ ಕೂಡಿರುತ್ತದೆ. ಹಾಗೆ ಹಿಂದೂಸ್ತಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ ಎರಡೂ ಒಂದೇ ಆದರೂ, ಅನುಸರಿಸುವ ಕ್ರಮಗಳು ಮಾತ್ರ ಬೇರೆ ಬೇರೆಯಾಗಿವೆ. ಆದರೆ ಹಿಂದಿ ಭಾಷೆ ಮತ್ತು ಜನರ ಪ್ರಭಾವದಿಂದ ಹೆಚ್ಚಾಗಿ ಹಿಂದಿ ಭಾಷೆಯ ಸಾಹಿತ್ಯ ಪ್ರಭಾವದಿಂದ ಹಿಂದೂಸ್ತಾನಿ ಸಂಗೀತವಾಗಿ ಉಳಿಯಿತು. ಕರ್ನಾಟಕ ಸಂಗೀತವು ದಕ್ಷಿಣದಲ್ಲಿಯೇ ಉಳಿದ ಕಾರಣ ದಕ್ಷಿಣಾದಿ ಸಂಗೀತವೆಂದು ಹೆಸರು ಪಡೆಯಿತು. ಹಿಂದೂಸ್ತಾನಿ ಸಂಗೀತದಲ್ಲಿ ತಂಬೂರಿಯೇ ಶ್ರುತಿಗೆ ಆಧಾರ. ಆದರೆ ಕರ್ನಾಟಕ ಸಂಗೀತದಲ್ಲಿ ತಾಳವೇ ಮೂಲ ಆಧಾರವೆಂದು ಹೇಳಬಹುದು. ಬೆರಳು ಎಣಿಸಿ ಕೈತಟ್ಟಿ ಹಾಡುವುದು ಕರ್ನಾಟಕೀಯ ಅಭ್ಯಾಸವಾದರೆ, ಶ್ರುತಿಯಿಂದ ಹಾಡುವ ಅಭ್ಯಾಸ ಹಿಂದೂಸ್ತಾನಿ ಸಂಗೀತದವರು ಇಟ್ಟುಕೊಂಡ ಪದ್ಧತಿಯಾಗಿದೆ. ಅನುಸರಿಸುವ ಕ್ರಮಗಳು ಒಂದೇ ಆದರೂ ಸಂಗೀತ ಮಾತ್ರ ಬೇರೆ ಬೇರೆಯಾಗಿ ಸ್ವರೂಪಗೊಂಡು ಈ ಎರಡೂ ಬಗೆಯ ಸಂಗೀತವೆಂದು ಹೆಸರು ಪಡೆದವು.

ಗೀತೆ, ವಾದ್ಯ, ನೃತ್ಯದ ಸಮಾವೇಶವೇ ಸಂಗೀತ. ಹಿಂದೂಸ್ತಾನಿ ಸಂಗೀತದಲ್ಲಿ ಧ್ರುಪದ, ಹಾಗೂ ಧಮಾರ ಗಾಯಕಿ ಅಂದರೆ ಗುರು ಮುಖಾಂತರ ಪರಂಪರಾಗತವಾಗಿ ಬಂದದ್ದು. ನಾಯಕಿ ಗಾಯಕಿ ಎಂದರೆ ಅಸ್ಥಾಯಿ ಅಂತರ, ಬಂದಿಸ್ತ ಹಾಡುವುದಕ್ಕೆ ಗಾಯಕಿ ಅನ್ನುತ್ತಾರೆ. ಹೀಗೆ ಪ್ರತಿಯೊಂದರಲ್ಲೂ ಎರಡೂ ಸಂಗೀತಗಳಲ್ಲಿ ವ್ಯತ್ಯಾಸ ಕಂಡುಬಂದರೂ ಸಾಮ್ಯವೇ ಹೆಚ್ಚಾಗಿ ಇರುತ್ತದೆ.

## ಸ್ವ ರ ಗ ಳು

ಇನ್ನು ಸ್ವರಗಳ ಬಗ್ಗೆ ಹೇಳಬೇಕಾದರೆ ಹಿಂದೂಸ್ತಾನಿ ಸಂಗೀತದಲ್ಲಿ ಮತ್ತು ಕರ್ನಾಟಕ ಸಂಗೀತದಲ್ಲಿ ಎರಡರಲ್ಲಿಯೂ ಸ, ಪ, ಸ್ವರಗಳು

ಒಂದೊಂದಿದ್ದು ಮಿಕ್ಕ ಸ್ವರಗಳು ಸಪ್ತಸ್ವರಗಳು.

ಸ ರಿ ರಿ ಗ ಗ ಮ ಮ ಪ ದ ದ ನಿ ನಿ ಸ ಇದರ ಪೈಕಿ ಷಡ್ಜ ಹಾಗೂ ಪಂಚಮ ಅಚಲ ಸ್ವರಗಳೆಂದು, ಉಳಿದ ರಿಷಭ, ಗಾಂಧಾರ, ಮಧ್ಯಮ, ಧೈವತ ಹಾಗೂ ನಿಷಾದವನ್ನು ವಿಕೃತ ಸ್ವರಗಳೆಂದು ಕರೆದಿದ್ದಾರೆ. ಮೊದಲು ಕೋಮಲ ನಿ ನಂತರ ಶುದ್ಧ. ಈ ಏಳು ಸ್ವರಗಳಲ್ಲಿ ಸಾ, ಪ, ಸ್ವರಗಳು ಒಂದೊಂದಿದ್ದು ಮಿಕ್ಕ ರಿ ಗ ಮ ದ ನಿಗಳು ಎರಡೆರಡಾಗಿ ಒಟ್ಟು ಹನ್ನೊಂದು ಸ್ವರಗಳೆಂದು. ಇವುಗಳಲ್ಲಿ ಸರಿಗಮಪದನಿಸ ನಿಂದ ಹಿಡಿದು ಸರಿಗಮಪದನಿಸವರೆಗೆ ಸಾಲಾಗಿ ೩೨ ಗುಂಪುಗಳನ್ನಾಗಿ ವಿಂಗಡಿಸಬಹುದು. ಇವು ಮೇಳಕರ್ತ ಅಥವಾ ಥಾಟ ರಾಗಗಳೆಂದು ಕರೆಯಲ್ಪಡುತ್ತವೆ. ಇವುಗಳಲ್ಲಿ ೧೦ ಥಾಟಗಳನ್ನು ಮಾತ್ರ ಮುಖ್ಯವಾಗಿ ಪರಿಗಣಿಸಿ ಹಿಂದೂಸ್ತಾನಿ ಅಥವಾ ಉತ್ತರಾದಿ ಸಂಗೀತ ಥಾಟಗಳೆಂದು ಕರೆಯುತ್ತಾರೆ. ಈಗ ಹಿಂದೂಸ್ತಾನಿ ಸಂಗೀತದ ಹತ್ತು ಥಾಟಗಳ ಬಗ್ಗೆ ನೋಡೋಣ.

**ಥಾಟಗಳು :–**

(೧)ಥಾಟ ಬಿಲಾವಲ್ (೨) ಥಾಟ ಭೈರವ (೩) ಥಾಟ ಕಾಫಿ (೪) ಥಾಟ ಕಲ್ಯಾಣ (೫) ಥಾಟ ಪೂರ್ವಿ (೬) ಥಾಟ ಖಮಾಜ (೭) ಥಾಟ ಮಾರವಾ (೮)ಥಾಟ ಅಸಾವರಿ (೯) ಥಾಟ ತೋಡಿ (೧೦) ಥಾಟ ಭೈರವಿ ಹೀಗೆ ಹಿಂದೂಸ್ತಾನಿ ಸಂಗೀತದ ೧೦ ಥಾಟಗಳು. ಇನ್ನು ಕರ್ನಾಟಕ ಸಂಗೀತದಲ್ಲಿ ಮೇಲೆ ಕಾಣಿಸಿದ ಥಾಟಗಳಿಗೆ–

(೧) ಧೀರ ಶಂಕರಾಭರಣ (೨) ಮಾಯಾಮಾಳವಗೌಳ, (೩) ಖರಹರಪ್ರಿಯ (೪) ಕಲ್ಯಾಣಿ ಇಲ್ಲವೆ ಮೇಚಕಲ್ಯಾಣಿ ಶ್ರೀಥಾಟ ಪೂರ್ವಿಗೆ ಕಾಮವರ್ಧಿನಿ (೬) ಖಮಾಜ ಥಾಟಕ್ಕೆ ಖಮಾಚ ಇಲ್ಲವೆ, ಹರಿಕಾಂಬೋದಿ ಎಂತಲೂ ಕರೆಯುತ್ತಾರೆ (೭) ಷೂರ್ವಿಕಲ್ಯಾಣ ಹಾಗೂ ಗಮನಶ್ರಮ (೮) ನಟಭೈರವಿ (೯) ಥಾಟ ತೋಡಿಗೆ ಶಂಭಪಂಚಾವರಾಳಿ (೧೦)ಥಾಟ ಭೈರವಿ ತೋಡಿ ಹೀಗೆ ಕರ್ನಾಟಕೀಯ ಸಂಗೀತ, ಹಾಗೂ ಹಿಂದೂಸ್ತಾನಿ ಸಂಗೀತದಲ್ಲಿ ಥಾಟಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಈ ಎರಡೂ ಸಂಗೀತಗಳಲ್ಲಿ ಒಂದೊಂದು ಥಾಟದಲ್ಲಿ ೧೦–೧೫ ರಾಗಗಳು

ಉತ್ಪನ್ನವಾಗಿವೆ. ಹಿಂದುಸ್ಥಾನಿ ಸಂಗೀತದಲ್ಲಿ – ಥಾಟ ಬಿಲಾವಲದಲ್ಲಿ :– ಅಲಯ್ಯಾ, ಬಿಲಾವಲ್ ಶುದ್ಧ ಬಿಲಾವಲ್ ದೇವಗಿರಿ ಬಿಲಾವಲ್, ಸರಾಪರದಾ ಬಿಲಾವಲ್, ಜಯಜಯ ಬಿಲಾವಲ್, ಕಾಫಿ ಥಾಟದಲ್ಲಿ ಕಿರವಾನಿ, ಭೀಮಪಲಾಸ,

ಥಾಟ ಆಸಾವರಿಯಲ್ಲಿ :– ಉದಾ: ಶುದ್ಧ ಆಸಾವರಿ (೨) ಜೀವನಪಾರಿ (೩) ದೇವಗಂಧಾರ, ದರ್ಬಾರಿಕನಡಾ, ಗೋಪಿಬಸಂತ.

ಥಾಟ ತೋಡಿಯಲ್ಲಿ :– ಮಿಯಾಕೆ ತೋಡಿ, ಗುರ್ಜರಿತೋಡಿ, ಬಿಲಾಸಖಾನಿ ತೋಡಿ, ಲಾಚಾರಿ ತೋಡಿ ಹೀಗೆ ರಾಗಗಳು ಉತ್ಪನ್ನವಾಗಿವೆ. ಹೀಗೆ ಕರ್ನಾಟಕ ಸಂಗೀತದಲ್ಲಿಯೂ ಕೂಡಾ ಪ್ರತಿಯೊಂದು ಥಾಟಕ್ಕೆ ೧೦–೧೫ ರಾಗಗಳು ಉತ್ಪನ್ನವಾಗಿವೆ. ಹಿಂದೂಸ್ತಾನಿ ಸಂಗೀತದಲ್ಲಿ ಪ್ರತಿಯೊಂದು ರಾಗ ಹಾಡಲು ಸಮಯ ಉಂಟು ಕರ್ನಾಟಕ ಸಂಗೀತವನ್ನು ಯಾವಾಗಲಾದರು ಹಾಡಬಹುದು. ಅದಕ್ಕೆ ವೇಳೆ ಇಲ್ಲ ಎರಡೂ ಸಂಗೀತಗಳ ರಾಗಗಳನ್ನು ನೋಡಿದಿರಿ ಇನ್ನು ಸ್ವರಗಳನ್ನು ನೋಡೋಣ.

| ಹಿಂದುಸ್ಥಾನಿ | ಥಾಟಗಳ ಸ್ವರಗಳು | ಕರ್ನಾಟಕ |
|---|---|---|
| ಬಿಲಾವಲ್ ಥಾಟ | ಸ ರಿ ಗ ಮ ಪ ದ ನಿ ಸ | ಧೀರ ಶಂಕರಾಭರಣ. |
| ಭೈರವ ಥಾಟ | ಸ ರಿ ಗ ಮ ಪ ದ ನಿ ಸ | ಮಾಯಾಮಾಳವಗೌಳ. |
| ಕಾಫಿ ಥಾಟ | ಸ ರಿ ಗ ಮ ಪ ದ ನಿ ಸ | ಖರಹರಪ್ರಿಯ. |
| ಕಲ್ಯಾಣ ಥಾಟ | ಸ ರಿ ಗ ಮ ಪ ದ ನಿ ಸ | ಮೇಚ ಕಲ್ಯಾಣಿ. |
| ಪೂರ್ವಿ ಥಾಟ | ಸ ರಿ ಗ ಮ ಪ ದ ನಿ ಸ | ಕಾಮವರ್ಧಿನಿ. |
| ಮಾರವಾ ಥಾಟ | ಸ ರಿ ಗ ಮ ಪ ದ ನಿ ಸ | ಗಮನಶ್ರಮ. |
| ಆಸಾವರಿ ಥಾಟ | ಸ ರಿ ಗ ಮ ಪ ದ ನಿ ಸ | ನಟಭೈರವಿ. |
| ಖಮಾಜ ಥಾಟ | ಸ ರಿ ಗ ಮ ಪ ದ ನಿ ಸ | ಹರಿಕಾಂಬೋದಿ. |
| ತೋಡಿ ಥಾಟ | ಸ ರಿ ಗ ಮ ಪ ದ ನಿ ಸ | ಶುಭಪಂತರಾವಳಿ. |
| ಭೈರವಿ ಥಾಟ | ಸ ರಿ ಗ ಮ ಪ ದ ನಿ ಸ | ಹನುಮತೋಡಿ. |

ಈ ಎರಡೂ ಸಂಗೀತಗಳ ಸ್ವರಗಳ ರಿಬೇದಗಳನ್ನು ಅಂದರೆ–ಸ ರಿ ರಿ ಗ ಗ ಮ ಮ ಪ ದ ದ ನಿ ನಿ ಸ ಸ್ವರಗಳನ್ನು ಅಭ್ಯಸಿಸಿದ್ದೇವೆ. ಇನ್ನು ಮುಂದೆ ಈ ಹನ್ನೆರಡು ಸ್ವರಗಳು ೨೨ ರೂಪಗಳನ್ನು ಪಡೆಯುವುದನ್ನು ತಿಳಿಯೋಣ.

ಮಾಯಾಮಾಳವಗೌಳದಲ್ಲಿ ಗಾಂಧಾರ ನಿಷಾದಗಳನ್ನು ಬಿಟ್ಟಾಗ ಸ ರಿ ಮ ಪ ದ ಸ ಎಂದಾಗುತ್ತದೆ. ಇಲ್ಲಿ ರಿ ಸ್ವರವು 'ಸ' ಸ್ವರಕ್ಕೆ ಬಹಳಷ್ಟು ಹತ್ತಿರವಾಗಿ ಧ್ವನಿಸಿ ಸ್ವರದ ಎಡಬಾಗುವಿಕೆ ಗೊತ್ತಾಗುತ್ತದೆ. ಗ –ಸ್ವರದೊಡನೆ ಸರಿಗಮ ಬಂದಾಗ ರಿ ಸ್ವರವು ಒಂದು ನಿರ್ದಿಷ್ಟ ಸ್ಥಾನದಲ್ಲಿ ನಿಂತು ಎರಡನೆಯ ರೂಪ ತಾಳುತ್ತದೆ. ಹೀಗೆ ಮೊದಲನೆಯ ರಿಷಭದಲ್ಲಿ ಎರಡು ಪ್ರಭೇದಗಳಿವೆ ಇನ್ನು ಮುಂದೆ ಶುದ್ಧ ರಿಷಭ ಖರಹರಪ್ರಿಯ ರಾಗದಲ್ಲಿ ಮುಂದಿನ ಮನೆ ಗ ಸ್ವರಕ್ಕೆ ಪಕ್ಕದಲ್ಲಿಯೇ ಇರುವುದರಿಂದ, ರಿ ಸ್ವರಕ್ಕೂ ಗ ಸ್ವರಕ್ಕೂ ವ್ಯತ್ಯಾಸವಿರಲು ಕೊಂಚ ಎಡಕ್ಕೆ ನಿರ್ದಿಷ್ಟ ಸ್ಥಾನದಲ್ಲಿರುತ್ತದೆ. ಮುಂದೆ ಧೀರ ಶಂಕರಾಭರಣದಲ್ಲಿ 'ಗ' ಸ್ವರದಿಂದ ಒಂದು ಮನೆಯ ಅಂತರದಲ್ಲಿ ಇರುವುದರಿಂದ ರಿ ಸ್ವರವು ಬಲವಾಗಿ ಉಳಿಯಲು ಶಕ್ತವಾಗುತ್ತದೆ ಇದು ಶುದ್ಧ ರಿಷಭದ ಎರಡನೆಯ ರೂಪ. ರೀಗೆ ಎರಡು ರಿಷಭಗಳು ಸೇರಿ ನಾಲ್ಕು ನಾಲ್ಕು ರೂಪಗಳನ್ನು ಹೊಂದಿ ಅವುಗಳೊಡನೆ ಷಡ್ಜ ಪಂಚಮ ಸ್ವರಗಳು ಸೇರಿ ೨೨ ಪ್ರಭೇದಗಳಾಗುತ್ತವೆ. ಇವುಗಳನ್ನು ೨೨ ಶ್ರುತಿಗಳೆಂದು ಕರೆಯುತ್ತೇವೆ.

ಈಗ ಮಧ್ಯಸ್ಥಾಯಿ 'ಸ' ಸ್ವರದಿಂದ ತಾರಸ್ಥಾಯಿ 'ಸ' ಸ್ವರದವರೆಗೆ ಚಿಕ್ಕ ರಿ ದೊಡ್ಡ 'ರಿ', ಚಿಕ್ಕ ಗ ದೊಡ್ಡ 'ಗ' ಚಿಕ್ಕ ಮ ದೊಡ್ಡ 'ಮ', ಚಿಕ್ಕ ದ ದೊಡ್ಡ 'ದ', ಚಿಕ್ಕ ನಿ ದೊಡ್ಡ 'ನಿ' ಹೀಗೆ ಸ ಸ್ವರ ಸೇರಿ ಹನ್ನೆರಡು ಸ್ವರಗಳಿವೆ. ಎಲ್ಲ ಮೊದಲನೆಯ ಸ್ವರಗಳನ್ನು ಉಪಯೋಗಿಸಿ (ಸ ರಿ ಗ ಮ ಪ ದ ನಿ ಸ) ಹನುಮತೋಡಿ ಅಥವಾ ಶುದ್ಧ ಭೈರವಿ ರಾಗ ಎಂದು ಕರೆಯುತ್ತೇವೆ. ಈ ರಾಗದಲ್ಲಿ ನಿಷಾದವನ್ನು ದೊಡ್ಡದು ಮಾಡಿದಾಗ ಧೇನುಕಾ (ಸ ರಿ ಗ ಮ ಪ ದ ನಿ ಸ) ಎಂಬ ರಾಗವಾಗುತ್ತದೆ.

ಮುಂದೆ ಹನುಮತೋಡಿಯಲ್ಲಿ ದ ದೊಡ್ಡದು ಮಾಡಿದಾಗ

"ನಾಟಕ ಪ್ರಿಯ" (ಸ ರಿ ಗ ಗ ಮ ಪ ದ ನಿ ಸ) ಎಂಬ ರಾಗವಾಗುತ್ತದೆ. ಈ ನಾಟಕ ಪ್ರಿಯ ರಾಗದಲ್ಲಿ ನಿಷಾದವನ್ನು ಎತ್ತರಿಸಿದಾಗ (ಸ ರಿ ಗ ಮ ಪ ದ ನಿ ಸ) ಕೋಕಿಲಪ್ರಿಯ ಎಂಬ ರಾಗವಾಗುತ್ತದೆ. ಇದೇ ಪ್ರಕಾರವಾಗಿ ಮಧ್ಯಮವನ್ನು ಉಳಿಸಿಕೊಂಡು ರಿ,ಗ ಸ್ವರಗಳ ವ್ಯತ್ಯಾಸ ನೋಡಿದಾಗ –

(೧) ಸ ರಿ ಗ ಮ
(೨) ಸ ರಿ ಗ ಮ
(೩) ಸ ರಿ ಗ ಮ
(೪) ಸ ರಿ ಗ ಮ

ಎಂಬುದಾಗಿ ನಾಲ್ಕು ವ್ಯತ್ಯಾಸಗಳು ಸಿಗುತ್ತದೆ. ಈ ಎಡಬಲದ ನಾಲ್ಕು ನಾಲ್ಕು ಭಾಗಗಳನ್ನು ಉಪಯೋಗಿಸಿ ೪x೪=೧೬ ರೂಪಗಳನ್ನು ಪಡೆಯಬಹುದು. ಈ ೧೬ ರಾಗಗಳಿಗೆ ಮಧ್ಯಮವನ್ನು ಎತ್ತರಿಸಿದಾಗ (ಪ್ರತಿ ಮಧ್ಯಮವನ್ನು ಉಪಯೋಗಿಸಿದಾಗ) ಮತ್ತೆ ೧೬ ರಾಗಗಳನ್ನು ಪಡೆಯಬಹುದು. ಹೀಗೆ ಒಟ್ಟಾರೆ ೩೨ ರಾಗಗಳು ಲೋಕೋಕ್ತಿ ಸಿಗುತ್ತವೆ. ಇನ್ನು ಮುಂದೆ ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಮಾತ್ರ ವಿಶೇಷವಾಗಿ ೩೨ ಆಧಾರ ರಾಗಗಳು ೭೨ ಆಗಿ ಪರಿವರ್ತನೆಯಾಗುವುದನ್ನು ಗಮನಿಸೋಣ.

ಈಗ ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರಗಳು ಸ ರಿ ರಿ ಗ ಗ ಮ ಮ ಪ ದ ದ ನಿ ನಿ ಸ ಎಂದು ಬರುವುದು ನಮಗೆ ಗೊತ್ತಿದೆ. ಪ್ರತಿಯೊಂದು ಸ್ವರಕ್ಕೂ ಅದರದೇ ಆದ ನಾದ ವಿಸ್ತೀರ್ಣವಿರುತ್ತದೆ. ಒಂದು ಸ್ವರದ ನಾದ ವಿಸ್ತೀರ್ಣಕ್ಕೂ ಮುಂದಿನ ಸ್ವರದ ನಾದ ವಿಸ್ತೀರ್ಣಕ್ಕೂ ನಡುವೆ ಬೇಕಾದಷ್ಟು ನಾದಬಿಂದುಗಳಿವೆ. ಹೀಗಿರುವಾಗ ಎರಡನೇ ರಿಷಭದ ಸ್ಥಾನದಿಂದ ಗಾಂಧಾರದ ಸ್ಥಾನದವರೆಗೆ ನಾದ ಬಿಂದುಗಳಿದ್ದು ಈ ರಿಷಭ ಸ್ವರವು ಎರಡನೇ ಸ್ಥಾನಕ್ಕಿಂತ ಮುನ್ನುಗ್ಗಿ ಚಿಕ್ಕ ಗಾಂಧಾರದ ಪರಿಧಿಗೆ ಕೊಂಚ ಹಿಂದೆ ಸರಿದ್ದು ನಂತರ ಗಾಂಧಾರವನ್ನು ಸೇರಿಕೊಂಡು ಸರಿಗಮ ಎರಡೂ ಆಗಬಹುದು. ಈ ವ್ಯವಸ್ಥೆಯಲ್ಲಿ

ಮೊದಲನೆಯ ಗಾಂಧಾರವು ಹೇಳಹೆಸರಿಲ್ಲದಂತಾಗುತ್ತದೆ. ಇದೇ ರೀತಿ ಎರಡನೇ ದೈವತದಿಂದ ಮುನ್ನುಗ್ಗಿ, ಚಿಕ್ಕ ನಿಷಾದದ ಹಿಂದೆ ನಿಂತು ಮೂರನೇ ದೈವತವೆನಿಸಿ, ದೊಡ್ಡ ನಿಷಾದದೊಡನೆ ಸಂಪರ್ಕ ಬೆಳೆಸಿಕೊಂಡು ಪದನಿಸ ಎಂದು ಆಗುತ್ತದೆ. ಇಲ್ಲಿ ಗುರುತಿಸಬೇಕಾದ ಅಂಶ ಈ ಹೊಸದಾಗಿ ಆದ ರಿಷಭ, ದೈವತಗಳು, ಗಾಂಧಾರ, ನಿಷದಗಳ ಪರಿಧಿಯ ಹತ್ತಿರವೇ ಬರುವುದರಿಂದ ಚಿಕ್ಕ ಗಾಂಧಾರ ಮತ್ತು ಚಿಕ್ಕ ನಿಷಾದಗಳ ಸಂಪರ್ಕ ಇವುಗಳೊಂದಿಗೆ ಸಲ್ಲದು. ಇದಕ್ಕೆ ವ್ಯತಿರಿಕ್ತವಾಗಿ ಗಾಂಧಾರವು ಅತಿ ಎಡಕ್ಕೆ ಬಾಗಿ ರಿಷಭದ ವ್ಯಾಪ್ತಿಯನ್ನು ಬಿಟ್ಟು ಕೊಂಚ ಮುಂದೆ ಬಂದು ಅದರೊಡನೆ ಚಿಕ್ಕ ರಿಷಭವನ್ನು ಮಾತ್ರ ಬೆರೆಸಿಕೊಂಡು ಸರಿಗಮ ಎಂದು ಆಗುತ್ತದೆ. ಇದೇ ರೀತಿ ನಿಷಾದವು ಅತಿ ಎಡಕ್ಕೆ ಬಾಗಿ ದೈವತದ ವ್ಯಾಪ್ತಿಗೆ ಕೊಂಚ ಮುಂದೆ ನುಡಿದು ಅದರೊಡನೆ ಚಿಕ್ಕ ದೈವತವನ್ನು ಬೆರೆಸಿ ಕೊಂಡು ಪ ದ ನಿ ಸ ಎಂದು ಆಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶ ಈ ಹೊಸತಾಗಿ ಬಂದ ಗಾಂಧಾರ, ನಾಷಾದಗಳು ದೊಡ್ಡ 'ರಿ' ಮತ್ತು ದೊಡ್ಡ ದೈವತವನ್ನು ಮುಚ್ಚಿ ಬಿಡುತ್ತವೆ. ಹೀಗೆ ಚಿಕ್ಕ ರಿಷಭದೊಡನೆ ಹೊಸದಾಗಿ ಆದ ಗಾಂಧಾರ ಚಿಕ್ಕ ಗಾಂಧಾರ ಮತ್ತು ದೊಡ್ಡ ಗಾಂಧಾರಗಳ ಸಂಪರ್ಕ ಸಾಧ್ಯವಿದೆ. ದೊಡ್ಡ ರಿಷಭ ಬಂದಾಗ ಚಿಕ್ಕ ಗಾಂಧಾರ ಮತ್ತು ದೊಡ್ಡ ಗಾಂಧಾರ ಮಾತ್ರ ಇರಲು ಸಾಧ್ಯ. ಇನ್ನು ಹೊಸ ರಿಷಭದೊಡನೆ ದೊಡ್ಡ ಗಾಂಧಾರ ಮಾತ್ರ ಇರಲು ಸಾಧ್ಯ. ಇದೇ ರೀತಿ ಚಿಕ್ಕ ದೈವತದೊಡನೆ ಹೊಸ ನಿಷಾದ, ಚಿಕ್ಕ ನಿಷಾದ ಮತ್ತು ದೊಡ್ಡ ನಿಷಾದಗಳ ಸಂಪರ್ಕವಿದೆ. ಎರಡನೆಯ ದೈವತದ ಜೊತೆಗೆ ಚಿಕ್ಕ ನಿಷಾದ, ದೊಡ್ಡ ನಿಷಾದಗಳನ್ನು ಸೇರಿಸಬಹುದು. ಇನ್ನು ಹೊಸ ದೈವತದೊಡನೆ ದೊಡ್ಡ ನಿಷಾದ ಮಾತ್ರ ಸೇರಲು ಸಾಧ್ಯ. ಹೀಗೆ ಮೊದಲನೆಯ ವೃಷಭವನ್ನು ರಿ೧ ಎಂದು, ಎರಡನೆಯ ರಿಷಭವನ್ನು ರಿ೨ ಎಂದು ಹೊಸದಾಗಿ ಆದ ಮೂರನೇ ರಿಷಭವನ್ನು ರಿ೩ ಎಂದು, ಕರೆಯುತ್ತೇವೆ. ಮುಂದೆ ಹೊಸದಾಗಿ ಆದ ಗಂಧಾರವನ್ನು ಗ ಎಂದು ಕರೆದು, ಚಿಕ್ಕ ಗಾಂಧಾರವನ್ನು ಗ೨ ಎಂದು, ದೊಡ್ಡ ಗಾಂಧಾರವನ್ನು ಗ೩ ಎಂದು ಕರೆದು ಮೊದಲನೆಯ ಮಾಧ್ಯಮ, ಎರಡನೆಯ

ಮಾಧ್ಯಮವನ್ನು ಮ೧, ಮ೨ ಎಂದು ಪ್ರತ್ಯೇಕಿಸಿ ಬರೆದು ಮುಂದೆ ಚಿಕ್ಕ ದೈವತವನ್ನು ದ೧ ಎಂದು ದೊಡ್ಡ ಧೈವತವನ್ನು ದ೨ ಎಂದು ಹೊಸದಾಗಿ ಆದ ದೈವತವನ್ನು ಗ೩ ಎಂದು, ಹಾಗೆ ಹೊಸದಾಗಿ ಆದ ನಿಷಾದವನ್ನು ನಿ೧ ಎಂದು, ಚಿಕ್ಕ ನಿಷಾದವನ್ನು ನಿ೨ ಎಂದು, ದೊಡ್ಡ ನಿಷಾದವನ್ನು ನಿ೩ ಎಂದು ಕರೆಯುತ್ತಾರೆ.

ಇಲ್ಲಿ ಗಮನಿಸಬೇಕಾದ ಅಂಶ ರಿ೩ ಮತ್ತು ದ೩ ಗಳು ಗ ಮತ್ತು ನಿ ಸ್ವರಗಳಿಗಿಂತ ಹೆಚ್ಚಾಗಿದೆ. ಆದರೆ ಸಾಲಾಗಿ ಹೇಳುವಾಗ 'ರಿ' ಸ್ವರಕ್ಕಿಂತ 'ಗ' ಸ್ವರ ಹೆಚ್ಚು, 'ದ' ಸ್ವರಕ್ಕಿಂತ 'ನಿ' ಸ್ವರ ಹೆಚ್ಚು.

ಮೊದಲನೆಯ, ಎರಡನೆಯ, ಮೂರನೆಯ ರಿಷಭ ದೈವತಗಳನ್ನು ಶುದ್ಧ, ಚತುಶ್ರತಿ ಷಟ್‌ಶ್ರುತಿ ಎಂದು ಹೆಸರಿಸಿ, ಹೊಸದಾಗಿ ಆದ ಗಾಂಧಾರ ನಿಷಾದಗಳನ್ನು ಅಂದರೆ ಮೊದಲು ಬರುವ ಸ್ವರವನ್ನು ಶುದ್ಧವೆಂದು ಕರೆಯಲಾಗಿದೆ. ಗ೨ ಸ್ವರವನ್ನು ಸಾಧಾರಣ ಗಾಂಧಾರವೆಂದು. ಗ೩ ಸ್ವರವನ್ನು ಅಂತರ ಗಾಂಧಾರವೆಂದು, ನಿ೨ ಸ್ವರವನ್ನು ಕೈಶಿಕ ನಿಷಾದವೆಂದೂ, ನಿ೩ ಸ್ವರವನ್ನು ಕಾಕಲಿ ನಿಷಾದವೆಂತಲೂ ಕರೆದು ಮಧ್ಯಮವನ್ನು ಶುದ್ಧ ಮಾಧ್ಯಮ, ಪ್ರತಿ ಮಾಧ್ಯಮ ಎಂದು ಹೆಸರಿಸಿದ್ದಾರೆ. ಹೀಗೆ ಷಡ್ಜ, ಶುದ್ಧ ರಿಷಭ, ಚತುಶ್ರುತಿ ರಿಷಭ, ಷಟಶ್ರುತಿ, ರಿಷಭ, ಶುದ್ಧ ಗಾಂಧಾರ, ಸಾಧಾರಣ ಗಾಂಧಾರ, ಅಂತರ ಗಾಂಧಾರ, ಶುದ್ಧ ಮಧ್ಯಮ, ಪ್ರತಿ ಮಧ್ಯಮ, ಪಂಚಮ ಶುದ್ಧ ದೈವತ, ಚತುಶ್ರುತಿ ದೈವತ, ಷಟಶ್ರುತಿ, ದೈವತ, ಶುದ್ಧ ನಿಷಾದ, ಕೈಶಿಕ ನಿಷಾದ, ಕಾಕಲಿ ನಿಷಾದ ಎಂಬ ಸ್ವರಗಳನ್ನು ಪಡೆಯುತ್ತೇವೆ.

ಈಗ ಸ ರಿ ಗ ಮ ಎಂಬ ಗುಚ್ಛದಲ್ಲಿ ನಾವು ಹೀಗೆ ಪಡೆಯಬಹುದು.

(೧) ಸ ರಿ ಗ ಮ (೨) ಸರಿ೧ ಗ೨ ಮ೧ (೩) ಸರಿ೧ ಗ೩ ಮ೧ (೪) ಸರಿ೨ ಗ೨ ಮ೧ (೫) ಸ ರಿ೨ ಗ೩ ಮ೧ (೬) ಸ ರಿ೩ ಗ೩ ಮ೧ ಪದನಿಸ ಭಾಗದಲ್ಲಿ (೧) ಪದ೧ ನಿ೧ ಸ (೨) ಪದ೧ ನಿ೨ ಸ (೩) ಪದ೧ ನಿ೩ ಸ (೪) ಪದ೨ ನಿ೨ ಸ (೫) ಪದ೨ ನಿ೩ ಸ (೬) ಪದ೩ ನಿ೩ ಸ ಇವುಗಳ ಮಿಶ್ರಣದಿಂದ ೬x೬=೩೬ ರಾಗಗಳನ್ನು ಪಡೆಯುತ್ತೇವೆ.

ಹೀಗೆ ಒಟ್ಟು ಕರ್ನಾಟಕ ಸಂಗೀತದಲ್ಲಿ ೭೨ ಮೇಳಕರ್ತ ರಾಗಗಳು ಸಿಗುತ್ತವೆ.

ಈ ಎರಡು ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತ ಪದ್ಧತಿಗಳ ಮೂಲ ಒಂದೇ ಆದರೂ ಅನುಸರಿಸುವ ಮಾರ್ಗದಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ.

| ಕರ್ನಾಟಕ ಸಂಗೀತ | ಹಿಂದೂಸ್ತಾನಿ ಸಂಗೀತ |
|---|---|
| ೧) ವಿಕೃತ ಸ್ವರಗಳಿಗೆ ಶುದ್ಧ ಚತುಶ್ರುತಿ ಷಟಶ್ರುತಿ ಇದರಲ್ಲಿ ೧೬ ಸ್ವರಗಳಿವೆ. | ಕೋಮಲ ಹೆಸರಗಳನ್ನು ವಿಕೃತಿ ಸ್ವರಗಳಿಂದ ಕೊಡಲಾಗಿದೆ. |
| ೨) ರಾಗ ಪದ್ಧತಿಯಲ್ಲಿ ಜನಕ ಜನ್ಯ ಅನುಸರಿಸುತ್ತದೆ. | ರಾಗ, ರಾಗಿಣಿ ಪದ್ಧತಿ ಇದ್ದು ಧಾಟಿ ಪದ್ಧತಿಯನ್ನು ರಾಗ ವಿಭಜನೆಗೆ ಅಳವಡಿಸಲಾಗಿದೆ. |
| ೩) ರಾಗಗಳು ಒಂದೇ ನಮೂನೆ ಇದ್ದರೂ ಹೆಸರುಗಳು ಭಿನ್ನವಾಗಿವೆ. ಕ್ರಮವಾಗಿ ಮೋಹನ, ಹಿಂದೋಳ, ಶಂಕರಾಭರಣ ಮಾಯಾಮಾಳವಗೌಳ, ಚಕ್ರವಾಕ ಇತ್ಯಾದಿ | ಇವುಗಳನ್ನು ಭೂಪ ಮೂಲಕೌಂಸ ಬಿನಾನಲ್ ಭೈರವ, ಅಹಿರ ಭೈರವಾ, ಇತ್ಯಾದಿ ಕರೆಯುತ್ತಾರೆ. |
| ೪) ತಾಳದಲ್ಲಿ ಸಪ್ತತಾಳ. ಚಾಪ ತಾಳ ಹೆಚ್ಚು ಪ್ರಚಲಿತವಿದೆ. ಉದಾ : ಧೈವತಾಳ (೧೪ ಮಾತ್ರೆ) ತ್ರಿಮಟತಾಳ, ಜಂಪೆತಾಳ (೧೦ ಮಾತ್ರೆ ). | ತ್ರಿತಾಳ, ಚೌತಾಳ, ಜಪತಾಳ, ದಾದ್ರಾ ತಲವಾಡ, ಝುಮರಾ, ಅಡಾಚೌತಾಲ ಇತ್ಯಾದಿ. |
| ೫) ಮುತ್ತು ಸ್ವಾಮಿ ದೀಕ್ಷಿತರು, ಶಾಮಾ ಶಾಸ್ತ್ರಿಗಳು ಹಾಗೂ ತ್ಯಾಗರಾಜರು. | ಗ್ವಾಲೀಯರ ಘರನಾ, ಆಗ್ರಾ ಘರಾನ ಜಯಪೂರ ಘರಾನಾ, ಕಿರಣ ಘರಾನಾ. |
| ೬) ಭಕ್ತಿ ಭಾವನೆ ಉತ್ಪತ್ತಿ. | ಮನೋಭಾವನೆಗಳ ಉತ್ಪತ್ತಿ. |

| | |
|---|---|
| ೭) ದೇವಾಲಯ ಹಾಗೂ ಪೂಜಾ ಮಂದಿರಗಳ ಆಶ್ರಯ ಪಡೆದಿದೆ. | ರಾಜಾಶ್ರಯ ಪಡೆದಿದೆ |
| ೮) ಭಕ್ತಿ ಲಯ. | ಶೃಂಗಾರ ಲಯ. |

ಇನ್ನು ಮುಖ್ಯವಾಗಿ ಹಿಂದೂಸ್ಥಾನಿಯ ಸಂಗೀತದಲ್ಲಿ ಘರನಾ ಪದ್ಧತಿ ಅಂದರೆ ವಂಶ ಪರಂಪರೆಯಿಂದ ಬಂದ ರಾಗ ಸಂಗೀತ ಘರಾನಾ ಪದ್ಧತಿ ಸಂಗೀತವೆಂದು ಪ್ರಚಲಿತವಾಗಿದೆ.

| | |
|---|---|
| ೧) ಗ್ವಾಲಿಯರ ಘರಾನಾ | ಲಯಕಾರಿ, ಅಂದೋಲನಾ ಗಮಕ, ಬೋಲತಾನಾ, ಹಮೀರ ಇತ್ಯಾದಿ. |
| ೨) ಆಗ್ರಾ ಘರನಾ. | ಪರಜ, ಕಾನಡಾ ಪ್ರಕಾರ, ಡಬ್ಬಲತಾಣ ಇತ್ಯಾದಿ ರಾಗಗಳು. |
| ೩) ಜಯಪೂರ ಘರನಾ | ಕಾಫಿ, ಕಾನಡಾ, ನಾಯಕಿ, ಕಾನಡಾ ಸ್ಪೇಶಲ್ ಬಂದಿಸ್ತ ತಾನಗಳ ರಾಗಗಳು . |
| ೪) ಕಿರಾನಾ ಘರಾನಾ | ಲಲಿತ, ಶುದ್ಧ ಸಾರಂಗ, ಮಾಲ ಕೌಂಸ ಮುಲ್ತಾನಿ, ದರ್ಬಾರಿ. |

ತಂಬೂರಿ ಮೇಳ ಹಾಗೂ ಸಾಥಸಾರಂಗಿ ಮತ್ತು ತಬಲಾದಲ್ಲಿ ಒಳ್ಳೆಯ ಗಾಯಕಿ ಕಂಡುಬರುತ್ತದೆ. ಅಲ್ಲದೆ ಧೃಪದ, ಧಮಾರ, ಮತ್ತು ಟಪ್ಪಾ ತರಾನಾದಲ್ಲಿ ಬಹಳ ನಿಷ್ಠಾವಂತ ಪಂಡಿತರಿದ್ದರು ಮತ್ತು ಎಲ್ಲ ತಾಳದಲ್ಲಿ ಹಾಡುತ್ತಿದ್ದರು. ಅವರು ಝುಂಪತಾಳಕ್ಕೆ ಸಾದರಾ ತಾಳ ಎನ್ನುತ್ತಿದ್ದರು. ಹಿಂದೂಸ್ತಾನಿ ದೀಪಚಂದಿ ತಾಳಕ್ಕೆ ಚಾಚರ ತಾಳವೆಂತಲೂ ಕರೆಯುತ್ತಿದ್ದರು.

## ಇನ್ನು ಪ್ರಮುಖ ಗಾಯಕರಲ್ಲಿ

ಹಿಂದೂಸ್ತಾನಿ ಸಂಗೀತದಲ್ಲಿ (೧) ತಾನಸೇನ (೨) ಬಡೇಗುಲಾಮ ಅಲೀಖಾನ್ (೩) ಪಂಡಿತ ಬಸವರಾಜ (೪) ಸವಾಯಿ ಗಂಧರ್ವರು

(೫) ಪಂಡಿತ ಭೀಮಸೇನ ಜೋಶಿಯವರು (೬) ಪದ್ಮಭೂಷಣ ಡಾ|| ಗಂಗೂಬಾಯಿ ಹಾನಗಲ್ ಅವರು (೭) ದಿ. ಡಾ|| ಮಲ್ಲಿಕಾರ್ಜುನ ಮನ್ಸೂರ್‌ರವರು, (೮) ದಿ. ಪ. ಬಸವರಾಜ ರಾಜಗುರು ಮುಂತಾದವರು ಪ್ರಸಿದ್ಧರಾಗಿದ್ದಾರೆ ಕರ್ನಾಟಕ ಸಂಗೀತದಲ್ಲಿ ಚಂ. ಭೈ. ವೈದ್ಯನಾಥ ಭಾಗವತರು, ಬಾಲಮುರುಳೀ ಕೃಷ್ಣ, ಶಮ್ಮಂಗುಡಿ ಶ್ರೀನಿವಾಸ ಅಯ್ಯಂಗಾರರು, ಪಾಲಘಟ ನಾರಾಯಣಸ್ವಾಮಿ, ರಾಜ ಅಯ್ಯಂಗಾರರು ಶ್ರೀಮತಿ ಸುಬ್ಬಲಕ್ಷ್ಮಿ ಹಾಗೂ ರಾಧಾ ಜಯಲಕ್ಷ್ಮಿ ಮುಂತಾದ ಗಾಯಕರು ಪ್ರಮುಖರಾಗಿದ್ದಾರೆ. ಹೀಗೆ ಹಿಂದೂಸ್ತಾನಿ ಸಂಗೀತ ಮತ್ತು ಕರ್ನಾಟಕ ಸಂಗೀತಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

## ಇನ್ನು ವಾದ್ಯ ನುಡಿಯುವವರ ಬಗ್ಗೆ

ಹಿಂದೂಸ್ತಾನಿ ಸಂಗೀತದಲ್ಲಿ :- ವಿಲಾಯತಖಾನ, ಅಲಿ ಅಹಮ್ಮದ್ ಖಾನ, ರಾಜೀವ ತಾರಾನಾಥ, ಶಿವಕುಮಾರ ಶರ್ಮಾ, ಪನ್ನಾಲಾಲ ಘೋಷ, ವಿಜಯ ರಾಘವರಾವ್, ಹರಿಪ್ರಸಾದ ಚೌರಾಸಿಯಾ, ಭಿಸಮಿಲ್ಲಾ ಖಾನ್, ಗಜಾನನರಾವ್ ಜೋಶಿ, ಪ್ರಮುಖರಾದರೆ, ಕರ್ನಾಟಕ ಸಂಗೀತದಲ್ಲಿ ಬಾಲಚಂದ್ರ ದೊರೆಸ್ವಾಮಿ ಅಯ್ಯಂಗಾರರು, ಶಿವಾನಂದ, ಶಾರದ, ಮಹಾಲಿಂಗಂ, ಬಾಲಮುರಳೀಕೃಷ್ಣ, ಶ್ರೀರಮಣಿ, ಚಿನ್ನಿ ಮೌಲಾನಾಸಾಬ್ ಮುಂತಾದವರು ಪ್ರಸಿದ್ಧಿ ಹೊಂದಿದ್ದಾರೆ.

## ಇನ್ನು ಪ್ರಮುಖ ರಾಗಗಳ ಬಗ್ಗೆ

ಇನ್ನು ರಾಗಗಳ ಬಗ್ಗೆ ಹೇಳಬೇಕೆಂದರೆ ಹಿಂದೂಸ್ತಾನಿಯಲ್ಲಿ ನಾಲ್ಕು ಪ್ರಕಾರ ಅಂದರೆ ಬೆಳಗಿನ, ಮಧ್ಯಾಹ್ನದ, ಸಾಯಂಕಾಲ ಹಾಗೂ ರಾತ್ರಿ ಕಾಲ, ಹಾಗೂ ಮಧ್ಯರಾತ್ರಿ ಹೀಗೆ ಅನುಗುಣವಾಗಿ ಬೇರೆ ಬೇರೆ ರಾಗಗಳನ್ನು ಹಾಡುವ ಪದ್ಧತಿ ಇರುತ್ತದೆ.

| | |
|---|---|
| ಬೆಳಗಿನ ರಾಗಗಳು :- | ಭೈರವ, ರಾಮಕಲಿ, ಅಹೀರಭೈರವ, ನಟಭೈರವ, ಮಿಯಾಕಿ ತೋಡಿ, ಬಿಲಾಸಖಾನಿ ತೋಡಿ, ಇತ್ಯಾದಿ. |
| ಮಧ್ಯಾಹ್ನದ ರಾಗಗಳು:- | ಬೃಂದಾವನಿ, ಸಾರಂಗ, ಶುದ್ಧ ಸಾರಂಗ, ಲಂಕಾದಹನ ಸಾರಂಗ, ಸಾಮಂತ ಸಾರಂಗ, ಭೀಮಪಲಾಸ, |

ಮಧುವಂತಿ, ಧನಶ್ರೀ ಇತ್ಯಾದಿ.

ಸಾಯಂಕಾಲದ ರಾಗಗಳು:- ಪೂರ್ವಿ, ಭೂಪ, ಮಾರವಾ, ಶುದ್ಧಕಲ್ಯಾಣ, ಯಮನಕಲ್ಯಾಣ, ಕೇದಾರ, ಮಾರುಬಿಹಾಗ, ಯಮನ.

ರಾತ್ರಿಯ ರಾಗಗಳು:- ಬಿಹಾಗ, ಶಂಕರಾ, ದುರ್ಗಾ, ಹಂಸಧ್ವನಿ, ಜಯ ಜಯವಂತಿ, ದರ್ಬಾರಿಕಾನಡ, ಜಿಂಝುಟಿ.

ಮಧ್ಯರಾತ್ರಿಯ ರಾಗಗಳು:- ಮೂಲಕೌಂಸ, ಚಂದ್ರಕಂಸ, ಜೋಗಕಂಸ, ಮಧುಕಂಸ.

## ಇನ್ನು ಎರಡು ಸಂಗೀತಗಳ ತಾಳಗಳ ವ್ಯತ್ಯಾಸ

ಮೊದಲು ತಾಳವೆಂದರೇನು? –ಸಂಗೀತ ರಚನೆಗಳನ್ನು ಹಾಡಲು ಅನುಸರಿಸುವ ವೇಗವನ್ನು ನಿರ್ಣಯ ಮಾಡುವ ಕ್ರಿಯೆಗೆ ತಾಳವೆಂದು ಹೆಸರು. ಗಾಯನ, ವಾದನ, ಮತ್ತು ನೃತ್ಯ ಇವು ಮೂರಕ್ಕೂ ತಾಳವೇ ಪ್ರಧಾನವಾಗಿದೆ.

ಇನ್ನು ತಾಳದಲ್ಲಿ ವಿಲಂಬಿತ ಅಂದರೆ ಅತಿ ಸಾವಕಾಶ ಮಧ್ಯ ಲಯ ಅಂದರೆ ಅದಕ್ಕಿಂತಲೂ ಸಾವಕಾಶ ವಿಲಂಬಿತದಲ್ಲಿ ೧ಕ್ಕೆ ೪ ಮಾತ್ರೆ ಹಿಡಿದರೆ ೪೦ ಮಾತ್ರೆಗಳು ಇರುತ್ತದೆ. ಧೃತಲಯ ಅಂದರೆ ೧೦ ಮಾತ್ರೆ (ಫಾಸ್ಟು) ಹೀಗೆ ಹಿಂದೂಸ್ತಾನಿ ಪದ್ಧತಿಯಲ್ಲಿ ೩ ಲಯ ಅತಿ ವಿಲಂಬಿತ, ಮಧ್ಯ ವಿಲಂಬಿತ, ದೃತ ವಿಲಂಬಿತ ಎಂದು ಜಗತ್ತಿನಲ್ಲಿ ೩ ಲೋಕಗಳಂತೆ ಸಂಗೀತದಲ್ಲಿಯೂ ಕೂಡ (೧) ತೀನತಾಳ (೨) ತಿಲವಾಡಾ (೩) ಟಪ್ಪಾ ಎಂಬ ಮೂರು ತಾಳಗಳಿವೆ.

ಮುಖ್ಯವಾಗಿ ಹಿಂದೂಸ್ತಾನಿ ಸಂಗೀತದಲ್ಲಿ ವಿಷ್ಣು ನಾರಾಯಣ ಭಾತಕಾಂಡೆಯವರು ೬ ಭಾಗ ರಚನೆ ಮಾಡಿ ಹಿಂದಿಯಲ್ಲಿ ಹಿಂದೂಸ್ತಾನಿ ಸಂಗೀತ ರಚನೆ ಮಾಡಿ ಅನೇಕ ಗವಾಯಿಗಳ ಕಡೆ ಗೀತ ಸಂಗ್ರಹ ಮಾಡಿದರು. ಆದ್ದರಿಂದಲೇ ಹಿಂದೂಸ್ತಾನಿ ಸಂಗೀತದಲ್ಲಿ ಧ್ರುಪದ, ಧಮಾರ ಮತ್ತು ಖ್ಯಾಲ, ಬಡೇಖ್ಯಾಲೆ, ಛೋಟಾ ಖ್ಯಾಲೆ ಮತ್ತು ಟಪ್ಪಾ ತರಾನಾ ಇತ್ಯಾದಿಗಳನ್ನು ಅವರು ಪ್ರಚಾರದಲ್ಲಿ ತಂದುದರಿಂದ ಅವು ಹಿಂದೂಸ್ತಾನಿ

ಸಂಗೀತವಾಗಿ ಪ್ರಚಲಿತವಾಗಲು ಕಾರಣವಾಯಿತು. ಹಿಂದುಸ್ಥಾನಿ ಸಂಗೀತದಲ್ಲಿ ಗ್ವಾಲಿಯರ ಗಾಯಕಿಯಲ್ಲಿ ಕೃಷ್ಣಪಂಡಿತ, ಪಂಡಿತ ಜಸರಾಜ ಅವರು ಒಳ್ಳೆ ಪ್ರಸಿದ್ಧ ಗಾಯಕರಾಗಿದ್ದರು. ಆಗ್ರಾ ಘರಾನಾದಲ್ಲಿ ವಿಲಾಯತ ಹುಸೇನರು ಮತ್ತು ನಿಸಾರ ಹುಸೇನರು, ಆಮೇಲೆ ಫಯ್ಯಾಜಖಾನ್ ಇತ್ಯಾದಿ ಪ್ರಸಿದ್ಧ ಗಾಯಕರಾಗಿದ್ದರು. ಇನ್ನು ಕಿರಾನಾ ಘರಾನಾದಲ್ಲಿ ಪಂಡಿತ ಭೀಮಸೇನ ಜೋಶಿ, ಪಂಡಿತ, ಸವಾಯಿಗಂಧರ್ವ, ಡಾ. ಗಂಗೂಬಾಯಿ ಹಾನಗಲ್ ಇವರು ಮುಖ್ಯ ಗಾಯಕರೆನಿಸಿಕೊಂಡಿದ್ದಾರೆ.

ಇನ್ನು ಕರ್ನಾಟಕ ಸಂಗೀತ, ಹಾಗೂ ಹಿಂದೂಸ್ತಾನಿ ಸಂಗೀತ ಎರಡರಲ್ಲಿಯೂ ಅಲ್ಲದೆ ಹಾರ್ಮೋನಿಯಮ್ ನುಡಿಸುವುದರಲ್ಲಿ ಪಂಡಿತ ಶೇಷಾದ್ರಿ ಗವಾಯಿಯವರು ಕೂಡಾ ಒಳ್ಳೆಯ ಪ್ರಸಿದ್ಧಿ ಗಾಯಕರಾಗಿದ್ದಾರೆ. ಕಿರಾನಾ ಘರಾನಾ ಪದ್ಧತಿಯಲ್ಲಿ ಪಂಡಿತ ಮಾಧವಗುಡಿಯವರು ಹೆಸರಾಂತ ಗಾಯಕರಲ್ಲಿ ಒಬ್ಬರಾಗಿದ್ದಾರೆ.

ಹಿಂದೂಸ್ತಾನಿಯಲ್ಲಿ ಸಂಗೀತದಲ್ಲಿಯ ತಾಳಗಳ ಪ್ರಕಾರಗಳನ್ನು ನೋಡೋಣ.

| | |
|---|---|
| (೧) ಝುಂಪತಾಳ - ೧೦ ಮಾತ್ರೆ | ಧೀನಾ ಧಿ ಧಿ ನಾ ತೀ ನಾ ಧೀ ಧಿ ನಾ. |
| (೨) ದಾದರಾ- ೬ ಮಾತ್ರೆ | ೧-೩-ಪಟ್ಟು ೬ ಹುಸಿ ತಬಲಾದ ಬೋಲ, ಧಾಗೀನ ಧಾತೀನಾ. |
| (೩) ಜುಮ್ರಾ- ೧೪ ಮಾತ್ರೆ | ೧-೪-೧೧ ಪಟ್ಟು ೬ ಹುಸಿ ತಬಲಾದ ಬೇಲ ಧಿನ್ ಧಾಗೆ ತಿರಕಿಟ, ಧಿನ್ ಧಿನ್ ದಾಗೆ ತಿರಕಿಟ, ತಿನ್ ತಾಗ ತಿರಕಿಟ ಧಿನ್ ಧಿನ್ ಧಾಗೆ ತಿರಕಿಟ. |
| (೪) ಕೇರವಾ ತಾಳ- ೮ ಮಾತ್ರೆ | ಧಾಗಿನತಿನಕಧಿನ್ |
| (೫) ಧೀಪಚಂದ- ೧೪ ಮಾತ್ರೆ | ೧-೪-೧೧ ಪಟ್ಟು ೮ ಹುಸಿ, ತಬಲಾದ ಬೇಲ. ಧಾ, ದಿನ, ಧಾಧಾಗಿ, ತಿನ್, ತಾ ತಿನ್ ಧಾ ಧಾ ಗ ಧಿನ್ |

(೬) ತಿನ್‌ತಾಲ ಇದಕ್ಕೆ- ೧೬ ಮಾತ್ರೆ ೧-೫-೧೩ ಪಟ್ಟು ೯ ಹುಸಿ,

ಕರ್ನಾಟಕ ಸಂಗೀತದಲ್ಲಿ ಏಳು ತರಹದ ತಾಳಗಳಿವೆ.

(೧) ಧೃಪತಾಳ (೨) ಮಠ್ಯತಾಳ (೩) ರೂಪಕತಾಳ (೪) ಝುಂಪೆತಾಳ, (೫) ತ್ರಿಪಟತಾಳ (೬) ಅಟತಾಳ (೭) ಏಕತಾಳ

| | | |
|---|---|---|
| ಧೃವತಾಳ | – | ೧೪ ಮಾತ್ರೆ. |
| ಮಠ್ಯತಾಳ | – | ೧೦ ಮಾತ್ರೆ. |
| ರೂಪಕತಾಳ | – | ೬ ಮಾತ್ರೆ. |
| ಝುಂಪೆತಾಳ | – | ೧೦ ಮಾತ್ರೆ. |
| ತ್ರಿಪಟತಾಳ | – | ೭ ಮಾತ್ರೆ. |
| ಆಟತಾಳ | – | ೧೪ ಮಾತ್ರೆ. |
| ಏಕತಾಳ | – | ೪ ಮಾತ್ರೆ. |

ಹೀಗೆ ಹಿಂದೂಸ್ತಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತಗಳಲ್ಲಿ ವ್ಯತ್ಯಾಸಗಳುಂಟು, ಆದರೆ ಯಾವ ಹಾಡೇ ಹಾಡಿದರೂ ರಾಗ, ಲಯ,

# ಜಾನಪದ ಸಂಗೀತ



ಪ್ರೊ|| ಹೆಬ್ಬಾಳೆ ಜಗನ್ನಾಥ ಎಸ್.

ಜಾನಪದ ಸಂಗೀತ ಕುರಿತು ವಿಚಾರ ಮಾಡುವ ಮೊದಲು 'ಜಾನಪದ' ಎಂದರೇನು? ಎನ್ನುವುದರ ಕುರಿತು ತಿಳಿದು ಕೊಳ್ಳುವುದು ಉಚಿತವೆನಿಸುತ್ತದೆ. ಜಾನಪದ ಎಂದರೆ ಜನ, ಜನತೆ, ಜನಾಂಗ ಎಂದು ಅರ್ಥವಾಗುತ್ತದೆ. ಈ ಅರ್ಥ ಸತ್ಯವಾದರೂ ಜಾನಪದ ದೃಷ್ಟಿಯಿಂದ ಬಹಳ ಸಂಕುಚಿತವೆನಿಸುತ್ತದೆ. ಜಾನಪದ (Folklore) ಎನ್ನುವುದು ಜಗತ್ತಿಗೆ ಸಂಬಂಧಪಟ್ಟದ್ದು: ಜಗತ್ತಿನ ಎಲ್ಲಾ ಜಾತಿ ವರ್ಗಗಳಿಗೂ ಭಾಷೆ-ಸಂಸ್ಕೃತಿಗೂ ಸಂಬಂಧಪಟ್ಟಿದ್ದು ಆಗಿದೆ.

ಜಾನಪದದಲ್ಲಿ ಪುರಾಣಗಳು, ದಂತಕಥೆಗಳು, ಹಾಡುಗಳು, ಗಾದೆಗಳು, ಒಗಟು-ಒಡಪುಗಳು, ಹಬ್ಬ ಹರಿದಿನಗಳು, ಜಾತ್ರೆ-ಉತ್ಸವಗಳು, ಬೈಗಳು, ಆಟ-ಪಾಠಗಳು, ಕುಣಿತಗಳು, ಬಯಲಾಟಗಳು, ಮದುವೆ ಪದ್ಧತಿಗಳು, ವಿಧಿ ಕ್ರಿಯೆಗಳು, ಒಂದೇ-ಎರಡೇ ನೂರಾರು ವಿಷಯಗಳು ಸೇರಿರುತ್ತವೆ. ಹೀಗಾಗಿಯೇ ಡಾ||ದೇ. ಜವರೇಗೌಡರು

'ಬಾಲಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಅಡಗಿದಂತೆ, ಜಾನಪದದಲ್ಲಿ ಎಲ್ಲವೂ ಅಡಗಿದೆ ಎನ್ನುವುದು' ಔಚಿತ್ಯಪೂರ್ಣ ವಿಚಾರವಾಗಿದೆ.

ಜಾನಪದದ ಅರ್ಥ ಮತ್ತು ವ್ಯಾಪ್ತಿ ವಿಶಾಲವಾಗಿರುವುದರಿಂದ ಅಧ್ಯಯನದ ಅನುಕೂಲಕ್ಕೆಂದು ಜಾನಪದ ವಿದ್ವಾಂಸ ಆರ್.ಎಸ್.ಬಾಗ್ಸ್ ಜಾನಪದವನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಿ ಕ್ರಿಯಾತ್ಮಕ ಬಗೆ ಪ್ರಕಾರದಲ್ಲಿ ಸಂಗೀತ ವಿಷಯ ಸೇರಿಸುತ್ತಾರೆ. ಅಂದರೆ ಜಾನಪದದ ಒಂದು ರೂಪ ಜಾನಪದ ಸಂಗೀತ ಎಂದರ್ಥ. ಜಾನಪದ ಸಂಗೀತ (Folk music) ದೇವರು, ವ್ಯಕ್ತಿ ಮುಂತಾದವರ ಗುಣಗಾನದಿಂದ ಕೂಡಿದ್ದಾಗಿದೆ. ಈ ಹಾಡುಗಾರಿಕೆ ಕುಣಿತ ವಾದ್ಯಗಳ ಸಮೇತ ನಡೆಯುವ ಕ್ರಿಯಾ ಮಾಧ್ಯಮ. ಹೀಗಾಗಿಯೇ ಸಂಸ್ಕೃತದಲ್ಲಿ ಗೀತಂ ನರ್ತನಂ ವಾದ್ಯಂ ಚತ್ರಯಂ ಸಂಗೀತ ಮುಚ್ಚತೇ ಎನ್ನುವ ವ್ಯಾಖ್ಯಾನವಿದೆ. ಸಂಗೀತವು ಶೃಂಗಾರ, ಭಕ್ತಿ, ನಲಿವು, ವಿರಹ, ಯಾಚನೆ, ಶೌರ್ಯ ಮುಂತಾದ ರಸಭಾವ ವಿಶೇಷತೆಗಳಿಗೆ ಅನುವು ಮಾಡಿಕೊಡುತ್ತದೆ. ಏಕೆಂದರೆ, ಜಾನಪದ ಸಂಗೀತ ಶಿಷ್ಟ ಸಂಗೀತದ ಚೌಕಟ್ಟಿಗೆ ಒಳಪಡುವುದಿಲ್ಲ. ಬೇಕಾದಂತೆ ರಾಗ, ಧಾಟಿಗಳಲ್ಲಿ ವ್ಯತ್ಯಾಸ ಮಾಡಿಕೊಳ್ಳಬಹುದು. ಇದು ಜಾನಪದ ಸಂಗೀತದ ವಿಶಿಷ್ಟ ಗುಣವಾಗಿದೆ.

ಜಾನಪದ ಹಾಡುಗಳನ್ನು ರಚನೆ ಮಾಡುವ ಮತ್ತು ಹಾಡುವ, ಬೋಧಿಸವ ಕ್ರಮಬದ್ಧವಾದ ತಂತ್ರ ಜಾನಪದ ಸಂಗೀತದಲ್ಲಿಲ್ಲ. ಒಂದು ಹಾಡು ಹೇಳುವಾಗ ಮತ್ತೆ ಮತ್ತೆ ವ್ಯಕ್ತವಾಗುವ ಪಲ್ಲವಿ ಪುನರಾವರ್ತನೆಯಾಗುತ್ತದೆ. ಉದಾಹರಣೆಗಾಗಿ ಜಾನಪದ ತ್ರಿಪದಿಗಳನ್ನು ಹತ್ತಾರು ಧಾಟಿಯಲ್ಲಿ ಹಾಡಬಹುದು. ಜಾನಪದ ಕಲಾವಿದ ಒಂದು ಹಾಡಿನ ಧಾಟಿ ಮರೆತರೆ ಇನ್ನೊಂದು ಸೇರಿಸಿ ಹಾಡುತ್ತ ಹೋಗುತ್ತಾನೆ. ಶ್ರೋತೃಗಳು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸುವುದಿಲ್ಲ. ಏಕೆಂದರೆ ಜಾನಪದ ಸಂಗೀತ ಪ್ರತಿಕ್ರಿಯೆಗೆ ಎಡೆಮಾಡಿಕೊಡುವ ಮಾಧ್ಯಮ ಅಲ್ಲ. ಹೀಗಾಗಿ ಜಾನಪದ ಸಂಗೀತದ ಮುಖ್ಯವಸ್ತು ಹಾಡಾಗಿರುತ್ತದೆ. ಹಾಡು ಆಯಾಸ ಬೇಸರಗಳನ್ನು ಕಳೆಯುವುದರ ಜೊತೆಗೆ ಸಂತೋಷವನ್ನು ತಂದುಕೊಡುತ್ತದೆ. ಆಯಾ ಹಾಡಿನೊಂದಿಗೆ ವಾದ್ಯಗಳನ್ನು ನುಡಿಸಿದರೆ,

ತನ್ನೊಂದಿಗೆ ಇನ್ನೊಬ್ಬರನ್ನೂ ಸಂತೋಷಗೊಳಿಸಬಹುದು. ಅಂಥ ಪ್ರಮುಖ ಹಾಡುಗಳು ಇವು. ಬಯಲಾಟದ ಹಿಮ್ಮೇಳದ ಹಾಡು, ಬುರ್‌-ಬುರ್ ಪೋಚಮ್ಮ ಹಾಡು, ಭೂತೇರ ಹಾಡು, ಗೊಂದಲಿ ಹಾಡು, ಭಜನೆ ಹಾಡು, ಲಾವಣಿ ಹಾಡು, ಬೀಸುವ ಹಾಡು, ಡೊಳ್ಳು ಮತ್ತು ಕೋಲಾಟದ ಹಾಡುಗಳು ಜಾನಪದ ಸಂಗೀತದ ಪ್ರತೀಕವಾಗಿವೆ.

**ಬಯಲಾಟದ ಹಿಮ್ಮೇಳದ ಹಾಡು.**

ಹಳ್ಳಿಯಲ್ಲಿ ಆಟದ ಮಾಸ್ತರ ಎನ್ನುವ ಹೆಸರು ಬಯಲಾಟ ಕಲಿಸುವ ವ್ಯಕ್ತಿಗಿದೆ. ಈ ವ್ಯಕ್ತಿ ಬಯಲಾಟ ಕಲಿಸುವುದನ್ನೇ ಮುಖ್ಯ ವೃತ್ತಿಯಾಗಿರಿಸಿಕೊಂಡು ಹಳ್ಳಿಯಿಂದ ಹಳ್ಳಿಗೆ ಅಲೆದು, ಅಲ್ಲಲ್ಲಿ ಆಟವನ್ನು ಕಲಿಸಿ, ಅವರಿಂದ ಆಟವಾಡಿಸುತ್ತಾನೆ. ಆಟದ ಸೂತ್ರಧಾರನಾಗಿ ಪ್ರತಿಯೊಂದು ಹಾಡನ್ನು ಹಿಮ್ಮೇಳದೊಂದಿಗೆ ಹಾಡುತ್ತಾನೆ. ಮುಖ್ಯವಾದ ದೃಶ್ಯವಾದ ದೃಶ್ಯ ಬಂದಾಗ ಅಲ್ಲಲ್ಲಿ ತಾನೇ ವಿವಿಧ ಧ್ವನಿಗಳಲ್ಲಿ ಮಾತನಾಡುತ್ತಾನೆ. ಹಾಡು ಹೇಳುತ್ತಾನೆ. ತಕ್ಕ ಸಂಗೀತದ ಬೆಳಕು ಚೆಲ್ಲುತ್ತಾನೆ.

**ಬುರ-ಬುರ ಪೋಚಮ್ಮನ ಹಾಡು**

ಡೋಲಕದ ಮೇಲೆ ಬುರ್‌-ಬುರ್ ಎನ್ನುವ ರೀತಿ ಬಾರಿಸುತ್ತ ಹಾಡುತ್ತ ಮನೆಯಿಂದ ಮನೆಗೆ ಅಲೆದು ಭಿಕ್ಷೆ ಬೇಡುವ ವೃತ್ತಿ ಗಾಯಕರೇ ಬುರ-ಬುರ ಪೋಚಮ್ಮ. ಕಾಲಿಗೆ ಗೆಜ್ಜೆ, ಮುಖಕ್ಕೆ ಬಿಳಿಬಣ್ಣ ಇಲ್ಲವೆ ಒಣಮುಖದೊಂದಿಗೆ ಹಾಡನ್ನು ಹಾಡುತ್ತಾರೆ. ಕಾಲಿಗೆ ಕಟ್ಟಿಕೊಂಡ ಗೆಜ್ಜೆ ಮತ್ತು ಡೋಲಕ ಸಂಗೀತದ ಬೆಳಕು ಚೆಲ್ಲುತ್ತವೆ. ಹಾಡಿನೊಂದಿಗೆ ಸಂಗೀತ ಮುಂದುವರೆಯುತ್ತದೆ. ಈ ಮೇಳದಲ್ಲಿ ಮುಖ್ಯವಾಗಿ ಇಬ್ಬರಿರುತ್ತಾರೆ.

ಬಾರಮ್ಮ ಬಾ ತಾಯಿ
ಕಲ್ಲಮ್ಮ ಮಲ್ಲಮ್ಮ
ಬೇಗ ಬಾರಮ್ಮ
ಹಿಟ್ಟು ತಾರಮ್ಮ

ಎನ್ನುತ್ತ ಡೋಲಕ ಬಡಿಯುತ್ತ ಹಾಡು ಹೇಳುವರು. ಕೆಲವೊಮ್ಮೆ ಚಬುಕದಿಂದ ಹೊಡೆದುಕೊಂಡು ಕುಣಿದಾಡುವರು. ಸಾಧಾರಣ ಉಡುಪು ಇವರಿಗಿರುತ್ತದೆ.

## ಭೂತೇರ ಪದ

ಭೂತೇರ ವೃತ್ತಿಗಾಯಕರು ಬೀದರ ಜಿಲ್ಲೆಯಲ್ಲದೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಕನ್ನಡ ಜಾನಪದದ ಒಂದು ವೃತ್ತಿಗಾಯಕ ಸಂಪ್ರದಾಯ. ಇವರಿಗೆ ಈ ಹೆಸರು ಹೇಗೆ ಬಂತು ಎಂಬುದಕ್ಕೆ ಸ್ಪಷ್ಟ ಉತ್ತರವಿಲ್ಲ. ಹೆಣ್ಣು ದೇವತೆಯಾದ ಎಲ್ಲಮ್ಮ ತಾಯಿಗೆ ಧೂಪ ಹಾಕುವರು. 'ಧೂಪೇರು' ಈ ಶಬ್ದವೇ ಮುಂದೆ ಭೂತೇರ ಆಗಿರಬಹುದೆಂದು ಕ್ಯಾತನಹಳ್ಳಿ ರಾಮಣ್ಣನವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಆದರೂ ಈ ಶಬ್ದದ ಕುರಿತು ಇನ್ನು ಶೋಧನೆ ನಡೆಯಬೇಕಾಗಿದೆ.

ಭೂತೇರ ಮೇಳದಲ್ಲಿ ಕನಿಷ್ಟ ಐದು ಜನರಿರುತ್ತಾರೆ. ಗಂಡಸರೇ ಇರಬಹುದು ಇಲ್ಲವೆ ಹೆಂಗಸರೇ ಇರಬಹುದು. ಇಷ್ಟೇ ಜನರು ಇರಬೇಕೆಂಬ ನಿಯಮ ಕೂಡ ಇಲ್ಲ. ಐದು ಜನರಲ್ಲಿ ಒಬ್ಬನು ತನ್ನ ಶರೀರದ ಮೇಲೆ ಕರಡಿಗೆಯಿಂದ ಕೂಡಿದ ಬಟ್ಟೆ ಧರಿಸುತ್ತಾನೆ. ಕೈಯಲ್ಲಿ ದೀವಟಿಗೆಯನ್ನು ಹಿಡಿದುಕೊಂಡಿರುತ್ತಾನೆ. ಎರಡನೆಯವನು ತಂತಿವಾದ್ಯ ನುಡಿಸುತ್ತಿರುತ್ತಾನೆ. (ಅದಕ್ಕೆ ತುಂತುಣಿ ಎನ್ನುವರು) ಮೂರನೆಯವನು ಚರ್ಮವಾದ್ಯ ನುಡಿಸುವನು. (ಚರ್ಮವಾದ್ಯವೆಂದರೆ ಢೋಕ) ಇನ್ನಿಬ್ಬರು ಹಸ್ತದಲ್ಲಿ ತಾಳಗಳನ್ನು ಹಿಡಿದುಕೊಂಡು ಭಾರಿಸುತ್ತಾರೆ. ಉಳಿದ ನಾಲ್ಕು ಜನರ ವೇಷಭೂಷಣ ಎಂದಿನಂತೆ ಸಾಮಾನ್ಯವಾಗಿರುತ್ತದೆ. ಇವರು ಮನೆಯಿಂದ ಮನೆಗೆ ಅಡ್ಡಾಡಿ ಆಯಾ ಮನೆಯ ಯಜಮಾನರು ಕೊಟ್ಟಂಥ ಹಣ ಧವಸಧಾನ್ಯಗಳನ್ನು ಪಡೆದುಕೊಳ್ಳುವರು. ಹೀಗೆ ಅವರು ತಮ್ಮ ಜೀವನ ನಡೆಸುತ್ತಾರೆ. ಇವರು ಹಾಡುವ ಹಾಡಿನಲ್ಲಿ ತಾಯಿ ಎಲ್ಲಮ್ಮಳ ಚಿತ್ರಣ ಕಂಡುಬರುತ್ತದೆ. ಅವಳಿಗೆ ಕೊಟ್ಟ ಹಿಂಸೆ ಮುಂತಾದ ಕುರಿತು ಚಿಂತನೆ ವ್ಯಕ್ತಪಡಿಸುವಲ್ಲಿ ಜಾನಪದ ಕವಿಗಳು ತಮ್ಮ ಪ್ರತಿಭೆ

ಎಂದು ತಾಯಿ ಎಲ್ಲಮ್ಮ ದೇವತೆಯನ್ನು ಬಂಜೆಯೆಂದು ಕರೆದು ಆಕೆಯ ಮನನೋಯಿಸುವಲ್ಲಿ ಸಮಾಜದ ಜನರು, ಬಂಧುಬಳಗದವರು, ಗೆಳತಿಯರು ಕಾರಣವಾದಂತೆ ಉಲ್ಲೇಖವಿದೆ. ಹೀಗೆ ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಹಾಡು ಮುಂದುವರೆಯುತ್ತದೆ. ಕೇಳುಗರಾದ ಸಹೃದಯರಲ್ಲಿ ಇನ್ನೂ ಭೂತೇರ ಹಾಡು ಕೇಳಬೇಕೆನಿಸುತ್ತದೆ.

## ಗೊಂದಲಿಗರ ಹಾಡು

ಪ್ರಮುಖ ವೃತ್ತಿಗಾಯಕರಲ್ಲಿ 'ಗೊಂದಲಿಗರು' ಪ್ರಸಿದ್ಧರು. ಇವರು ನೀಡುವ ಪ್ರದರ್ಶಲಕ್ಕೆ 'ಗೊಂದಲ ಮೇಳ' ಎಂದು ಹೆಸರು. ಹಿನ್ನೆಲೆ ವಾದ್ಯಗಳ ಮೂಲಕ ದೊಡ್ಡ ದನಿಯಲ್ಲಿ ಕಥೆಯನ್ನು ಹೇಳುವುದರ ಮೂಲಕ ಗೊಂದಲವೆಬ್ಬಿಸುವುದರಿಂದ ಈ ಹೆಸರು ಬಂದಿರಬಹುದೆಂದು ಕಲಾವಿದರ ಅಭಿಪ್ರಾಯ. ಇವರ ಕುಲದೇವತೆ ಅಂಬಾ ಭವಾನಿ. ಗೊಂದಲಿಗರ ಮೇಳದಲ್ಲಿ ಸಾಮಾನ್ಯವಾಗಿ ಮೂರು ಜನರಿರುತ್ತಾರೆ. ಇವರಲ್ಲಿ ನಾಯಕನು ತಾಳವನ್ನು, ಉಳಿದಿಬ್ಬರು ಸಂಬಾಳವಾದ್ಯ ಮತ್ತು ಶ್ರುತಿಯನ್ನು ಹಿಡಿದಿರುತ್ತಾರೆ.

ಸಾಮಾನ್ಯವಾಗಿ ಯುಗಾದಿ, ನವರಾತ್ರಿಯ ೯ ದಿನಗಳು ಜಾತ್ರೆ-ಉತ್ಸವ, ಸುಗ್ಗಿಯ ಸಂದರ್ಭಗಳಲ್ಲಿ ಗೊಂದಲ ಹಾಕುವ ರೂಢಿ. ಗೊಂದಲಿಗರು ಇರುವ ಕಡೆಗಳಲ್ಲಿ ಮದುವೆ ಸಂದರ್ಭದಲ್ಲಿ ಅವರಿಂದ ಕಥೆಯನ್ನು ಹೇಳಿಸುವ ಸಂಪ್ರದಾಯ ಇದೆ.ಇದರಿಂದ ಸಕಲರಿಗೂ ಶುಭವಾಗುವುದೆಂಬ ನಂಬಿಕೆ ಉಂಟು. ತಲೆಗೆ ಕೆಂಪು ಅಥವಾ ಬಿಳಿಯ ರುಮಾಲು ಧೋತರ, ನೀಳವಾಗಿ ಅದರ ಮೇಲೆ ಹಾಕಿದ ಕೋಟು, ಕೊರಳಲ್ಲಿ ಸಣ್ಣ ಕವಡೆಗಳ ಸರ, ಕಾಲಿಗೆ ಗೆಜ್ಜೆ- ಇವಿಷ್ಟು ಕಲಾವಿದರ ವೇಷಭೂಷಣಗಳು. ಶ್ರುತಿಯ ನುಡಿಸುವಿಕೆಯಾದ ನಂತರ ಪ್ರದರ್ಶನ ಪ್ರಾರಂಭವಾಗುತ್ತದೆ. ನಾಯಕನು ಗಣಪತಿ ಸ್ತುತಿಯನ್ನು ತಾಳದ ಗತ್ತಿನೊಂದಿಗೆ ಪ್ರಾರಂಭಿಸುತ್ತಾನೆ. ಇವನ ಹಾಡಿನ ಲಯಕ್ಕೆ ಸಂಬಾಳವೂ ಮೇಳಗೊಡಿಸುತ್ತದೆ. ಗಣಪತಿ ಸ್ತುತಿಯಾದ ನಂತರ ದೇವಿಯ ಸ್ತುತಿ ನಡೆಯುತ್ತದೆ. ಅಂಬಾ ಭವಾನಿಯ ಭಕ್ತರಾದ ಕಲಾವಿದರು ದೇವಿಯನ್ನು ಕುರಿತು ಮಾಯಾ ಜನನಿ ಅಂಬಾ ಜಗದಂಬಿ ಮಾಯಾ ಮಾಯಾ

ಜಗದಂಬಿ ವರವ ನೀಡು ತಾಯಿ ಎಂದು ಪ್ರಾರ್ಥಿಸುತ್ತಾರೆ. ನಂತರ ತಮಗೆ ಬರುವ ಸುಮಾರು ೫೦-೬೦ ಕಥೆಗಳ ಹೆಸರು ಹೇಳಿ ಗೊಂದಲ ಹಾಕಿಸುವವರಿಗೆ ಯಾವ ಕಥೆ ಹೇಳಬೇಕೆಂದು ಕೇಳುತ್ತಾರೆ. ಅಂಥ ಕಥೆಗಳಲ್ಲಿ ಪ್ರಮುಖವಾದವುಗಳು :-

೧) ಸಿರಿಯಾಳನ ಕಥೆ ೨) ರಾಜ ಹರಿಶ್ಚಂದ್ರನ ಕಥೆ ೩) ಶ್ರವಣಕುಮಾರನ ಕಥೆ ೪) ಶಿವಶಂಕರನ ಕಥೆ ೫) ಬಾಳವತಿಯರ ಕಥೆ ೬) ಗುಣಸಾಗರಿಯ ಕಥೆ ೭) ಎಲ್ಲಮ್ಮಳ ಕಥೆ ೮) ಬಸವೇಶ-ಚನ್ನಬಸವೇಶ್ವರರ ಕಥೆ ಇತ್ಯಾದಿಗಳು.

ಹಾಡಿನ ರೂಪದ ಕಥೆಗಳನ್ನು ರಾಗವಾಗಿ ಹೇಳುತ್ತಾ ಮಧ್ಯೆ-ಮಧ್ಯೆ ಸ್ವಾರಸ್ಯವಾಗಿ ವಿವರಿಸುತ್ತಾರೆ. ಕಥೆಯ ನಿರೂಪಣೆ ತುಂಬಾ ಸೊಗಸಾಗಿರುತ್ತದೆ. ಒಬ್ಬ ಕಲಾವಿದ ರಾಜನಾದಾಗ ಮತ್ತೊಬ್ಬ ಕಲಾವಿದ ಮಂತ್ರಿಯಾಗುವನು. ಹೀಗೆ ಕಥೆಯಲ್ಲಿ ವಾದ-ವಿವಾದ, ಪ್ರಶ್ನೆ ಉತ್ತರಗಳ ರೂಪದಲ್ಲಿ ಮುಂದುವರಿಯುತ್ತದೆ. ಕಥೆ ಕುಳಿತು ಕೇಳುವ ಜನರಿಗೆ ಕಥೆ ಬೇಸರವಾಗದಿರಲೆಂದು, ಕಥೆಯ ಮಧ್ಯೆ-ಮಧ್ಯ (ಹಾಸ್ಯ ಕಥೆ, ಉಪ ಕಥೆಗಳನ್ನು) ಹೇಳುವರು.

ಗೊಂದಲಿಗರ ಕಥಾ ನಿರೂಪಣೆಯ ವೈಖರಿ ವಿಶಿಷ್ಟವಾದದು. ನಾಲ್ಕು ಹಾಡಿನ ಸಾಲುಗಳಲ್ಲಿಇದರ ಉದಾಹರಣೆಯುನ್ನು ನೋಡಬಹುದು. ಪ್ರಥಮದಲ್ಲಿ ನಾಯಕ "ಕುರೀನ ಎಯ್ರಾಣ್" ಎಂದು ರಾಗವಾಗಿ ಹಾಡಿದರೆ ಎರಡನೆಯವನು ಅದೇ ರಾಗವನ್ನು. ಧ್ವನಿಯನ್ನು ಮುಂದುವರಿಸಿಕೊಂಡು ಹೋಗುತ್ತಾನೆ. ಹಾಗೆ ಹರ ನನ್ನ ಮಹದೇವ ಎನ್ನುತ್ತಾನೆ.

ಹಾಡು ಕಥೆ ಸರಳವಾಗಿ ಭಾವನಾಪೂರ್ಣವಾಗಿ ಮುಂದುವರಿಯುತ್ತವೆ. ಇಂಪಾದ ಹಾಡು, ಗೆಜ್ಜೆಯ ಸದ್ದು, ವಾದ್ಯದ ಹಿಮ್ಮೇಳ ಶ್ರೋತೃಗಳನ್ನು ಸೆರೆಹಿಡಿಯುತ್ತದೆ. ಗೊಂದಲಿಗರು ಹೇಳುವ ಪೌರಾಣಿಕ, ಐತಿಹಾಸಿಕ ಕಥೆಗಳಲ್ಲಿ ಸಾಹಿತ್ಯದ ಅಮೂಲ್ಯ ನೀತಿಯೇ ಅಡಗಿದೆ. ಇವರಲ್ಲಿ ಲಾವಣಿಗಳು, ತತ್ವದ ಪದಗಳು, ಶಾಸ್ತ್ರದ ಪದಗಳು, ಜೊತೆಗೆ ಸಾಮಾಜಿಕ ಕಥೆಗಳು, ಹೀಗೆ ಹಾಡುಗಳ ಭಂಡಾರವೇ ಇವೆ.

ಅರಳಿಸುವಲ್ಲಿ ಜಾಣರಾಗಿದ್ದಾರೆ.

ಸಮಾಜದಲ್ಲಿ ದೇವರಿರಲಿ-ದಿಂಡರಿರಲಿ, ಯಾರೇ ಇರಲಿ ಮಹಿಳೆಯಾಗಿ ಹುಟ್ಟಿ ಮದುವೆ ಮಾಡಿಕೊಂಡು ನಾಲ್ಕು ಮಕ್ಕಳು ಹೆಡೆದರೆ ಅವಳಿಗೆ ಗೌರವ. ಇಲ್ಲವಾದರೆ ಸರ್ವಜ್ಞನ ವಚನ ನೆನಪಾಗುತ್ತದೆ. 'ಬಸರಾಗದವಳ ಬಾಳವೆವು ಬೀಸುಗೆಯ ಬಾಸಲು ಕಾದಂತೆ', ಮಕ್ಕಳು ಹಡೆಯದೆ ಹೋದರೆ ಸುರುವಾಯಿತು ಟೀಕೆ ಟಿಪ್ಪಣಿ. ಅವಳು ಗೊಡ್ಡಿ (ಬಂಜೆ) ಎನ್ನುವುದು. ಇತರೆ ಕಾರ್ಯ ಕಲಾಪಗಳಲ್ಲಿ ಅವಳಿಗೆ ಭಾಗಿಯಾಗಲು ಅನುಮತಿ ಕೊಡುವುದಿಲ್ಲ.

ಅಯ್ಯಯ್ಯೋ ಶಿವಾ ಶಿವಾ ಶಂಕರಾ ಇನ್ನೇನು ಗತಿ? ಕುಟ್ಟುವರ ಮನಿಗೆ ಕುಟ್ಟಲು ಹೋದರ ಗೊಡ್ಡಿ ಹೊಂಬಾಳೆಂದು ತಟ್ಟಿಮುಚ್ಚಿದರು. ಬಾಸುವರ ಮನಿಗೆ ಬೀಸುವಲ್ಲಿ ಹೋದರ ಬಂಜಿ ಹೊಂಟಾಳೆಂದು ಬಾಗಿಲನ್ನು ಮುಚ್ಚಿದರು. ಇನ್ನೇನು ಗತಿ, ಏನು ಮಾಡಲಿ?

ಗೊಂದಲಿಗರ ಮೇಳದಲ್ಲಿ ಇಡೀ ರಾತ್ರಿ ನಡೆಯುವ ಕಥಾ ಪ್ರಸಂಗ ಸೂರ್ಯೋದಯಕ್ಕೆ ಸ್ವಲ್ಪ ಮುನ್ನ ಮುಕ್ತಾಯವಾಗುತ್ತದೆ. ನಂತರ ದೇವಿಯ ಕಲಶಕ್ಕೆ ಕಾಯಿ ಒಡೆದು ಕರ್ಪೂರದಿಂದ ಆರತಿ ಬೆಳಗುವರು. ಊರಿನ ಯಜಮಾನ ಕಥೆಯನ್ನು ಹೇಳಲು ಆಹ್ವಾನಿಸಿರುವುದರಿಂದ ವೀಳ್ಯ, ಮತ್ತು ಸಂಭಾವನೆ ಹಣವನ್ನು ಗೊಂದಲಿಗರಿಗೆ ಕೊಡುವನು. ಮೇಳದ ಕಲಾವಿದರು ಹಣಪಡೆದ ನಂತರ ಗೊಂದಲ ಹಾಕಿಸಿದವರ ಹೆಸರು ಹೇಳಿ ಅಂಬಾದೇವಿ ಅವರಿಗೆ ಒಳಿತು ಮಾಡಲಿ ಎಂಬ ಶುಭಾಶಯದ ನುಡಿ-ನುಡಿದು ಎಲ್ಲರಿಗೂ ಮತ್ತೊಮ್ಮೆ ವಂದಿಸಿ ಕಥೆಗೆ ಮಂಗಲ ಹಾಡುವ ಪದ್ಧತಿ.

## ಭಜನೆ ಹಾಡು

ದೇವರನ್ನು ಸ್ತುತಿಮಾಡುವುದೆಲ್ಲ ಭಜನೆ ಎಂದರ್ಥವಾಗುತ್ತದೆ. ಭಜನೆ ದೈವೀ ಉಪಾಸನೆಯ ಮಹತ್ವದ ಸಾಧನಗಳಲ್ಲಿ ಒಂದು. ಸೇವತ್ವವನ್ನು ನಂಬಿದ ಎಲ್ಲ ಮತೀಯರೂ ಭಜನೆಯನ್ನು ರೂಢಿಸಿಕೊಂಡಿದ್ದಾರೆ. ಇವರಲ್ಲಿ ಶಿವೋಪಾಸಕರು ಶ್ರಾವಣ, ಶಿವರಾತ್ರಿ, ಸಮಯದಲ್ಲಿ ಭರಾಟೆಯಿಂದ ಭಜನೆ ಮಾಡುವರು. ಪ್ರತಿ ಶನಿವಾರ

ಹನುಮನ ಮಂದಿರಗಳಲ್ಲಿ ಪ್ರತಿ ಸೋಮವಾರ ಇತರ ಮಠ–ಮಾನ್ಯ ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಭಜನೆ ಹಾಕುವರು. ಶಿವರಾತ್ರಿಯಂದು ಒಂದು ರಾತ್ರಿಯ ಮಟ್ಟಿಗೆ ನಡೆಯುವ ಭಜನೆ, ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರ್ಯಂತ ಸಾಗುತ್ತದೆ. ಇದಕ್ಕೆ ಬೇಕಾಗುವ ಮೂಲಭೂತ ವಾದ್ಯಗಳೆಂದರೆ. ೧) ಏಕದಾರಿ ೨) ದಮ್ಮಡಿ ೩) ತಾಳ ೪) ತಬಲಾ ೫) ಜಾಗಟೆ ೬) ಹಾರ್ಮೋನಿಯಂ ಇತ್ಯಾದಿ. ಈ ವಾದ್ಯಗಳನ್ನು ಭಜನೆ ಸಮಯದಲ್ಲಿ ನುಡಿಸುವರು. ಭಜನೆ ಮೇಳದಲ್ಲಿ ಸಾಮಾನ್ಯವಾಗಿ ಹಾಡುಗಾರರು ನಾಲ್ಕೈದು ಜನರು, ಉಳಿದವರು ಶ್ರೋತೃಗಳು. ಶಿವನ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಭಜನೆಯಲ್ಲಿ ದೇವರ ಕುರಿತ ಹಾಡುಗಳು, ಅನುಭವ ಪದಗಳು, ಶರಣರ ವಚನ, ದಾಸರ ಕೀರ್ತನೆಗಳು, ಚುಟುಕು ಪದಗಳು, ತ್ರಿಪದಿ ಹಾಡುಗಳನ್ನು ಹಾಡುತ್ತಾರೆ. ತಾಯಿಯ ತವರು ಮನೆಯನ್ನು ಕುರಿತ ಕೆಳಕಂಡ ಭಜನೆ ಪದ ಬಹಳ ಪ್ರಸಿದ್ಧಿ ಪಡೆದಿದೆ.

ತವರೂರ ಮನೆನೋಡ ಬಂದೆ
ತಾಯಿ ನೆನಪಾಗಿ ಕಣ್ಣೀರ ತಂದೆ ॥ ಪಲ್ಲವಿ ॥
ಹತ್ತು ಹದಿನಾರು ವರುಷಗಳಲ್ಲಿ
ಹೆತ್ತ ತಾಯಿ–ತಂದೆ ಪ್ರೀತಿಯಲ್ಲಿ
ಮುತ್ತಿನಂತೆ ಜೋಪಾನವಾಗಿ ಬೆಳೆದೆ
ಎತ್ತೋ ಅದು ತಾನೆ ಕನಸಾಗಿ ಹೋಗಿದೆ

ಎನ್ನುವ ಮೇಲಿನ ಪದದಲ್ಲಿ ಮಗಳು ತನ್ನ ತವರ ಮನೆ ಮತ್ತು ಹೆತ್ತ ತಂದೆ ತಾಯಿಗಳ ಕುರಿತು ತನ್ನ ದುಃಖವನ್ನು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಮದುವೆ ಮುಗಿದು ಗಂಡನ ಮನೆಗೆ ಪ್ರವೇಶ ಪಡೆದರೆ ಆಯಿತು, ನಂತರ ತನ್ನ ತವರ ಮನೆಗೆ ಹೋದಾಗ ಅಲ್ಲಿ ಯಾವ ರೀತಿಯಾಗಿ ವರ್ತಿಸುತ್ತಾರೆ. ಎನ್ನುವ ಬಗೆಯಲ್ಲಿ ಗರತಿಯಾದವಳು ತವರ ಮನೆಯೆನ್ನುವುದು ಬರೀ ಕನಸು ಎನ್ನುವಳು.

ಈ ಬಾಗಿಲದ ಮುಂದೆ ರಂಗವಲ್ಲಿ
ಬಾಗಿ ಹಾಕುತ್ತಿದ್ದೆ ನಾನಾ ತರದಲ್ಲಿ

ಹೇಗೆ ಮರೆಯಲಿ ಈ ಮನಸಿನಲ್ಲಿ
ಮಾಸಿ ಹೋಗದು ಅದು ಬಾಳಿನಲ್ಲಿ

ಮದುವೆಯಾಗುವ ಪೂರ್ವದಲ್ಲಿ ಹುಟ್ಟಿದ ಮನೆಯ ಮುಂದೆ ತರತರದ ರಂಗವಲ್ಲಿ ಹಾಕುತ್ತಿದ್ದೆ. ತಂದೆತಾಯಿಗಳು ಇರದ ಸಮಯಧಲ್ಲಿ ತವರ ಮನೆಗೆ ಹೋದಾಗ ಒಂದು ಲೋಟ ನೀರು ಸಹ ಕೊಡದೆ ಹೋದಾಗ, ಗರತಿ ಹಿಂದಿನ ನೆನಪುಗಳನ್ನೆಲ್ಲಾ ಈ ಹಾಡಿನೊಂದಿಗೆ ತೋಡಿಕೊಂಡಿದ್ದಾಳೆ.

ಶ್ರೀಮಂತಿಕೆ, ಹೆಂಡತಿ, ಮಾವ, ತಂಗಿಗಿಂತಲೂ ಹೆಚ್ಚಾಗುತ್ತಾರೆ. ತನ್ನ ತಂಗಿಯ ಮರೆತು ಅಣ್ಣ ಆನಂದದಲ್ಲಿ ನಲಿದಾಡುವನು. ಎಂದಾದರೊ ಅಣ್ಣನ ಮನೆಗೆ ತಂಗಿ ಹೋದಾಗ ಅಣ್ಣನ ಹೆಂಡತಿ ಕಣ್ಸನ್ನೆ ಮಾಡಿ ಅವಳನ್ನು ಮನೆಗೆ ಕರೆಯಬೇಡಿ ಎಂದಾಗ, ಅಣ್ಣ ಹೆಂಡತಿ ಮಾತಿಗೆ ಮರುಳಾಗಿ, ಮನೆಗೆ ಬಂದ ತಂಗಿಯ ಅಭಿಮಾನ ಭಂಗಮಾಡುವಲ್ಲಿ ಮುಂದಾಗಿದ್ದಾನೆ. ತವರು ಮನೆ ಎಷ್ಟೇ ಶ್ರೀಮಂತಿಕೆಯಿಂದ ಕೂಡಿದ್ದರೂ ಕೊನೆಗೆ ಗಂಡನ ಮನೆಯೇ ಶ್ರೇಷ್ಠ. ಏಕೆಂದರೆ ಗಂಡ ಬಡವ-ಬಲ್ಲಿದನಿದ್ದರೂ ಅವನೇ ನನಗೆ ಸರ್ವಸ್ವ ಎನ್ನುತ್ತಾಳೆ ತಂಗಿ.

ಶಿವನ ಕೈಮುಗಿದು ಬೇಡುವೆನು
ತವರ ಮನಿ ಸಿರಿಯ ಬೆಳೆದು ನಮ್ಮಣ್ಣನಿಗೆ
ತಾಯಿ ನೆನಪಿರಲಿ ಮುಂದೆ ಎಂದೆಂದಿಗೂ
ಕಾಯಿ ಕರ್ಪೂರ ತರುವೆ ನಿನ್ನ ಗುಡಿಗೆ.

ಗರತಿಯ ದೊಡ್ಡ ಗುಣ, ಚಾರಿತ್ರ್ಯ ಮೇಲಿನ ಹಾಡಿನಲ್ಲಿ ಎದ್ದು ಕಾಣುತ್ತದೆ.

ಹೀಗೆ ಭಜನೆ ಹಾಡುಗಳನ್ನು ಹಾಡಿದಾಗ, ಭಜನೆ ಸಮಯದಲ್ಲಿ ಉಪಸ್ಥಿತರಿದ್ದವರೆಲ್ಲರೂ ಸಂತಸದ ಚಿಂತನೆಯಲ್ಲಿ ಕುಳಿತಿರುತ್ತಾರೆ. ಹಾಡುಗಳ ಮಧ್ಯ-ಮಧ್ಯದಲ್ಲಿ 'ಓಂ ನಮಃ ಶಿವಾಯ ಹರಾಯ ನಮಃ ಓಂ' ಎಂಬ ಮಂತ್ರಗಳು ಪ್ರತಿಧ್ವನಿಸುತ್ತವೆ. ತಾಳ-ಲಯ ಬದ್ಧವಾಗಿ ಹೊರಹೊಮ್ಮುವ ಈ ಹಾಡುಗಳ ಧ್ವನಿ ಕತ್ತಲೆಯನ್ನು ಭೇದಿಸಿ, ತಾದಾತ್ಮ್ಯದ ಪರಿವೇಷ ಕಟ್ಟುತ್ತದೆ. ಹೀಗೆ ಹಲವು ಗಂಟೆಗಟ್ಟಲೆ ಇಲ್ಲವೆ ಬೆಳಗಿನ ತನಕ ನಡೆಸುವ ಭಜನೆಯನ್ನು ಹೊತ್ತಾದ ನಂತರ ಅಥವಾ

ಬೆಳಗಿನ ಜಾವದಲ್ಲಿ ಆರತಿ (ಮಂಗಲದ) ಹಾಡು ಹಾಡಿ ಭಜನೆಯನ್ನು ಮುಕ್ತಾಯಗೊಳಿಸುವರು. ಮಂಗಳ ಹಾಡುವಾಗ ಭಜನೆಯಲ್ಲಿದ್ದ ಸಕಲ ಭಕ್ತರು ಎದ್ದುನಿಂತುಸಾಮೂಹಿಕವಾಗಿಹಾಡುವರು. ಸಾಮೂಹಿಕವಾಗಿಯೇ ಜಯಘೋಷಣೆಮಾಡುವರು. 'ಬಸವಣ್ಣನವರಿಗೆ ಜಯವಾಗಲಿ', 'ಅಕ್ಕಮಹಾದೇವಿಯವರಿಗೆ ಜಯವಾಗಲಿ' ಹೀಗೆ ತಮ್ಮ ಇಷ್ಟ ಬಂದ ದೇವ ದೇವತೆಯರನ್ನು ಸ್ಮರಿಸುವರು.

**ಲಾವಣಿ ಹಾಡು :**

ಜಾನಪದ ಹಾಡುಗಳಲ್ಲಿ ಒಂದು ಪ್ರಕಾರ ಲಾವಣಿ. ಈ ಹಾಡುಗಳಲ್ಲಿ ಎರಡು ವಿಧ. ಒಂದೇ ಲಾವಣಿಯನ್ನು ಎರಡು ವಿಧದಲ್ಲಿ ಹಾಡಲು ಬರುತ್ತಿದ್ದರೂ, ಹಾಡುಗಾರಿಕೆಯಲ್ಲಿ ಬಯಲು ಲಾವಣಿಗಿಂತ ಮೇಳ ಲಾವಣಿ ಹೆಚ್ಚು ರಮ್ಯವಾದುದು. ಬಯಲು ಲಾವಣಿಯನ್ನು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಿಂದ ಚಿಟಕಿ ಹಾಕುತ್ತ ಇಲ್ಲವೆ ತಾಳವನ್ನು ನುಡಿಸುತ್ತ ನಾಲ್ಕು ಕಡೆ ಮುಖ ಹೊರಳಿಸುತ್ತ ಭಾವಭಂಗಿಯಿಂದ ಒಬ್ಬನೇ ಹಾಡುತ್ತಾನೆ. ಮೇಳ ಲಾವಣಿಯಲ್ಲಿ ಮುಮ್ಮೇಳದಲ್ಲಿ ಒಬ್ಬ, ಹಿಮ್ಮೇಳದಲ್ಲಿ ಕನಿಷ್ಟ ಪಕ್ಷ ಇಬ್ಬರು ಇದ್ದು, ದಪ್ಪು, ತುಂತುಣಿ, ತಾಳ ಮೊದಲಾದ ವಾದ್ಯಗಳೊಂದಿಗೆ ಹಾಡುತ್ತಾರೆ. ಹಾಡುಗಾರನು ಎಡಗೈಯಲ್ಲಿ ಹಿಡಿದ ಹಲಗೆಯಾಕಾರದ ದಪ್ಪನ್ನು ಬಲಗೈಯಿಂದ ಬಾರಿಸುತ್ತ, ಪಲ್ಲವಿಯನ್ನು ಪುನರಾವರ್ತನೆಗೊಳಿಸುವನು. ತುಂತುಣಿ ಮೊದಲಾದ ವಾದ್ಯಗಳನ್ನು ನುಡಿಸುತ್ತಾ, ಮಧ್ಯ-ಮಧ್ಯ ಹುರುಪಿನ ಮಾತು ಹೇಳುವುದು, ಹಾಸ್ಯ ಚಟಾಕಿ ಹಾರಿಸುವುದು ಇವನ ಹೆಚ್ಚಿನ ಕೆಲಸ. ದೇವತೆಯ ಸ್ತುತಿಯೊಂದಿಗೆ ಪ್ರಾರಂಭವಾಗಿ ನಾನಾ ಬಗೆಯ ಪೌರಾಣಿಕ, ಐತಿಹಾಸಿಕ, ಕಥನಗೀತ, ಅನುಭಾವ ಗೀತೆಗಳನ್ನು ಒಳಗು ಮಾಡಿಕೊಳ್ಳುವ ಈ ಗೋಷ್ಠಿ ಸಾವಿರ-ಸಾವಿರ ಜನರ ಮನ ಸೆರೆಹಿಡಿವ ಶಕ್ತಿಯುಳ್ಳದ್ದು. ಹಿಮ್ಮೇಳದವರು ಮೇಲಿಂದ- ಮೇಲೆ 'ಜೀ...ಜೀ... ಗೀ... ಗೀ...' ಎಂದು ಹೇಳುವುದರಿಂದ ಮೇಳ ಲಾವಣಿಯನ್ನು 'ಜೀ... ಜೀ.... ಪದ ಗೀ... ಗೀ... ಪದ' ಎಂದು ಕರೆಯುತ್ತಾರೆ.

ಲಾವಣೀ ಹಾಡು 'ಖ್ಯಾಲ' 'ಪಲ್ಲವಿ' ಚೌಕಗಳಿಂದ ಕೂಡಿರುತ್ತದೆ.

ಪಲ್ಲವಿ ಇಡೀ ಹಾಡಿನ ಸಾರವನ್ನೊಳಗೊಂಡ ಸಂಕ್ಷಿಪ್ತ ರೂಪ–

ಉದಾ :–

ಗಂಡ ಹೆಂಡರು ಎದುರು
ಕುಲ್ದಲಿ ಕೊಮಟಿಗೇರ
ಹೇಳ್ತನಿ ಕೇಳೆಲರ ಮಾಜಕುರ
ಅವ್ರಿರುವ ಠಿಕಾಣಿ ಬೀಡೆಂಬಿ ಊರಾಗ
ಬಡತನ ಬಂದು ಬೆನ್ನತ್ತಿತ ಅವರ್ಗೀಗ
ದುಡಿಲಾಕ ನಿಂತರು ಸಾವ್ಕರ ಮನಿಮುಂದ
ಎಷ್ಟಂತ ಹೇಳಲಿ ಅವರ ಭಾವ
ತರಗಿತೇನು ಜೀವ
ವಲ್ತನೇನು ಶಿವ
ನೆನಸಿದಾಗೇ ..........

ಹೀಗೆ ಲಾವಣಿ ಹಾಡುಗಳು ಏರು, ಇಳುವು, ಜಾಲ, ದುಯಿ, ದುಡಕಿ, ಕೂಡಪಲ್ಲಗಳಿಂದ ರೂಪಿತವಾಗಿರುತ್ತವೆ. ಒಂದು ಹಾಡಿನಲ್ಲಿ ವಸ್ತು ವ್ಯಾಪ್ತಿ ಅನುಗುಣವಾಗಿ ಕನಿಷ್ಟ ಮೂರು ನಾಲ್ಕು, ಹೆಚ್ಚೆಂದರೆ ಏಳು–ಎಂಟು ಚೌಕಗಳಿರುತ್ತವೆ.

ಲಾವಣಿ ಹಾಡುಗಳು ವೀರ, ಶೃಂಗಾರ, ಕರುಣಾರಸ ಪ್ರಧಾನವಾದವು. ಈ ದೃಷ್ಟಿಯಿಂದ ಹಲಗಲಿ ಬಂಟರ ಹತಾರ ಕದನ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ನರಗುಂದ ಬಾಬಾಸಾಹೇಬ, ಸಿಂಧೂರ ಲಕ್ಷ್ಮಣ, ಹೊಂಗಲ ಸಂಗ್ಯಾ, ಕಡ್ಲಿಮಟ್ಟ ಸ್ಟೇಷನ್ ಮಾಸ್ತರ ಈ ಲಾವಣಿಗಳು ಸುಪ್ರಸಿದ್ಧ. ಉತ್ತರ ಕರ್ನಾಟಕದ ಲಾವಣಿಕಾರರಲ್ಲಿ ಕಥೆಗಾರಿಕೆಯಲ್ಲಿ ಮಹಲಿಂಗಪುರದ ರಾಣು ಕುಬಣ್ಣ ಕವಿಗಳದು ಎತ್ತಿದ ಕೈ. ಶೃಂಗಾರ ಲಾವಣಿಗೆ ಹಲಸಂಗಿಯ ಕಾಜಾಭಾಯಿಯನ್ನು ಮೀರಿಸುವವರೇ ಇಲ್ಲವೆನ್ನುವಂತಿದೆ. ಅದೇ ಊರಿನ ಸಿದ್ದು ಶಿವಲಿಂಗರು ವೀರ, ಶೃಂಗಾರ ರಸಗಳಲ್ಲಿ ಪಳಗಿದವರಾದರೆ ಸಂಗೂ, ರಾಯಪ್ಪ ಅವರು ಸೂಕ್ಷ್ಮ ಶೃಂಗಾರವನ್ನು ತುಳುಕಿಸುವುದರಲ್ಲಿ ಗಟ್ಟಿಗರು. ತೇರದಾಳದ ಗೋಪಾಳ ದುರದುಂಡಿ, ನೇಮಣ್ಣ ಅವರ ವಿಡಂಬನಾ ಚಮತ್ಕಾರದ

ಲಾವಣಿಗಳು ಬಹು ಜನಪ್ರಿಯವಾಗಿವೆ.

ಬೀದರ ಜಿಲ್ಲೆಯ ಜನವಾಡ ಗ್ರಾಮದ ನಾನಾ ಸಾಹೇಬನ ಹಾಸ್ಯ ಲಾವಣಿಯೂ ಅವರ ಕಾವ್ಯಶಕ್ತಿಗೆ ದ್ಯೋತಕವಾಗಿದೆ. ಲಾವಣಿ ಹಾಡುಗಳನ್ನು ಬೆಳೆ ಕೊಯ್ಯುವಾಗ, ಜಾತ್ರೆ ಉತ್ಸವಗಳಲ್ಲಿ ಹಾಡುವರು. ಈ ಹಾಡುಗಳು ಸಹೃದಯರ ಮನಸ್ಸನ್ನು ಚುರುಕುಗೊಳಿಸುತ್ತವೆ. ರಂಜನೆ ನೀಡುತ್ತವೆ. ಈ ಲೋಕದಿಂದ ಮತ್ತೊಂದು ಲೋಕಕ್ಕೆ ಕರೆದೊಯ್ಯಲು ಲಾವಣಿಗಳು ತುಂಬಾ ಸಹಾಯಕವಾಗಿವೆ.

**ಬೀಸುವ ಹಾಡು :–**

ಜಾನಪದರ ದೈನಂದಿನ ಬದುಕು ಬೀಸುವ ಕಾಯಕದಿಂದ, ಆರಂಭವಾಗುತ್ತದೆ. ಬೀಸುವ ಕಲ್ಲು ಮನೆಯಲ್ಲಿ ನಡೆಯುತ್ತಿದ್ದರೆ ಎಲ್ಲವೂ ಸರಿಯಾಗಿದೆ ಎಂದೇ ಅರ್ಥ. ಪ್ರತಿನಿತ್ಯವೂ ಅಕ್ಕಿ, ರಾಗಿ, ಜೋಳ ಮುಂತಾದ ಧಾನ್ಯಗಳನ್ನು ಬೀಸಿ ಅಣಿಗೊಳಿಸಿಕೊಂಡರೆ ಆಯಾ ದಿನದ ಅಗತ್ಯಗಳು ಪೂರೈಕೆಗೊಳ್ಳುತ್ತವೆ. ಈ ಬೀಸುವ ಕಾಯಕದಲ್ಲಿ ಏನಾದರೂ ಅಡ್ಡಿ ಆತಂಕಗಳು ಕಾಣಿಸಿಕೊಂಡರೆ ಬದುಕೇ ದುಸ್ತರವಾದಂತೆ. ಅದಕ್ಕಾಗಿಯೇ ಬೀಸುವ ಕಲ್ಲನ್ನು ಕುರಿತು ಜನಪದ ಗರತಿಯರು ಹಾಡುತ್ತಿರುತಾರೆ.

ಬೀಸುವ ಕಲ್ಲು ಜನಪದರಿಗೆ ಜೀವನಾಧಾರ ವಸ್ತು. ಕಲ್ಲಮ್ಮ ತಾಯಿಯ ಕರುಣೆಯಿಂದಲೇ ಕಲ್ಲು ಹಡಿದಾಕೆಗೆ ಮಗ ಸೊಸೆಯರು ಬರುತ್ತಾರೆ. ಸುಖ ಸಂತೋಷ ಲಭಿಸುತ್ತದೆ. ಬದುಕು ಹಸನಾಗುತ್ತದೆ. ಬೀಸುವ ಕಲ್ಲನ್ನು ಗರತಿ ತಾಯಿ ಕಲ್ಲಮ್ಮ ಎಂದು ಕರೆದಿದ್ದಾಳೆ.

ಕೆಲವು ವರ್ಷಗಳ ಹಿಂದೆ ಮದುವೆ ಸಮಯದಲ್ಲಿ (ದಿವಸಗಳಲ್ಲಿ) ಹಾಡು ಹೇಳಿಸುತ್ತಾ, ಸ್ತ್ರೀಯರಿಗೆ ಬೀಸುವ ಕುಟ್ಟುವ ಶಾಸ್ತ್ರ ಮಾಡಿಸುವುದರಲ್ಲಿ, ಹಿಂದೆ ಹೆಣ್ಣನ್ನು ಆಯ್ಕೆಮಾಡುತ್ತಿದ್ದ ರೀತಿಯ ಪರಿಚಯವಾಗುವುದರ ಜೊತೆಗೆ ಈ ಕಾಯಕಗಳ ಬಗೆಗೆ ಹಿಂದಿನವರಿಗೆ ಎಂಥ ಹೆಗ್ಗಳಿಕೆ ಮತ್ತು ಪವಿತ್ರ [illegible]ಂದು ಹಿರಿಯರಿಂದ, ಹಾಡುಗಳಿಂದ ತಿಳಿದುಬರುತ್ತದೆ.

ಬೀಸುವಾಗ ಹೇಳುವ ಬಾಂಧವ್ಯಪರ ಗೀತೆಗಳೆಲ್ಲ ಹೆಣ್ಣಿನ ಬದುಕನ್ನು ಚಿತ್ರಿಸುತ್ತವೆ. ಬಾಲ್ಯದಲ್ಲಿ ತಾಯಿ ತಂದೆಯರೊಂದಿಗೆ, ಯೌವನದಲ್ಲಿ ಪುರುಷನೊಂದಿಗೆ, ಮುಪ್ಪಿನಲ್ಲಿ ಮಕ್ಕಳೊಂದಿಗೆ ಬಾಳುವೆ ನಡೆಸುವ ಹೆಣ್ಣಿನ ಜೀವನದ ವಿವಿಧ ಸ್ತರದ ಶೀಲ ವರ್ತನೆಯ ಚಿತ್ರ ಇಲ್ಲಿದೆ. ಒಟ್ಟಿನಲ್ಲಿ ಬೀಸುವ ಹಾಡುಗಳು ಗರತಿಯ ಬದುಕಿನ ಹಿರಿಮೆಯನ್ನು ಸಾರುವ ಗೀತೆಗಳಾಗಿವೆ. ಬೀಸುವ ಹಾಡುಗಳು. ಸ್ತ್ರೀಯರ ಹಾಡುಗಳಲ್ಲಿಯೇ ಬೀಸುವ ಪದಗಳಿಗೆ ಮಹತ್ವದ ಸ್ಥಾನವಿದೆ. ಇಂದು ಹಿಟ್ಟುಮಾಡುವ ಮತ್ತು ಅಕ್ಕಿ ಮಾಡುವ ಹತ್ತಾರು ಬಗೆಯ ಯಂತ್ರಗಳು ಬಂದು ಪ್ರವೇಶ ಪಡೆದಿರುವುದರಿಂದ ಕುಟ್ಟುವ ಮತ್ತು ಬೀಸುವ ಕೆಲಸಗಳು ಮಾಯವಾಗಿವೆ. ಇಂದಿನ ಹೆಣ್ಣು ಮಕ್ಕಳು ಕೂಡ ಆಲಸ್ಯದಿಂದ ಕೂಡಿದವರಾಗಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿದ್ದಾರೆ. ಹೀಗಾಗಿ ಹಾಡುಗಳು ಹಳ್ಳಿಗಳಲ್ಲಿ ಕಣ್ಮರೆಯಾಗಿವೆ, ಯಾಗುತ್ತಿವೆ.

**ಡೊಳ್ಳಿನ ಪದಗಳು :–**

ಡೊಳ್ಳು ಕುಣಿತ ಒಂದು ಗಂಡು ಕಲೆ ಎನ್ನಿಸಿದೆ. ಮಲ್ಲಣ್ಣನ ಭಕ್ತರು ದೊಡ್ಡ ಆಕಾರದ ಚರ್ಮ ವಾದ್ಯವೊಂದನ್ನು ಬಡಿಯುತ್ತ, ಪದ ಹಾಡುತ್ತ ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಈ ಕಲೆಯ ಪ್ರದರ್ಶನ ಮಾಡುವರು; ಹಾಡುವರು. ಹೆಚ್ಚಾಗಿ ಡೊಳ್ಳು ವಾದ್ಯ ನುಡಿಸುವವರು ಮತ್ತು ಹಾಡುವವರು ಕುರುಬರಾಗಿದ್ದಾರೆ.

ಹಾಡು ಹಾಡುವವನು ಒಬ್ಬನಾದರೆ, ಇನ್ನು ಮೂವರು ಡೊಳ್ಳು, ಜಾಗಟೆ, ತಾಳ ಬಾರಿಸುವವರು, ಮಿಕ್ಕವರು ಹಿಮ್ಮೇಳದಲ್ಲಿರುತ್ತಾರೆ. ಹಾಡುವಾಗ ಡೊಳ್ಳಿನವರು ಬಹುಮೆಲ್ಲನೆ 'ದುಪ್ಪಾಂಗ್... ದುಪ್ಪಡ್ ದುಪ್ಪಾಂಗ್' ಎಂದು ನಾದದೊಂದಿಗೆ ತಾಳವನ್ನು ಅನುಸರಿಸುತ್ತಾರೆ. ಡೊಳ್ಳಿನ ಹಾಡುಗಳಲ್ಲಿ ದೈವಸ್ತುತಿ, ಶಿವಶರಣರ ಚರಿತ್ರೆ, ರಾಮಾಯಣ, ಮಹಾಭಾರತ ಪ್ರಸಂಗಗಳು ಲಾವಣಿಗಳು, ಬಿಡಿ–ಬಿಡಿ ಹಾಡುಗಳು ಕಂಡುಬರುತ್ತವೆ.

ದೇವ–ದೇವತೆ ಕುರಿತು ತಮ್ಮ ನಿಲುವನ್ನು ವ್ಯಕ್ತಪಡಿಸುವಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತಾರೆ. ತಮ್ಮ ಇಷ್ಟ ದೇವತೆಯ ಸ್ವರೂಪ,

ಲಕ್ಷಣ ಕುರಿತು, ಆಯಾ ದೇವರುಗಳ ಮಹತ್ವ ಮುಂತಾದ ಸನ್ನಿವೇಶಗಳ ಬಗ್ಗೆ ಸಾಮೂಹಿಕವಾಗಿ ಹಾಡಿನ ಹಿನ್ನೆಲೆಯೊಂದಿಗೆ ಪ್ರಸಾರ ಮಾಡುವಲ್ಲಿ ಡೊಳ್ಳಿನ ಕಲಾವಿದರು ಯಶಸ್ವಿಯಾದಂತೆ ತೋರುತ್ತದೆ.

ಹಾಡುಗಾರ ಬೀರು ದೇವನನ್ನು ತನ್ನ ಗುರುವನ್ನಾಗಿ ಮಾಡಿಕೊಂಡು ಅವರ ಬಗ್ಗೆ ಕೊಂಡಾಡುತ್ತಿದ್ದಾನೆ. ನಿನ್ನ ಮಹಿಮೆ ಅಪಾರ, ನೂರಾರು ಕೋಟಿ ನಿನ್ನ ರೂಪ. ನಿನ್ನನ್ನು ಎಷ್ಟು ಕೊಂಡಾಡಿದರೂ ಕಡಿಮೆ ಎನ್ನುವ ಬಗ್ಗೆ ತನ್ನ ಅಭಿಪ್ರಾಯವನ್ನು ತಾಳಿದ್ದಾನೆ.

ಸಾಮಾನ್ಯವಾಗಿ ಡೊಳ್ಳಿನ ಹಾಡು ಹಾಡುವಾಗ ಪ್ರತಿ ಹಾಡಿನ ಪ್ರಾರಂಭದಲ್ಲಿ ಮೇಲೆ ಉಲ್ಲೇಖಿಸಿದ ಹಾಡು ಹಾಡಿ (ಗಣಸ್ತುತಿಯ) ನಂತರ ಕಥಾಭಾಗ ಪ್ರಾರಂಭವಾಗುವುದು.

**ಕೋಲಾಟದ ಪದ :–**

ಕೋಲಾಟ ಒಂದು ಜನಪದ ಕಲೆ. ಕೋಲಾಟ ಸಂದರ್ಭದಲ್ಲಿ ಹಾಡುವ ಪದಗಳು ಕೋಲು ಪದಗಳು. ಪಲ್ಲವಿ, ಚರಣ, ಅನುಪಲ್ಲವಿಗಳಿಂದ ಆರಂಭವಾಗುವ ಇವುಗಳಲ್ಲಿ ವೈವಿಧ್ಯತೆ ಇವೆ. ಪ್ರಾಸ, ರಾಗ, ಧಾಟಿಗಳಿಗೆ ಇಲ್ಲಿ ಪ್ರಾಶಸ್ತ್ಯ. ಕೋಲಾಟವಾಡುವಾಗ ದಮ್ಮಡಿ ಬಾರಿಸುವವನು ಹಾಡನ್ನು ಆರಂಭಿಸಿ ಮುಮ್ಮೇಳ ಹಾಡುತ್ತಾನೆ. ಅವನನ್ನನುಸರಿಸಿ ಕೋಲಾಟದ ತಂಡದವರು ಹಿಮ್ಮೇಳವನ್ನು ಹಾಡುತ್ತಾ ಕೋಲುಹಾಕುತ್ತಾರೆ. ಹೆಚ್ಚಾಗಿ ಯುಗಾದಿ, ಹೋಳಿಹಬ್ಬ, ಸಂದರ್ಭಗಳಲ್ಲಿ ಕೋಲಾಟವಾಡುತ್ತಾರೆ. ಸಾಹಿತ್ಯ ಸಂಗೀತಗಳನ್ನೊಳಗೊಂಡ ಇದು ಆಕರ್ಷಕ ಕೂಟ ನೃತ್ಯ.

ಕಲಾವಿದರು ಪೌರಾಣಿಕ ನಾಟಕಗಳಲ್ಲಿನ ಪಾತ್ರಗಳ ವೇಷಭೂಷಣವನ್ನು ಹಾಕುತ್ತಾರೆ. ರಾಧಾ–ಕೃಷ್ಣ, ರಾಮ–ಸೀತೆ, ಪಾರ್ವತಿ–ಶಿವ, ಹನುಮಾನ್–ಲಕ್ಷ್ಮಣ, ಗೋಸಾಯಿ, ಲಂಬಾಣಿ, ಆಧುನಿಕ ಬಗೆಯ ವೇಷಭೂಷಣಗಳಾದ ಪೀರಪ್ಯಾಂಟ ಧರಿಸಿ, ಕಣ್ಣಿಗೆ ಕಪ್ಪು ಕನ್ನಡಕ ಹಾಕುವ ಯುವಕ–ಯುವತಿ ಇತ್ಯಾದಿ ಪಾತ್ರಗಳನ್ನು ಹಾಕುವರು. ಆಯಾ ಪಾತ್ರಗಳಿಗೆ ಹೋಲುವ ಬಣ್ಣ ಧರಿಸಿಕೊಳ್ಳುವರು. ಕಲಾವಿದರು ಒಂದೇ ಕೋಲನ್ನು ಮಾತ್ರ ಬಳಸುತ್ತಾರೆ. ಕೋಲು

ಒಂದೂವರೆ ಅಡಿ ಉದ್ದವಾಗಿದ್ದು, ಹಿಡಿಯಲು ಅನುಕೂಲವಾಗುವಂತೆ, ಕೆತ್ತಿ ನಯವಾಗಿರುವಂತೆ, ಮಾಡಿಕೊಂಡಿರುತ್ತಾರೆ. ವೃತ್ತಾಕಾರವಾಗಿ ಪಾತ್ರಗಳಿಗನುಗುಣವಾಗಿ ರಾಮ ಪಾತ್ರಧಾರಿಯ ಪಕ್ಕದಲ್ಲಿ ಸೀತೆ, ಕೃಷ್ಣನ ಪಕ್ಕದಲ್ಲಿ ರಾಧೆ, ಶಿವನ ಪಕ್ಕದಲ್ಲಿ ಪಾರ್ವತಿ, ಹೀಗೆ ಜೋಡಿಯಾಗಿ ನಿಲ್ಲುತ್ತಾರೆ. ಕೋಲನ್ನು ಬಲಗೈಲಿ ಹಿಡಿಯುತ್ತಾರೆ.

ಒಬ್ಬ ಕಲಾವಿದ ನಿಲ್ಲುವ ಸ್ಥಳಕ್ಕೆ 'ಖಾನೆ' ಎನ್ನುವರು. ಕಲಾವಿದರ ಮಧ್ಯಭಾಗದಲ್ಲಿ ತಬಲ, ಪೇಟ, ತಾಳ ಹಿಡಿದು ವಾದ್ಯಗಳನ್ನು ಬಾರಿಸುತಾರೆ. ಗಣೇಶ ಸ್ತುತಿ ಕೋಲು, ಮೂರು ಮನೆ, ಒಂಬತ್ತು ಮನೆ, ಎಳು ಚಿಟಕಿ, ಎಂಟು ಚಿಟಕಿ, ಬಾರಕೆಂಪು, ಚೌದಾಕೊಪ್ಪ, ಹೊರಗೋಲು, ಒಳಗೋಲು ಇತ್ಯಾದಿ.

ಕೋಲಾಟದ ಹಾಡುಗಳಲ್ಲಿ ಹಾಸ್ಯ, ಭಕ್ತಿ, ಪ್ರೇಮದ ನಾನಾ ರೂಪಗಳ ಸಹಜ ನಿರೂಪಣೆ ಇದೆ. ತೀರ ಸಾಮಾನ್ಯರಾದ ಗಂಡು–ಹೆಣ್ಣುಗಳ ಸ್ನೇಹ, ವಿಶ್ವಾಸ, ಪ್ರೇಮ, ವಿರಹಗಳು ಇಲ್ಲಿ ಹಾಡಿನ ರೂಪ ಪಡೆದಿವೆ. ಕೋಲಾಟ ಮುಗಿಯುವವರೆಗೆ ಕೋಲು ಪದಗಳು ಮುಂದುವರೆಯುತ್ತವೆ. ಆಟದ ಪ್ರಾರಂಭಕ್ಕೂ ಮತ್ತು ಮುಕ್ತಾಯಕ್ಕೂ ನಿಗದಿಯಾದ ಹಾಡುಗಳನ್ನು ಹೇಳುವುದು ಸಂಪ್ರದಾಯ. 'ಧಿಂ ತಕು' ಮುಂತಾದವುಗಳನ್ನು ಹೇಳಿ ಹಾಡನ್ನು ಮುಗಿಸುವುದರೊಡನೆ ಅದಕ್ಕೆ ಸಂಬಂಧಿಸಿದ ಕೋಲಾಟದ ವಿಧವೂ ಮಂಗಲಗೊಳ್ಳುತ್ತದೆ.

ಜಾನಪದದ ಇಂಥ ಹತ್ತಾರು ಪ್ರಕಾರದ (ಸಂಗೀತದ) ಹಾಡುಗಳಿಂದ ಅನೇಕ ರಾಗಗಳು ಹುಟ್ಟಿಕೊಂಡಿವೆ. ಇಂದು ಅನೇಕ ದೇಶಿ ರಾಗಗಳಲ್ಲಿ ಹಿಂದೂಸ್ತಾನಿ ದೇಶಿ ರಾಗಗಳ ಲಕ್ಷಣಗಳು ಕಂಡುಬರುತ್ತವೆ. ನೂರಾರು ಜಾನಪದ ಹಾಡುಗಳು, ವಚನ ಮತ್ತು ಕೀರ್ತನೆಗಳು, ಹಿಂದೂಸ್ತಾನಿ ಸಂಗೀತ ಧಾಟಿಯಲ್ಲಿದ್ದು ಅವು ಅತ್ಯಂತ ಜನಪ್ರಿಯವಾಗಿವೆ. ಡಾ।। ಮನಸೂರರು ಹಿಂದೂಸ್ಥಾನಿ ಭೈರವೀ ರಾಗದಲ್ಲಿ ಹಾಡಿರುವ 'ಪಂಪಾನಗರಿ ನಿವಾಸನೇ' ಎಂಬ ವಚನವು ಪಂಡಿತ ರಾಜಗುರು ಅವರು ಹಾಡಿದ 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಯ್ಯ' ಎಂಬ ವಚನವು ಹಿಂದೂಸ್ಥಾನಿ ಚಂದ್ರಕಾಂಸ

ರಾಗದಲ್ಲಿ, ಭೀಮಸೇನಜೋಶಿಯವರು 'ದೇವ ಬಂದಾನಮ್ಮ ಸ್ವಾಮಿ ಬಂದಾನೋ, ದೇವರ ದೇವ ಶಿಖಾಮಣಿ ಬಂದಾನೋ', ಅದರಂತೆ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಮುಂತಾದ ಕೀರ್ತನೆಗಳು ಮತ್ತು ಕನ್ನಡ ಹಾಡುಗಳನ್ನು ಹಿಂದೂಸ್ಥಾನಿಗೆ ಅಳವಡಿಸಿಕೊಂಡು ಜಾನಪದ ಸಂಗೀತಕ್ಕೆ ಹೊಸ ತಿರುವು ನೀಡಿದ್ದಾರೆ. ಹೀಗಾಗಿ ಜಾನಪದ ಸಂಗೀತ ದಿನೇ ದಿನೇ ಬೇರೆ ಬೇರೆ ರೂಪ ಧರಿಸಿ, ಪ್ರಭಾವಶಾಲಿಯಾಗಿ ಬೆಳೆಯುತ್ತಾ ನಡೆದು ಜನಪ್ರಿಯವಾಗುತ್ತಿದೆ.

# ಶಾಲೆ ಕಾಲೇಜುಗಳಲ್ಲಿ ಸಂಗೀತ ಬೋಧನೆ



ಹನುಮಣ್ಣನಾಯಕ ದೊರೆ

ಸಂಗೀತವು ಒಂದು ಶ್ರಾವ್ಯ ಕಲೆ. ಅದು ಭವಶುದ್ಧಿ ಮಾಡುವಂತಹುದು. ಮನುಷ್ಯನನ್ನು ಮೃದುವಾಗಿ, ಸುಸಂಸ್ಕೃತನನ್ನಾಗಿ ಮಾಡುವ ಮಹತ್ಸಾಧನಗಳಲ್ಲಿ ಒಂದು. ಜೀವ ಜೀವಗಳನ್ನು ಸಾಮರಸ್ಯದ ಬಂಧನದಲ್ಲಿ ಬೆಸಯುವಂತಹುದು.

ಇಂದಿನ ಈ ಪ್ರಕ್ಷುಬ್ಧ, ಹಿಂಸಾಮಯ, ಕೋಲಾಹಲಕಾರಿ, ವಿಧ್ವಂಸಕಾರಿ, ದ್ವೇಷ–ಅಸೂಯೆಗಳ, ವೈರತ್ವ–ವಿರಸಗಳಿಂದ ಕೂಡಿದ ಜಗತ್ತನ್ನು ಶಾಂತಿಯ, ಆನಂದದ ಮಾರ್ಗದಲ್ಲಿ ಕೊಂಡೊಯ್ಯುವಂತಹುದು ಸಂಗೀತ.

ಸಂಗೀತಗಾರನಿಗೆ ಜಾತಿಯ, ದೇಶದ ಇನ್ನಾವುದೇ ಅಡ್ಡ

ಗೋಡೆಗಳಿಲ್ಲ. ಕಲಾವಿದನ ಜಾತಿ ಇತ್ಯಾದಿಗಿಂತ ಆತನ ಉದಾತ್ತವಾದ ಕಲೆ ಮುಖ್ಯವಾಗುತ್ತದೆ, ಸಂಬಂಧ ಪಡುತ್ತದೆ.

ನನ್ನ ಗುರುಗಳಾಗಿದ್ದ ಪಂಡಿತ ಬಸವರಾಜ ರಾಜಗುರುಗಳು ಹೇಳುತ್ತಿದ್ದರು, "ಸಂಗೀತಗಾರರಿಗೆ ಲೌಕಿಕ ಜಾತಿಗಳಿಲ್ಲ, ನಾವೆಲ್ಲ ಗಂಧರ್ವ ಜಾತಿಯವರು"ಎಂದು.

ಯಾವುದೇ ಜಾತಿಯವನಿರಲಿ, ಆತನ ಸಂಗೀತವನ್ನು ಪ್ರೀತಿಯಿಂದ ಕೇಳುತ್ತೇವೆ. ಕಲಾವಿದನು ಎಲ್ಲರಿಂದಲೂ ಪ್ರೀತಿಸಲ್ಪಡುತ್ತಾನೆ. ಎಲ್ಲರಿಗೂ ಬೇಕಾದವನಾಗುತ್ತಾನೆ.

ಇಂಥ ಉದಾತ್ತ ಕಲೆಯನ್ನು ಮನುಷ್ಯ ತನ್ನದಾಗಿಸಿಕೊಳ್ಳುವ ದಿಸೆಯಲ್ಲಿ ಅನೇಕ ಪ್ರಯತ್ನಗಳನ್ನು ಮಾಡುತ್ತಾನೆ.

ವಿದ್ಯಾಸಂಸ್ಥೆಗಳು ವಿದ್ಯಾರ್ಥಿಯನ್ನು ಮನುಷ್ಯನನ್ನಾಗಿ ರೂಪಿಸುವ ಕೇಂದ್ರಗಳು (ಅಲ್ಲಿ ಸಂಗೀತವನ್ನೂ ಕಲಿಕೆಗೆ ಇಟ್ಟರೆ ವಿದ್ಯಾರ್ಥಿಯನ್ನು ಉದಾತ್ತೀಕರಣಗೊಳಿಸುವ ದಾರಿಯಲ್ಲಿ ಸಾಗಿದಂತಾಗುತ್ತದೆ. ಅರಿಸ್ಟಾಟಲನ ಮಾತನ್ನು ಉದ್ಧರಿಸಬಹುದು) "ಹೃದ್ಯಗುಣಶೋಭಿತವಾದ ಭಾಷೆ ಎಂದರೆ ತಾಳ, ಸಾಂಗತ್ಯ, ಸಂಗೀತಗಳಿಂದ ಕೂಡಿದ ಭಾಷೆ."

ಇಂಥ ಭಾಷೆಯಾದ ಸಂಗೀತವನ್ನು ವಿದ್ಯಾಸಂಸ್ಥೆಗಳಲ್ಲಿ ಕಲಿಕೆಗೆ ಇಟ್ಟರೆ ವಿದ್ಯಾರ್ಥಿಯನ್ನು ಉದಾತ್ತೀಕರಣದ ದಾರಿಯಲ್ಲಿ ಸಾಗಿಸಿದಂತಾಗುತ್ತದೆ. ಅವನ ಗುಣಸ್ವಭಾವಗಳಲ್ಲಿನ ಓರೆ ಕೋರೆಗಳನ್ನು, ಕೊಂಕುಗಳನ್ನು, ಅಂಕು ಡೊಂಕುಗಳನ್ನು, ದ್ವೇಷ-ಅಸೂಯೆಗಳನ್ನು, ಕ್ಷುಲ್ಲಕತನಗಳನ್ನು ದೂರಮಾಡಲು ಸಾಧ್ಯವಾಗುತ್ತದೆ. ನೈತಿಕತೆಯನ್ನು ನೆಲೆಯೂರಿಸಲು ಸಹಾಯಕವಾಗುತ್ತದೆ.

ಅರಿಸ್ಟಾಟಲ್ ಹೇಳುತ್ತಾನೆ, "ಸಮಾಜದಲ್ಲಿನ ವ್ಯಕ್ತಿಗಳ ಅನೇಕ ಕ್ರೂರ ಭಾವಗಳು ಹೊರಬರಲವಕಾಶವಿಲ್ಲದೆ ಜ್ವಾಲಾಮುಖಿಯಂತೆ ಒಳಗೆ ಕ್ಷುಬ್ಧವಾಗಿ ಮುಂದೆ ಸಮಾಜಕ್ಕೂ ವ್ಯಕ್ತಿಗೂ ಹಾನಿಕರವಾದ ರೀತಿಯಲ್ಲಿ ಸಿಡಿದು ಬರಬಹುದು. ಆಗಾಗ ಅವುಗಳಿಗೆ ಹೊರಬರಲು ದಾರಿಯನ್ನು ಕಲ್ಪಿಸುತ್ತಿದ್ದರೆ ಅಂತಹ ಪರಿಸ್ಥಿತಿಯ ಭಯವಿರುವುದಿಲ್ಲ. ಆ ಕಾರ್ಯವನ್ನು

ಸಾಹಿತ್ಯ, ಕಲೆಗಳು ಯಶಸ್ವಿಯಾಗಿ ಮಾಡುವುದರಿಂದ ಅವು ಆದರಣೀಯ".

ಇಂತಹ ಆದರಣೀಯ ಕಲೆಗಳಲ್ಲೊಂದಾದ ಸಂಗೀತವನ್ನು ಶಾಲೆ–ಕಾಲೇಜುಗಳಲ್ಲಿ ಬೋಧಿಸುವುದರ ಮೂಲಕ ವಿದ್ಯಾರ್ಥಿಯನ್ನು ಸತ್ಪ್ರಜೆಯನ್ನಾಗಿ ರೂಪಿಸಬಹುದು.

ಸಂಗೀತ ಗುರುಕುಲ ಪದ್ಧತಿಯಲ್ಲಿ ಅಥವಾ ಒಂದು ಗುರುವಿನ ಬಳಿ ಇದ್ದುಕೊಂಡು ಕಲಿಯಬೇಕಾದಂತಹ ಕಲೆ ಎಂಬ ಅಭಿಪ್ರಾಯವಿತ್ತು. ಈಗಲೂ ಹಾಗೆ ಅನ್ನುವುದುಂಟು. ಸಂಗೀತವನ್ನು ಕೇವಲ ಕಲೆಯೆಂದು ಪರಿಗಣಿಸಿದಾಗ ಹೀಗೆ ಅನ್ನಬಹುದಾದ, ಸಾಧ್ಯತೆಗಳಿರಬಹುದು (ಅಂದರೆ ಅದನ್ನು ಒಂದು ವಿದ್ಯೆಯನ್ನಾಗಿ ಅಥವಾ ವಿಷಯವನ್ನಾಗಿ ತೆಗೆದುಕೊಳ್ಳಬಹುದು.)

ಹಿಂದಿನ ಗುರುಕುಲಗಳ ಕಾರ್ಯಗಳನ್ನು ಈಗಿನ ಶಾಲೆಕಾಲೇಜುಗಳು ಮಾಡುವುವು ಆದ್ದರಿಂದ ಸಂಗೀತವನ್ನು ಅಲ್ಲಿ ಒಂದು ವಿದ್ಯೆಯನ್ನಾಗಿ ಅಥವಾ ವಿಷಯವನ್ನಾಗಿ ಅಭ್ಯಸಿಸಬಹುದು ಎಂಬ ಪ್ರಮೇಯ ಬಂದಾಗ ಶಾಲೆ ಕಾಲೇಜುಗಳನ್ನು ಸಂಗೀತವು ಪ್ರವೇಶಿಸಿರಬೇಕು.

ದಿ|| ಮಲ್ಲಿಕಾರ್ಜುನ ಮನ್‌ಸೂರ್‌ರರು ಸಂಗೀತವು ಶಾಲೆ ಕಾಲೇಜುಗಳಲ್ಲಿ ಕಲಿಯುವ ವಿದ್ಯೆಯಲ್ಲ ಎಂದು ಅಭಿಪ್ರಾಯ ಪಟ್ಟಿದ್ದರು. ಸಂಗೀತಕ್ಕೆ ವ್ಯಕ್ತಿಯ, ಅವರ ಸಮಯದ ಸಂಪೂರ್ಣ ಅರ್ಪಣೆ ಅವಶ್ಯವಾಗಿರುವುದರಿಂದ, ಇದು ಶಾಲೆ ಕಾಲೇಜುಗಳಲ್ಲಿ ಸಾಧ್ಯ ಆಗಲಾರದು ಎಂಬ ಭಾವದಿಂದ ಅವರು ಹಾಗೆ ಹೇಳಿರಬೇಕು. ಇದು ಒಂದು ಪಾರ್ಶ್ವದಲ್ಲಿ ವಾಸ್ತವವೆನಿಸಿದರೂ, ವಿದ್ಯಾರ್ಥಿಯ ಮನಸ್ಸು ಗಟ್ಟಿಗೊಂಡಲ್ಲಿ ಹಾಗೂ ಶಿಕ್ಷಕನ ಸತತವಾದ ಕಾಳಜಿಯ ಕಲಿಸುವಿಕೆಯಿಂದ ವಿದ್ಯಾರ್ಥಿ ಕಲಾವಿದನಾಗುವ ಸಾಧ್ಯತೆಗಳು ನಿಲುಕಬಹುದು ಎಂಬ ಮಾತನ್ನು ಅಲ್ಲಗಳೆಯಲಾಗುವುದಿಲ್ಲ. ಶಾಲೆಯ ಮಟ್ಟದಲ್ಲಿ ಪ್ರತಿಭೆಯನ್ನು ಗುರುತಿಸುವುದು, ಅದಕ್ಕೆ ಮೂರ್ತ ಸ್ವರೂಪಕೊಡುವುದು ಸರಳ. ಪ್ರತಿಭೆ, ಆಸಕ್ತಿ ಇರುವ ವಿದ್ಯಾರ್ಥಿಗಳು

ಕಲಿಯಲು ಸಿಗುತ್ತಾರೆ. ಇಲ್ಲಿ ವಿದ್ಯಾರ್ಥಿಗೆ ಕಲಿಕೆ, ಶಿಕ್ಷಕನಿಗೆ ಕಲಿಸುವಿಕೆ ಸಾರ್ಥಕವಾಗುತ್ತದೆ, ಸಾಧ್ಯವಾಗುತ್ತದೆ.

ಎಲ್ಲರಿಗೂ ಒಂದೇ ಗುಂಪಿನಲ್ಲಿ ಕಲಿಸುವುದರಿಂದ ಯಾರಿಗೆ ತಾನೇ ಪ್ರಯೋಜನ ? ಯಾಕೆಂದರೆ ಯಾವುದೇ ವಿಷಯವನ್ನು ಸಾಮಾನ್ಯವಾಗಿ (Commonly) ಹಾಗೂ ಒತ್ತಾಯದಿಂದ ಕಲಿಸಲಾಗದು. ವಿದ್ಯಾರ್ಥಿಯ ಮನೋಭೂಮಿಕೆ ಸಂಗೀತ ಕಲಿಯಲು ಫಲವತ್ತಾಗಿದ್ದಲ್ಲಿ, ಸಿದ್ಧವಿದ್ದಲ್ಲಿ ಕಲಿಕೆಯ ಪೈರು ನಾಟೀತು, ಬೆಳೆದೀತು, ಫಲ ನೀಡೀತು.

ಇಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಅದೇಂದರೆ ಸಂಗೀತ ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು.

**೧. ಆಸಕ್ತಿ ಹಾಗೂ ಪ್ರತಿಭೆ ಇರುವ ವಿದ್ಯಾರ್ಥಿಗಳು:–**

ಆಸಕ್ತಿ ಹಾಗೂ ಪ್ರತಿಭೆ ಇರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕಲಿಕೆಯ ವ್ಯವಸ್ಥೆ ಇರಬೇಕು. ಇಂಥ ಅವಕಾಶವಿದ್ದರೆ ಬೋಧನೆ ಸಾರ್ಥಕವಾಗುತ್ತದೆ. ಶಿಕ್ಷಕನಿಗೂ ಆತ್ಮತೃಪ್ತಿ ಸಿಗುತ್ತದೆ. ಅಂದಾಗ ಇಲ್ಲಿ ಸಂಗೀತ ಬೋಧನೆ ಗಂಭೀರವಾಗಿ ನಡೆಯುತ್ತದೆ. ಹೀಗಾದಾಗ ಕೆಲವು ವಿದ್ಯಾರ್ಥಿಗಳಾದರೂ ಶಾಲೆಯ ಮಟ್ಟದಲ್ಲಿ ತಯಾರಾಗಿ ಕಾಲೇಜು ಮಟ್ಟದ ಸಂಗೀತ ವ್ಯಾಸಂಗಕ್ಕೆ ಅಣಿಯಾಗಿ, ಅರ್ಹರಾಗಿ ಹೋಗುತ್ತಾರೆ. ಪ್ರಸ್ತುತ ಇದು ಆಗದೆ ಇರುವುದರಿಂದ ಅವರು ಶಾಲೆ ಮಟ್ಟದಲ್ಲಿಯೂ ತಯಾರಾಗುವುದಿಲ್ಲ. ಕಾಲೇಜಿಗೂ ಅರ್ಹರಾಗುವುದಿಲ್ಲ. ಇಂಥ ಪರಿಸ್ಥಿತಿ ಸರ್ವೇಸಾಮಾನ್ಯವಾಗಿದೆ.

**೨. ಸಾಮಾನ್ಯ ವಿದ್ಯಾರ್ಥಿಗಳು:–**

ಆಸಕ್ತ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಗಮನ ಕೊಟ್ಟು ಸಂಗೀತ ಶಿಕ್ಷಕ ಸಣ್ಣ ಪುಟ್ಟ ಹಾಡುಗಳನ್ನು, ಅಲಂಕಾರ ಸ್ವರಗಳನ್ನು ಸಣ್ಣ ಸಣ್ಣ ಶಾಸ್ತ್ರೀಯ ರಚನೆಗಳನ್ನು ಕಲಿಸಬೇಕು. ಹಾರ್ಮೋನಿಯಮನ್ನು ಸಂಗೀತವಾದ್ಯವನ್ನಾಗಿ ಬಳಸಬಹುದು. ಹಾರ್ಮೋನಿಯಮನ್ನು

ಸಾಧ್ಯವಾದ ಮಟ್ಟಿಗೆ ಕಲಿಸಬೇಕು. ಯಾಕೆಂದರೆ ಆರಂಭಿಕ ಹಂತದಲ್ಲಿ ಹಾರ್ಮೋನಿಯಂ ವಿದ್ಯಾರ್ಥಿಯ ಮಾರ್ಗದರ್ಶಿಯಾಗಿ ಸಹಾಯವಾಗುತ್ತದೆ. ಕಲಾವಿದನಾಗದೆ ಹೋದರೂ ಕಡೆಯ ಪಕ್ಷ ಆತ ಸಂಗೀತ ಪ್ರೇಮಿಯಾಗಿ ತಾಂತ್ರಿಕ ಶ್ರೋತೃವಾಗಿ ತಯಾರಾಗಬಹುದು. ತಾಂತ್ರಿಕ ಶ್ರೋತೃ ಎಂದರೆ ಸಂಗೀತದ ವೈಜ್ಞಾನಿಕ ತಿಳಿವು ಉಳ್ಳವನು ಎಂದು ಅರ್ಥ. ಕಲಾವಿದನಿಗೆ ತಾಂತ್ರಿಕ ಶ್ರೋತೃವು ಮುಖ್ಯವಾಗಿ ನಿಲ್ಲುತ್ತಾನೆ. ಅಂತಹ ಶ್ರೋತೃವಿನ ವಿಮರ್ಶಾತ್ಮಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕಲಾವಿದ ವರ್ತಿಸಬೇಕಾಗುತ್ತದೆ. ಇದು ಕಲಾವಿದನನ್ನು ಊರ್ಜಿತಗೊಳಿಸಲು ಸಹಾಯಕಾರಿಯಾಗುತ್ತದೆ.

ಸಂಗೀತವು ಶಾಲೆ–ಕಾಲೇಜುಗಳಲ್ಲಿ ಕಲಿಕೆಯ ವಿಷಯವಾಗಿ ಮಾರ್ಪಟ್ಟಿರುವುದು ಸ್ವಾಗತಾರ್ಹ. ಯಾಕೆಂದರೆ ಇಂದಿನ ಕಾಲಮಾನದಲ್ಲಿ ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಕಲಿಯಬಹುದಾದಂತಹ ಅನುಕೂಲತೆಗಳು, ಸಾಧ್ಯತೆಗಳು ಎಲ್ಲಿವೆ? ಇದ್ದರೂ ಕೂಡ ಬಹಳ ಕಡಿಮೆ. ಶಾಲೆ ಕಾಲೇಜುಗಳಲ್ಲಿ ಸಂಗೀತ ಒಂದು ವಿಷಯುವಾಗಿರುವುದರಿಂದ ಅನೇಕ ಆಸಕ್ತ ಪ್ರತಿಭೆಯಿರುವ ವಿದ್ಯಾರ್ಥಿಗಳಿಗೆ ಅದನ್ನು ಕಲಿಯಲು ಅನುಕೂಲವಾಗುತ್ತದೆ.

ಶಾಲೆ–ಕಾಲೇಜುಗಳಲ್ಲಿ ಸಂಗೀತದ ಬೋಧನೆಯನ್ನು ಎರಡು ಸ್ತರಗಳಲ್ಲಿ ನೋಡಬಹುದು.

## ೧. ಶಾಲೆಗಳಲ್ಲಿ ಸಂಗೀತ ಬೋಧನೆ :

ಶಾಲೆಗಳಲ್ಲಿ ಸಾಮಾನ್ಯವಾಗಿ ಪ್ರಾಥಮಿಕ ಹಂತದಿಂದ ಮೆಟ್ರಿಕ್ ಹಂತದವರೆಗೆ ಸುಮಾರು ಹತ್ತು ವರುಷ ಸಂಗೀತ ಕಲಿಯುವ ಅವಕಾಶ ವಿದ್ಯಾರ್ಥಿಗೆ ಲಭ್ಯವಾಗುತ್ತದೆ. ಇಷ್ಟು ಅವಧಿಯಲ್ಲಿ ಆತ ಕೆಲವು ಅಲಂಕಾರ ಸ್ವರಗಳನ್ನು, ಕೆಲವು ಲಘು ಗೀತೆಗಳನ್ನು ದೇಶಭಕ್ತಿ ಗೀತೆಗಳನ್ನು ಸರಳ ರಾಗಗಳ ಚಿಕ್ಕ ಚೀಜುಗಳನ್ನು ಕಲಿಯಬಹುದು. ವಾಸ್ತವಿಕವಾಗಿ ಹತ್ತು ವರುಷಗಳ ಕಲಿಕೆಯ ನಂತರ ಕೆಲವಾದರೂ ಬಡಾಖ್ಯಾಲಗಳನ್ನು ಹಾಡಬೇಕು ಎಂದು ನಿರೀಕ್ಷಿಸಬೇಕಾಗುತ್ತದೆ.

ಸಂಗೀತ ವಿಷಯ ಇರುವ ಶಾಲೆಗಳಲ್ಲಿ ಈಗಿನ ಪಠ್ಯಪ್ರಕಾರದಲ್ಲಿ

ವಿದ್ಯಾರ್ಥಿಗಳಿಗೆ ಸಾಮೂಹಿಕವಾಗಿ, ಅವರಿಗೆ ಆಸಕ್ತಿ, ಇರಲಿ ಬಿಡಲಿ ಸಂಗೀತ ಕಲಿಸಲಾಗುತ್ತದೆ. ಅದರ ಸಾರ್ಥಕತೆಯುನ್ನು ವಿಮರ್ಶಿಸಬೇಕಾಗುತ್ತದೆ.

ಇಲ್ಲಿ ಒಂದು ಮಹತ್ವದ ಅಭಿಪ್ರಾಯವನ್ನು ನಾನು ಮಂಡಿಸುತ್ತೇನೆ. ಶಾಲೆಯ ಮಟ್ಟದಲ್ಲಿ ಕೂಡ ಕಾಲೇಜಿನಲ್ಲಿಯಂತೆ ಸಂಗೀತವನ್ನು ಒಂದು ಐಚ್ಛಿಕ ವಿಷಯವನ್ನಾಗಿ ಮಾಡಬೇಕು.

**೨. ಸಾಮಾನ್ಯ ವಿದ್ಯಾರ್ಥಿಗಳು :–**

ಸಾಮಾನ್ಯ ವಿದ್ಯಾರ್ಥಿಗಳಿಗೆ ಅವಕಾಶವಿದ್ದು , ಸಾಮಾನ್ಯ ವಿದ್ಯಾರ್ಥಿಗಳು ಸಂಗೀತ ಬೋಧನೆಯಿಂದ ವಂಚಿತರಾಗಬಾರದೆನ್ನುವ ಉದ್ದೇಶದಿಂದ, ಹಾಗೂ ಸಂಗೀತವು ಎಲ್ಲರಿಗೂ ಊರ್ಜಿತಗೊಳಿಸಬೇಕು ಎಂಬ ಗುರಿಯಿಂದ ಸಮಾನ್ಯ ವಿದ್ಯಾರ್ಥಿಗಳಿಗೂ ತಕ್ಕ ಮಟ್ಟಿಗೆ ಸಂಗೀತದ ಸಂಸರ್ಗ, ಸಂಸ್ಕಾರ ಕೊಡುವ ವ್ಯವಸ್ಥೆಯಾಗಬೇಕು. ಇವರಿಗೆ ಸಾಧಾರಣ ಹಾಗೂ ಭಾರವೆನಿಸದ ರೀತಿಯಲ್ಲಿ ಸಂಗೀತ ಕಲಿಸಬೇಕು, ಸರಳ ಧಾಟಿಯ ಸಣ್ಣ ಸಣ್ಣ ಹಾಡುಗಳು, ಜಾನಪದ ಗೀತೆಗಳು, ದೇಶ ಭಕ್ತಿಗೀತೆಗಳು ಇನ್ನಿತರ ಹಾಡುಗಳನ್ನು ಕಲಿಸಬಹುದು. ಅವರ ಪಠ್ಯ ಪುಸ್ತಕಗಳಲ್ಲಿನ ಹಾಡುಗಳನ್ನು ಸರಳ ಧಾಟಿಯಲ್ಲಿ ಹಾಡಲು ಕಲಿಸಿದರೆ ವಿದ್ಯಾರ್ಥಿಗೆ ಉಪಯುಕ್ತತೆ ಇನ್ನೂ ಹೆಚ್ಚಾಗುತ್ತದೆ.

ಕಂಠವಿಲ್ಲದ ವಿದ್ಯಾರ್ಥಿಗಳು ಹಾಡಲು ಕಲಿಯಲು ಸಾಧ್ಯವಾಗದಿದ್ದರೂ ಅವರು ಸುಸಂಸ್ಕೃತರಾಗಲು ಸಹಾಯಕವಾಗುತ್ತದೆ. ಯಾಕೆಂದರೆ ಸಂಗೀತವು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ರೂಪಿಸುವ ಸಾಧನಗಳಲ್ಲೊಂದು.

ಕಂಠವಿಲ್ಲದ ವಿದ್ಯಾರ್ಥಿಗಳಿಗೆ ವಾದ್ಯಗಳನ್ನು ಕಲಿಸಬಹುದು. ವಿದೇಶಗಳಲ್ಲಿ ಹೆಚ್ಚಾಗಿ ಶಾಲೆಗಳಲ್ಲಿ ಸಂಗೀತ ಬೋಧನೆ ನಡೆಯುತ್ತದೆ. ಅಲ್ಲಿ Aptitude test ಮಾಡಿ ವಿದ್ಯಾರ್ಥಿಗೆ ಬೋಧನೆ ನೀಡಲಾಗುತ್ತದೆ. ಹೀಗಾದಾಗ ಆತ ಒಂದು ವಿಶಿಷ್ಟ ರಂಗದಲ್ಲಿ ಮಹತ್ವವಾದುದನ್ನು ಸಾಧಿಸಲು ಸಾಧ್ಯವಾಗುತ್ತದೆ. ಸರಳವಾಗುತ್ತದೆ.

ಆದರೆ ವಿಷಾದದ ಮಾತೆಂದರೆ ಪ್ರಸ್ತುತ ಭಾರತದ ಶಾಲೆಗಳಲ್ಲಿ ಇಂತಹ ವ್ಯವಸ್ಥೆ ಇಲ್ಲದಿರುವುದು ಕಂಡುಬರುತ್ತದೆ. ಕೆಲವೇ ಶಾಲೆಗಳಲ್ಲಿ ಸಂಗೀತ ಕಲಿಕೆ ಇದ್ದು ಅದೂ ಅನೇಕ ವಿಕಲತೆಗಳಿಂದ ನರಳುತ್ತಿದೆ.

೧. ಎಲ್ಲಾ ಶಾಲೆಗಳಲ್ಲಿ ಸಂಗೀತ ವಿಷಯ ಇಲ್ಲದಿರುವುದು.

೨. ಸಂಗೀತ ಶಿಕ್ಷಣವೆಂದರೆ ಒಂದೆರಡು ರಾಷ್ಟ್ರಭಕ್ತಿ ಗೀತೆಗಳನ್ನೋ ಒಂದೆರಡು ಹಾಡುಗಳನ್ನೋ ಕಲಿಸಿ ಕೈತೊಳೆದು ಕೊಳ್ಳುವುದು.

೩. ಸಂಗೀತ ಬೋಧನೆ ಸಫಲವಾಗಲಿ, ಸಾರ್ಥಕವಾಗಲಿ, ಯಶಸ್ವಿ ಪೂರ್ಣವಾಗಲಿ ಎಂಬ ಕಳಕಳಿ ಇಲ್ಲದಿರುವುದು.

೪. ಸಂಗೀತವನ್ನು ಸಾಮೂಹಿಕವಾಗಿ ಬೋಧಿಸುವುದು.

೫. ಸಂಗೀತ ಬೋಧನೆಗೆ ಅವಶ್ಯಕವಾದ ಸಾಧನ ಸಾಮಗ್ರಿಗಳ, ವಾದ್ಯಗಳ ಕೊರತೆ .

೬. ಎಲ್ಲಾ ಶಾಲೆಗಳಲ್ಲಿ ಸಂಗೀತ ಶಿಕ್ಷಕರಿಲ್ಲದಿರುವುದು.

**ಪರಿಹಾರಗಳು:-**

೧. ಪ್ರತಿಯೊಂದು ಶಾಲೆಯಲ್ಲಿ ಸಂಗೀತ ವಿಷಯವನ್ನು ಅಭ್ಯಾಸಕ್ಕೆ ಇಡಬೇಕು. ಹಾಗೂ ಅಲ್ಲಿ ಸಂಗೀತ ಶಿಕ್ಷಕರನ್ನು ನೇಮಿಸಬೇಕು. ಆಗ ಸಂಗೀತಗಾರನಿಗೂ ಉದ್ಯೋಗ ದೊರಕುವಂತಾಗುತ್ತದೆ.

೨. ಅವಶ್ಯಕ ಸಾಧನ ಸಾಮಗ್ರಿಗಳ ಪೂರೈಕೆಯಾಗಬೇಕು.

೩. ಸರಿಯಾದ, ಸಮಂಜಸವಾದ ಪಠ್ಯಕ್ರಮದ ರಚನೆ ಹಾಗೂ ಜಾರಿ ನಿರೂಪಣೆಯಾಗಬೇಕು,

೪. ಸರಕಾರಿ, ಖಾಸಗಿ ಎನ್ನದೆ ಎಲ್ಲಾ ಶಾಲೆಗಳಲ್ಲಿ ಸಂಗೀತ ಬೋಧನೆ ಪ್ರಾರಂಭಿಸಬೇಕು. ಯಾಕೆಂದರೆ ಸಂಗೀತವು ಈ ಸೃಷ್ಟಿಯ ಸಮಸ್ತ ಜೀವಕ್ಕೆ ಬೇಕಾದ, ಮನಸ್ಸನ್ನು ಹೊಗ್ಗುವ ಕಲೆ.

ಶಾಲಾ ಮಟ್ಟದಲ್ಲಿ ಒಂದು ವೇಳೆ ವಿದ್ಯಾರ್ಥಿಗೆ ಸಂಗೀತ ಬೋಧನೆಯಾದರೆ ಮೆಟ್ರಿಕ್ ತನಕ(ಪ್ರಾರಂಭಿಕ) ತಕ್ಕಮಟ್ಟಿಗೆ ಆತ ಕಲಿಯುತ್ತಾನೆ. ಕಾಲೇಜಿಗೆ ಅರ್ಹನಾಗುತ್ತಾನೆ.

**ಕಾಲೇಜು ಮಟ್ಟ :–**

ಶಾಲೆಯಲ್ಲಿ ತಯಾರಾಗಿ ಬಂದರೆ ವಿದ್ಯಾರ್ಥಿ ಪಿ.ಯು.ಸಿಯಲ್ಲಿ ಸಂಗೀತ ಕಲಿಯುವ ಅರ್ಹತೆಯನ್ನು ಸಲೀಸಾಗಿ ಪಡೆಯುತ್ತಾನೆ. ಈಗಿರುವ ಪಿ.ಯು.ಸಿ.ಯಲ್ಲಿನ ಸಂಗೀತ ಪಠ್ಯ ಕ್ರಮವು ಕೂಡ, ವಿದ್ಯಾರ್ಥಿ ಮೆಟ್ರಿಕ್‌ವರೆವಿಗೆ ಸಂಗೀತ ಕಲಿತಿದ್ದಾನೆ ಎಂಬ ಗ್ರಹಿಕೆಯಿಂದ ರಚಿತವಾಗಿದೆ. ಅಂದರೆ ಪಿ.ಯು.ಸಿ. ಯ ಪ್ರತಿಯೊಂದು ವರ್ಷದಲ್ಲಿ ಐದಾರು ರಾಗಗಳ ಲಕ್ಷಣ ಗೀತೆಗಳ ಲಘು ಗೀತೆಗಳ ಪಠ್ಯಕ್ರಮ ಇದೆ. ೪೦% ಶಾಸ್ತ್ರ ಹಾಗೂ ೬೦% ಪ್ರಯೋಗ ಅಭ್ಯಾಸಕ್ಕೆ ಇವೆ.

ಒಂದು ವೇಳೆ ಶಾಲೆಯ ಮಟ್ಟದಲ್ಲಿ ವಿದ್ಯಾರ್ಥಿಗೆ ಸಂಗೀತದ ಬೋಧನೆಯಾಗಿರದಿದ್ದರೆ ಪಿ.ಯು.ಸಿ.ಯಲ್ಲಿ ಒಮ್ಮೆ ರಾಗಗಳ ಕಲಿಕೆ ವಿದ್ಯಾರ್ಥಿಗೆ, ಬೋಧನೆ ಶಿಕ್ಷಕನಿಗೆ ಹೊರೆಯಾಗಿ ಬಿಡುತ್ತದೆ.

**ವಿದ್ಯಾರ್ಥಿಗಳ ಸಂಖ್ಯೆಯ ನಿಗದಿ :–**

ಒಂದು ವಿಷಯಕ್ಕೆ ಇಷ್ಟು ವಿದ್ಯಾರ್ಥಿಗಳು ಇರಬೇಕು ಎಂದು ಸಂಖ್ಯೆಯನ್ನು ನಿಗದಿತ ಗೊಳಿಸುವುದರಿಂದ ಇನ್ನೊಂದು ತೊಂದರೆ ಉಂಟಾಗುತ್ತದೆ. ಪ್ರತಿಯೊಂದು ವಿಷಯದಲ್ಲಿ ಇಂತಿಷ್ಟು ವಿದ್ಯಾರ್ಥಿಗಳು ಇರಲೇಬೇಕು ಎಂಬ ನಿಯಮವಿದೆ. ಇದರಿಂದ ನಿಗದಿತ ಸಂಖ್ಯೆಯನ್ನು ಪೂರ್ಣಗೊಳಿಸುವ ಸಲುವಾಗಿ ವಿದ್ಯಾರ್ಥಿಗೆ, ಪ್ರತಿಭೆ ನೋಡಿ ಪ್ರವೇಶ ಕೊಡುವುದು ಕಷ್ಟವಾಗುತ್ತದೆ. ಪ್ರತಿಭೆ ಅಥವಾ ಕಲಾವಿದನಾಗುವ ಭರವಸೆ ಇರಲಿ, ಬಿಡಲಿ ಅಷ್ಟು ವಿದ್ಯಾರ್ಥಿಗಳನ್ನು ತುಂಬಬೇಕಾಗುತ್ತದೆ.

ಬೇರೆ ವಿಷಯಗಳ ಹಾಗೆ ಸಂಗೀತಕ್ಕೆ ಈ ನಿಯಮವನ್ನು ಕಡ್ಡಾಯಗೊಳಿಸಬಾರದು. ಯಾಕೆಂದರೆ ಸಂಗೀತ ಎಲ್ಲರಿಗೂ ಸರ್ವಸಾಮಾನ್ಯವಾಗಿ ಬರುವಂತಹ ಕಲೆಯಲ್ಲ. ಪ್ರತಿಭೆಯಿರುವ ಎಷ್ಟೇ ವಿದ್ಯಾರ್ಥಿಗಳು ಬರಲಿ, ಕನಿಷ್ಠ ಗರಿಷ್ಠ ಸಂಖ್ಯೆಯೆನ್ನದೆ ಸಂಗೀತವನ್ನು

ಬೋಧನೆಗೆ ಕೊಡಬೇಕು. ಹೀಗಾಗದೆ ಹೋದರೆ ಕಲಿಯಬೇಕೆನ್ನುವ ಹಂಬಲವಿದ್ದ ಒಬ್ಬನೇ ವಿದ್ಯಾರ್ಥಿ ಅಕಸ್ಮಾತ್ ಬಂದರೆ ಅವನು ಅಗಣ್ಯನಾಗುತ್ತಾನೆ. ಸಂಗೀತ ಕಲಿಕೆಯಿಂದ ವಂಚಿತನಾಗುತ್ತಾನೆ. ಒಬ್ಬನಿದ್ದರೂ, ಹೆಚ್ಚಿಗಿದ್ದರೂ ಶಿಕ್ಷಣವು ತನ್ನದೇ ರೀತಿಯಲ್ಲಿ ಸಾಗುವಂತಹ ಆದರ್ಶವುಳ್ಳದ್ದಾಗಿದೆ.

**ಸಂಗೀತದ ವಾತಾವರಣದ ನಿರ್ಮಾಣ:-**

ಶಾಲೆ ಕಾಲೇಜುಗಳಲ್ಲಿ ಸಂಗೀತ ಬೋಧನೆ ಒಂದು ವಿಷಯವಾಗಿರುವುದರ ಜತೆಗೆ ಅಲ್ಲಿ ಸಂಗೀತದ ವಾತಾವರಣ ನಿರ್ಮಾಣವಾಗಬೇಕಾದುದು ಅತ್ಯಾವಶ್ಯಕ.

ಈ ದಿಸೆಯಲ್ಲಿ ಕೆಲವು ಸೂತ್ರಗಳನ್ನು ಮಂಡಿಸುತ್ತೇನೆ.

೧. ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಅವರ ಸಮ್ಮುಖದಲ್ಲಿ ಸಾಕಷ್ಟು ಸಂಗೀತ ಸಭೆಗಳನ್ನು ಏರ್ಪಡಿಸುವುದು. ಕಛೇರಿ ಸಂಗೀತ ಕೇಳಿ ವಿದ್ಯಾರ್ಥಿಗಳಿಗೆ ಸಂಗೀತದ ಪ್ರಭಾವ, ಕಲ್ಪನೆ, ಚಿತ್ರಣ, ಅನುಕರಣೆ, ಆಸಕ್ತಿಗಳು ಉಂಟಾಗುತ್ತವೆ.

೨. ಶ್ರವಣ ವರ್ಗಗಳು :-(Listening hours): ಬೋಧನೆಯ ವರ್ಗಗಳ ಜತೆಗೆ ವಾರಕ್ಕೆ ಒಂದರಂತೆ ವಿದ್ಯಾರ್ಥಿಗೆ ಧ್ವನಿಸುರುಳಿ, ಟಿ.ವಿ. ಸಂಗೀತ ಸಭೆ, ಶಿಕ್ಷಕನ ಹಾಡುಗಾರಿಕೆ ಇಷ್ಟನ್ನು ಕೇಳಿಸಬಹುದು, ಇದರಿಂದ ವಿದ್ಯಾರ್ಥಿಗೆ ಅನುಕರಣ ಸುಲಭಸಾಧ್ಯವಾಗುತ್ತದೆ. ಕಲಿಕೆಯ ಪ್ರಾಥಮಿಕದಲ್ಲಿ ಅನುಕರಣವು ಸಹಜವಾಗಿರುತ್ತದೆ.

ಅರಿಸ್ಟಾಟಲನ ಪ್ರಕಾರ "ಅನುಕರಣವು ಮನುಷ್ಯನಿಗೆ ಬಾಲ್ಯದಿಂದಲೂ ಸ್ವಾಭಾವಿಕವಾದುದು. ಅವನು ಪ್ರಪಂಚದಲ್ಲಿ ಶ್ರೇಷ್ಠ ಅನುಕಾರಿ ಪ್ರಾಣಿ. ಅವನು ವಿಷಯಗಳನ್ನು ಕಲಿಯುವುದಕ್ಕೆ ಮೊದಲು ಮಾಡುವುದು ಅನುಕರಣೆ ಮೂಲಕವೇ. ಅಲ್ಲದೆ ಅನುಕೃತ ವಸ್ತುಗಳಲ್ಲಿ ಪಡುವ ಸಂತೋಷವು ಎಲ್ಲರಿಗೂ ಸಹಜವಾದುದು."

೩. ತಾಲೀಮು ವರ್ಗಗಳು :- (Practising hours)

ವಿದ್ಯಾರ್ಥಿಗಳು ಇಲ್ಲಿ ಬರೀ ತಾಲೀಮು ಮಾಡಬೇಕು. ಶಿಕ್ಷಕನು ಅವರ ಸಮ್ಮುಖದಲ್ಲಿದ್ದು ಸೂಕ್ತ ಸಲಹೆಗಳನ್ನು ನೀಡುತ್ತಾ, ತಪ್ಪಿದ್ದಲ್ಲಿ ತಿದ್ದಿ ಸರಿಪಡಿಸುತ್ತಾ, ಹೆಚ್ಚಿನದನ್ನು ಬೋಧಿಸುತ್ತಾ ಹೋಗುವ ವ್ಯವಸ್ಥೆಯಾಗಬೇಕು. ಅಂದಾಗ ವಿದ್ಯಾರ್ಥಿಗಳಿಗೆ ತಾವು ಹೇಗೆ ತಮ್ಮ ಕಲೆಯನ್ನು ಅಭಿವ್ಯಕ್ತಗೊಳಿಸಬೇಕು ಎಂಬ ಕಲ್ಪನೆ ಬರತೊಡಗುತ್ತದೆ.

ಕಾಲೇಜುಗಳಲ್ಲಿ ಸಂಗೀತ ವಿಷಯದ ಪರೀಕ್ಷೆ ನಡೆಯುತ್ತದೆ. ಆದರೆ ಶಾಲೆಯ ಮಟ್ಟದಲ್ಲಿ ಇದಿಲ್ಲ. ಇದು ದೋಷಪೂರ್ಣ. ಪರೀಕ್ಷೆಗೆ ಇರದ ವಿಷಯದ ಬಗ್ಗೆ ವಿದ್ಯಾರ್ಥಿ ಎಷ್ಟು ಗಂಭೀರವಾಗಿ ಚಿಂತಿಸಬಲ್ಲ ಎಂಬುದು ಪ್ರಶ್ನೆ . ಪರೀಕ್ಷೆಗೆ ಇಲ್ಲದಿದ್ದರೂ ಸಂಗೀತವನ್ನು ಕಲಿಯಬೇಕು ಎನ್ನುವುದರ ಉದ್ದೇಶ ಆದರ್ಶ ಪ್ರಾಯವಾಗಿದ್ದರೂ ಕೂಡ ಅದು ಸಫಲವಾಗುತ್ತದೆಯೇ? ಪರೀಕ್ಷೆಗೆ ಇಲ್ಲದ ವಿಷಯ ನಗಣ್ಯವಾಗುವ ಅಪಾಯವುಂಟು. ಆದುದರಿಂದ ಶಾಲೆಯ ಮಟ್ಟದಲ್ಲಿ ಸಂಗೀತವನ್ನು ಪರೀಕ್ಷೆಯ ವಿಷಯವನ್ನಾಗಿ ಪರಿವರ್ತಿಸಬೇಕು. ಪರೀಕ್ಷೆಯನ್ನು ಸರಳೀಕೃತಗೊಳಿಸಿದರೂ ನಡೆಸಬೇಕು. ಅಂಕಗಳನ್ನು ಅಥವಾ ಶ್ರೇಣಿ ಕೂಡಬೇಕು. ಅಂದರೆ ವಿದ್ಯಾರ್ಥಿಗಳಿಗೆ ತಮ್ಮ ಫಲಿತಾಂಶ ತಿಳಿಯವುದರಿಂದ, ಅವರಿಂದ ಗುಣಾತ್ಮಕ ಪ್ರತಿಕ್ರಿಯೆ ದೊರಕುತ್ತದೆ. ಇದರಿಂದ ಸಂಗೀತ ಬೋಧನೆ ಹಾಗೂ ಕಲಿಕೆ ಹೆಚ್ಚು ಫಲಪ್ರದವಾಗುತ್ತದೆ. ಕೇಂದ್ರ ಸರಕಾರದಿಂದ ನಡೆಯುವ ಎಲ್ಲಾ ಶಾಲೆಗಳಲ್ಲಿ ಸಂಗೀತ ವಿಷಯದ ಬೋಧನೆ ನಡೆಯುತ್ತದೆ. ಹಾಗೂ ಅಲ್ಲಿ ಆ ವಿಷಯದಲ್ಲಿ ಪರೀಕ್ಷೆಯನ್ನು ಕೂಡ ತೆಗೆದುಕೊಳ್ಳಲಾಗುತ್ತದೆ. ಹಾಗೂ ಫಲಿತಾಂಶವನ್ನು ಅಂಕಗಳ ಅಥವಾ ಶ್ರೇಣಿಗಳ ಮುಖಾಂತರ ನೀಡಲಾಗುತ್ತದೆ.

ಇದು ಅತ್ಯಂತ ಪ್ರಶಂಸನೀಯ ಹಾಗೂ ಸಾರ್ಥಕ ಕೆಲಸ. ವಿದ್ಯಾರ್ಥಿ ಎಷ್ಟೇ ಕಲಿಯಲಿ, ಪರೀಕ್ಷೆಯ ಲಗಾಮು ಇರುವುದರಿಂದ ವಿಷಯಕ್ಕೆ ಗಂಭೀರತೆ ಬರುತ್ತದೆ.

## ಕಾಲೇಜು ಮಟ್ಟದಲ್ಲಿ ಸಂಗೀತ ಭೋಧನೆ:-

ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಿ.ಯು.ಸಿ.ಯಿಂದ ಪದವಿಯವರೆಗೆ ವಿದ್ಯಾರ್ಥಿಯು ಐದು ವರುಷ ಸಂಗೀತ ಕಲಿಯಲು

ಸಾಧ್ಯವಾಗುತ್ತದೆ. ಶಾಲೆಯಲ್ಲಿ ಸುಮಾರು ಹತ್ತು ಅಥವಾ ಐದು ವರುಷ ಹಾಗೂ ಕಾಲೇಜಿನಲ್ಲಿ ಐದು ವರುಷ ಕಲಿತ ವಿದ್ಯಾರ್ಥಿಯು ಕಲಾವಿದನಾಗಿ ರೂಪುಗೊಳ್ಳಲೇಬೇಕು. ಯಾಕೆಂದರೆ ಇಷ್ಟು ಅವಧಿ ಸಣ್ಣದೇನಲ್ಲ. ಬೇಕಾದ್ದನ್ನು ಸಾಧಿಸಬಹುದಾದ ದೀರ್ಘ ಅವಧಿ ಇದು.

ಇದರ ಮುಂದುವರಿಕೆಯಾಗಿ ಸ್ನಾತಕೋತ್ತರ ಅಧ್ಯಯನವನ್ನು ಸಂಗೀತದಲ್ಲಿ ಮಾಡಿದರೆ ಆ ವಿದ್ಯಾರ್ಥಿ ಕಲಾವಿದನಾಗಿ ಹೊರ ಬರುವನು. ಅನಿವಾರ್ಯ ಹಾಗೂ ಅವಶ್ಯಕ ಉದಾಹರಣೆಗೆ ಕೆ.ವಿ.ವಿ. ಸ್ನಾತಕ ಅಧ್ಯಯನದಲ್ಲಿ ಸಂಗೀತವು ಗುರುಕುಲ ಪದ್ಧತಿಯಲ್ಲಿ ನಡೆಯುತ್ತದೆ. ದಿ||ಮಲ್ಲಿಕಾರ್ಜುನ ಮನ್‌ಸೂರ್‌ರರು ಅಂತಹ ಮೂರ್ತ ಸ್ವರೂಪವನ್ನು ಸಂಗೀತ ವಿಭಾಗಕ್ಕೆ ತಂದುಕೊಟ್ಟರು. ಅಲ್ಲಿ ಪದವಿ ಪಡೆದ ಬಹುತೇಕ ವಿದ್ಯಾರ್ಥಿಗಳು ಕಲಾವಿದರಾಗಿಯೇ ಹೊರಬರುತ್ತಾರೆ.

ಆದರೆ ಶಾಲೆಗಳಲ್ಲಿ ಸಂಗೀತ ಶಿಕ್ಷಣದ ದುರ್ಬಲ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಸಂಗೀತವನ್ನು ಅಭ್ಯಾಸಕ್ಕೆ ಆರಿಸುತ್ತಾರೆ. ಇಲ್ಲಿ ಪಠ್ಯಕ್ರಮದ ವಿಚಾರ ಚಿಂತಿಸಬೇಕಾದ್ದಾಗಿದೆ. ಸಾಮಾನ್ಯವಾಗಿ ಕಾಲೇಜು ಮಟ್ಟದ ಪಠ್ಯಕ್ರಮವನ್ನು ಶಾಲೆಯಲ್ಲಿನ ಸಂಗೀತ ಪಠ್ಯಕ್ರಮದ ಮುಂದುವರಿಕೆಯಾಗುವಂತೆ ಅಂದರೆ ಉನ್ನತ ವ್ಯಾಸಂಗ ಎಂದು ಗ್ರಹಿಸಿ ತಯಾರಿಸಲಾಗುತ್ತದೆ. ಆದರೆ ವಿದ್ಯಾರ್ಥಿಗಳಿಗೆ ಶಾಲೆಯ ಮಟ್ಟದಲ್ಲಿ ಸಂಗೀತ ಶಿಕ್ಷಣವು ಎಷ್ಟು ಪ್ರಮಾಣದಲ್ಲಿ ಆಗಿರಬೇಕಾಗಿತ್ತೋ ಅಷ್ಟಾಗಿರುವುದಿಲ್ಲ. ಕಾಲೇಜುಮಟ್ಟದ ವಿದ್ಯಾರ್ಥಿಗೆ ಹೊರಲು ಸಾಧ್ಯವಾಗದ ಹೊರೆಯನ್ನು ಹೇರಿದಂತಾಗುತ್ತದೆ. ಅಂದರೆ ಕಾಲೇಜು ಮಟ್ಟದಲ್ಲಿ ಕಠಿಣ, ಕ್ಲಿಷ್ಟ ರಾಗಗಳು ಅವುಗಳಲ್ಲಿ ಬಡಾ ಖ್ಯಾಲ, ಉತ್ತಮ ಗಾಯಕಿ ಇಟ್ಟಿರುತ್ತಾರೆ. ಇದೆಲ್ಲ ಆ ವಿದ್ಯಾರ್ಥಿಗೆ ಒಮ್ಮೆಲೇ ಬಂದೆರಗುವ ಆಪತ್ತಿನಂತೆ ಗೋಚರವಾಗುತ್ತದೆ.

ಇಲ್ಲಿ ಬಂದು ಗೊಂದಲಮಯ ಹಾಗೂ ಬಗೆಹರಿಸಲಾಗದೇನೋ ಎಂಬಂಥ ಜಟಿಲ ಸಮಸ್ಯೆ ತಲೆದೋರುತ್ತದೆ. ಅದೆಂದರೆ ಶಾಲೆಯ ಮಟ್ಟದಲ್ಲಿ ಸಂಗೀತ ಕಲಿತಿದ್ದಾರೆಂಬ ಗ್ರಹಿಕೆಯಿಂದ ಕಾಲೇಜು ಪಠ್ಯಕ್ರಮ ತಯಾರಿಸಬೇಕೋ ಅಥವಾ ಪ್ರಾರಂಭಿಕ, ಸರಳ ಪಠ್ಯಕ್ರಮವನ್ನು

ಇಡಬೇಕೋ.

ಪ್ರಸ್ತುತ ಸಂದರ್ಭದಲ್ಲಿ ಕಾಲೇಜು ಮಟ್ಟದಲ್ಲಿ ಸಂಗೀತ ವಿಷಯದ ಬೋಧನೆ ಅನೇಕ ಕೊರತೆಗಳನ್ನು, ಸಮಸ್ಯೆಗಳನ್ನು ಅಲ್ಪ ಸ್ವಲ್ಪ ಸಾರ್ಥಕತೆಗಳನ್ನು ಹೊಂದಿದೆ.

೧. ಕೆಲವೇ ಕಾಲೇಜುಗಳಲ್ಲಿ ಸಂಗೀತ ಕಲಿಯುುವ ಅವಕಾಶವಿರುವುದು.

೨. ಎಲ್ಲಾ ಸರಕಾರಿ ಕಾಲೇಜುಗಳಲ್ಲಿ ಸಂಗೀತ ವಿಷಯ ಇಲ್ಲದಿರುವುದು. ಕೆಲವು ಆಸಕ್ತ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸಂಗೀತ ವಿಷಯ ಇದೆ.

೩. ವಿದ್ಯಾರ್ಥಿಗಳ ಸಂಖ್ಯೆಯು ನಿಗದಿಯುನ್ನು ಕಾಯ್ದುಕೊಳ್ಳುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಂಗೀತ ವಿಭಾಗಕ್ಕೆ ಸೇರಿಸುವುದು.

೪. ಸಿಬ್ಬಂದಿಯ ಕೊರತೆ.

೫. ಸಾಥಿದಾರರ ಕೊರತೆ.

ಕಾಲೇಜಿನ ಪಠ್ಯ ಹಾಗೂ ಪ್ರಾತ್ಯಕ್ಷಿಕೆ ಶಾಲೆಯಲ್ಲಿನದಕ್ಕಿಂತ ಭಿನ್ನವಿರುತ್ತದೆ. ಇಲ್ಲಿ ವಿದ್ಯಾರ್ಥಿಯು ಬಡಾಖ್ಯಾಲ, ಛೋಟಾಖ್ಯಾಲ, ಆಲಾಪ, ತಾನ, ಬಥತ್, ಬೋಲತಾನ ಸಮೇತ ಹಾಡಲು ಕಲಿಯಬೇಕಾಗುತ್ತದೆ. ಈಗ ಅವನಿಗೆ ತಾಳದ ಮಹಿಮೆ, ಪರಿಕಲ್ಪನೆ ಅತ್ಯಾವಶ್ಯಕವಾಗಿರುತ್ತದೆ. ಅಂದರೆ ಪಕ್ಕವಾದ್ಯದ ಸಂಗಡ ಅವನ ರಿಯಾಜ ನಡೆಯಬೇಕಾಗುತ್ತದೆ. ಇದಕ್ಕಾಗಿ ಪಕ್ಕವಾದ್ಯಗಾರರ ಅಗತ್ಯ ಇದೆ. ಅನೇಕ ಕಾಲೇಜುಗಳಲ್ಲಿ ಪಕ್ಕವಾದ್ಯಗಾರನ ಹುದ್ದೆಯಿಲ್ಲ. ಪಕ್ಕವಾದ್ಯಗಾರನಿಲ್ಲದೆ ಸಂಗೀತ ಶಿಕ್ಷಣ ಹೇಗೆ ನಡೆಯಲು ಸಾಧ್ಯ?

ಇಂದು ಶಾಲೆ ಕಾಲೇಜುಗಳಲ್ಲಿ ಸಂಗೀತ ಬೋಧನೆ ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತೇವೆ. ಇಂತಹ ಅನೇಕ ಸಮಸ್ಯೆಗಳನ್ನು ನಿವಾರಿಸಬೇಕಾಗಿದೆ.

ಈ ದಿಸೆಯಲ್ಲಿ ಖಾಸಗಿ ಸಂಸ್ಥೆಗಳ, ಸರಕಾರದ ಪ್ರಯತ್ನ,

ಕಾಳಜಿಗಳು ಅವಶ್ಯಕ. ಸರಕಾರವು ಎಲ್ಲಾ ಸರಕಾರೀ ಶಾಲೆ ಕಾಲೇಜುಗಳಲ್ಲಿ ಸಂಗೀತವನ್ನು ಆರಂಭಿಸಬೇಕು. ಖಾಸಗಿ ಸಂಸ್ಥೆಗಳಿಗೆ ಸುತ್ತೋಲೆ ಕಳುಹಿಸಿಯಾದರೂ ಸಂಗೀತ ಆರಂಭಿಸಲು ಸೂಚಿಸಬೇಕು. ಹೀಗಾದರೆ ಸಂಗೀತವು ಕೇಂದ್ರೀಕೃತವಾಗದೆ ಸಾರ್ವತ್ರಿಕವಾಗುತ್ತದೆ.

ಇಂದಿನ ಬೇಕುಗಳಾದ ಶಾಂತಿ, ಕೋಮುಸೌಹಾರ್ದತೆ ಅಹಿಂಸೆ, ಸುಸಂಸ್ಕೃತಿ, ನೈತಿಕತೆ ಇತ್ಯಾದಿ ಸದ್ಗುಣಗಳನ್ನು ಜಗತ್ತಿನಲ್ಲಿ ಪ್ರತಿಷ್ಠಾಪಿಸಲು ಸಂಗೀತ ಸಹಾಯಕಾರಿಯಾಗಬಹುದು.

ಅರಿಸ್ಟಾಟಲನ ಪ್ರಕಾರ "ಲಲಿತ ಕಲೆಗಳೂ ಕೂಡ ತತ್ವಶಾಸ್ತ್ರದಂತೆಯೇ ಸತ್ಯಾನ್ವೇಷಿಗಳು. ಲಲಿತ ಕಲೆಗಳ ಏಕೋದ್ದೇಶ ಆನಂದ".

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ
ಪ್ರತಿಷ್ಠಿತ ಪ್ರಕಟಣೆ

# ನಾದ ನೃತ್ಯ

ಪತ್ರಿಕೆಗೆ ಚಂದಾದಾರರಾಗಿರಿ